ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೯ - ೮ - ೪೯



ಬೆಲೆ ಎರಡಾಣೆ



ಅಬೂ ಪರ್ವತದ ಜಿನನಾಥ ದೇವಾಲಯದ ಒಳನೋಟ

Karmaveer KANNADA ILLUSTRATED WEEKLY

ಮುಖಪತ್ರದಲ್ಲಿ

ಭಾರತದಲ್ಲಿ ದೇಶವಿದೇಶಗಳ ಪ್ರವಾಸಿಕರ ಮನಸೆಳೆಯುವ ಅನೇಕ ಪ್ರಾಕೃತಿಕ ಸೌಂದರ್ಯದ ಮತ್ತು ಮಾನವಕೌಶಲ್ಯದ ಸ್ಥಾನಗಳಿವೆ. ಅತ್ಯಂತ ಪ್ರಾಚೀನ ಕಾಲದಿಂದ ಇಂದಿನ ವರೆಗಿನ ಸಂಸ್ಕೃತಿಯ ಹರಿಗಡಿಯದ ಧಾರೆಯನ್ನು ಇಲ್ಲಿ ಕಾಣಬಹುದು. ನಮ್ಮ ಅಸಂಖ್ಯ ದೇವಾಲಯಗಳು ಶಿಲ್ಪಕಲಾ ಕೌಶಲದ ಅದ್ಭುತ ಮಾದರಿಗಳಾಗಿ ಇಂದಿಗೂ ತಲೆಯೆತ್ತಿ ನಿಂತಿವೆ. ನಮ್ಮ ಪ್ರಾಚೀನ ಸಂಸ್ಕೃತಿಯ ಬಗ್ಗೆ ನಮ್ಮಲ್ಲಿ ಆದರವನ್ನುಂಟು ಮಾಡುವ ಮೂಲಕ ಹೊಸ ಉತ್ಸಾಹವನ್ನು ಮಾತ್ರವಲ್ಲದೆ ಹೊರಗಿನಿಂದ ಬರುವ ಪ್ರವಾಸಿಗಳನ್ನು ಆಕರ್ಷಿಸಿ ನಮ್ಮ ಬಗ್ಗೆ ಅವರಲ್ಲಿ ಗೌರವವನ್ನೂ ಇವು ಉಂಟು ಮಾಡುತ್ತವೆ. ನಮ್ಮ ವೀರಾಗ್ರಣಿಗಳಾದ ರಜಪೂತರ ಇತಿಹಾಸ ಸಾಹಸಗಳಲ್ಲಿ ಹಾಸು ಹೊಕ್ಕಾದ ಅಬು ಪರ್ವತದ ಹೆಸರನ್ನು ಯಾರು ಕೇಳಿಲ್ಲ? ರಜಪುತಸ್ಥಾನದ ಹೊರವಲಯದಲ್ಲಿ ಉದಯಪುರದ ಪಶ್ಚಿಮಕ್ಕೆ ಐದೂವರೆ ಸಾವಿರ ಅಡಿ ಎತ್ತರಕ್ಕೆ ತಲೆಯೆತ್ತಿನಿಂತ ಈ ಪರ್ವತದಲ್ಲಿ ಶತಮಾನಗಳ ಹಿಂದೆ ಕಟ್ಟಲ್ಪಟ್ಟ ಈ ದಿಲವಾರ ಜೈನ ದೇವಾಲಯದಲ್ಲಿ ಅತ್ಯಂತ ಸೂಕ್ಷ್ಮವೂ ಮನೋಹರವೂ ಆದ ಶಿಲ್ಪ ಸೌಂದರ್ಯವನ್ನು ಕಾಣಬಹುದು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಳೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣ್ಣಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ ಸಂಚಿಕೆ

ಕರ್ಮವೀರ

ಸೋಮವಾರ ಭಾದ್ರಪದ ಶು. ೬

ತಾರೀಕು ೨೯—೮—೧೯೪೯

ಕಾಶ್ಮೀರ ಸಮಸ್ಯೆಯಲ್ಲಿ ಮತ್ತೆ ತೊಡಕು

ಕಾಶ್ಮೀರ ಪ್ರಶ್ನೆಯಲ್ಲಿ ಗಡಿ ರೇಷೆಯ ಬಗ್ಗೆ ಹಿಂದ-ಪಾಕ ಸರಕಾರಗಳಲ್ಲಿ ಒಮ್ಮತವಾದ ಸುದ್ದಿಯನ್ನು ಓದಿದಾಗ ಅನೇಕರು ಹರ್ಷಭರಿತರಾಗಿದ್ದರು. ಇನ್ನು ಮೇಲೆ ಈ ಪ್ರಶ್ನೆಯ ಇತ್ಯರ್ಥ ಬೇಗ ಆಗಬಹುದೆಂದೂ ಅನೇಕರು ಆಸಿಸಿದರು. ಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಗಳಾದ ಟ್ರಿಗ್ವೆ ಲೀಯವರು ಕೂಡ ಕಳೆದ ಹನ್ನೆರಡು ತಿಂಗಳುಗಳಲ್ಲಿ ಆಗಬಹುದಾಗಿದ್ದ ದೊಡ್ಡ ಯುದ್ಧವೊಂದನ್ನು ತಡೆಯಲು ಸಂಘವು ಸಮರ್ಥವಾಯಿತೆಂದು ಬೆನ್ನು ಚಪ್ಪರಿಸಿಕೊಂಡಿದ್ದರು. ಆದರೆ ಕಾಶ್ಮೀರ ಪ್ರಶ್ನೆಯನ್ನು ಸಂಪೂರ್ಣವಾಗಿ ಬಿಡಿಸುವುದೆ ಯುಕ್ತರಾಷ್ಟ್ರ ಸಂಘದ ಯಶಸ್ಸಿನ ಒರೆಗಲ್ಲು ಎಂದು ಅನೇಕ ಪತ್ರಿಕೆಗಳು ರಾಜಕಾರಣಿಗಳು ಅಭಿಪ್ರಾಯಪಟ್ಟಿದ್ದರು ಅಂದು ಅಷ್ಟೊಂದು ಸಂತೋಷ ಪ್ರದರ್ಶಿಸಿದ ಯುಕ್ತ ರಾಷ್ಟ್ರಸಂಘದ ಕಾರ್ಯದರ್ಶಿಗಳು ಇಂದು ಈ ಪ್ರಶ್ನೆಯಲ್ಲಿ ಉಂಟಾದ ತೊಡಕನ್ನು ನೋಡಿ ನಿರಾಸೆಯ ನಿಟ್ಟುಸಿರನ್ನು ಬಿಡುತ್ತಿರಲು ಸಾಕು ಯುಕ್ತ ರಾಷ್ಟ್ರ ಸಂಘದವರು ಮೊದಲಿನಿಂದಲೂ ಪಾಕಿಸ್ತಾನಕ್ಕೆ ಸವಲತ್ತುಗಳನ್ನೆ ಕೊಡುತ್ತ ನಡೆದದ್ದರ ಪರಿಣಾಮವಾಗಿ ಇಂದು ಆ ಸರಕಾರವು ಅವರ ತಲೆಯ ಮೇಲೆಯೆ ಮೆಣಸು ಅರೆಯಲು ಪ್ರಾರಂಭಿಸಿರುವದು. ತನ್ನ ಭೂಮಿಕೆಯನ್ನು ಅದು ಸಮಯ ಬಂದಂತೆ ಬದಲಿಸುತ್ತ ನಡೆದಿದೆ. ಕಾಶ್ಮೀರಲ್ಲಿಯ ಅಜಾದ ಕಾಶ್ಮೀರ ಸೈನ್ಯಕ್ಕೆ ತನ್ನದೇನೂ ಸಂಬಂಧವಿಲ್ಲವೆಂದು ಮೊದಲಿನಿಂದಲೂ ಘಂಟಾಘೋಷವಾಗಿ ಸಾರುತ್ತ ಬಂದ ಪಾಕಿಸ್ತಾನ ಸರಕಾರವು ಇಂದು ಅದು ತನ್ನ ಸೈನ್ಯದ ಒಂದು ಭಾಗವೇ ಎಂದು ಸಮರ್ಥಿಸಿಕೊಳ್ಳಹತ್ತಿದೆ— ಪಾಕಿಸ್ತಾನ ಸರಕಾರದ ನೇತೃತ್ವದಲ್ಲಿಯೆ ಅಜಾದ ಕಾಶ್ಮೀರ ಸೈನ್ಯವು ಇಷ್ಟೊಂದು ಉಪದ್ವ್ಯಾಪ ನಡೆಸಿದೆ. ಒಡಂಬಡಿಕೆಯ ಮಾತುಕತೆಗಳನ್ನು ಪ್ರಾರಂಭಿಸುವ ಮೊದಲು ಅದನ್ನು ವಿಸರ್ಜಿಸಿ ಬಿಡುವದು, ಇಲ್ಲವೆ ಅದು ನಡೆಸಿದ ಪುಂಡತನಕ್ಕೆ ಅರೆದಾಳ ಬಡೆಯುವದು ಅವಶ್ಯವೆಂದು ಹಿಂದುಸ್ತಾನ ಸರಕಾರದವರು ಯುಕ್ತ ರಾಷ್ಟ್ರಸಂಘದ ಸಮಿತಿಗೆ ಎಷ್ಟೊಂದು ಪ್ರತಿಭಟನಾರೂಪವಾಗಿ ಹೇಳಿದರೂ ಅವರು ಆಗ ಅತ್ತ ಕಿವಿ ಗೊಡಲಿಲ್ಲ. ಸಮಿತಿಯವರು ತಮ್ಮ ಸೂಚನೆಗಳಂತೆ ನಡೆಯಲೇಬೇಕೆಂದು ಪಾಕಿಸ್ತಾನ ಸರಕಾರವನ್ನು ಒತ್ತಾಯ ಪಡಿಸುವದು ಅವಶ್ಯವೆನಿಸುತ್ತದೆ. ಕಾಶ್ಮೀರಲ್ಲಿ ಶಾಂತಿಯು ಪ್ರಸ್ಥಾಪಿತವಾಗಿ, ಕಾಶ್ಮೀರ ಪ್ರಶ್ನೆ ಒಮ್ಮೆ ಬಗೆಹರಿದು ಬಿಡಲಿ ಎಂದು ಹಿಂದುಸ್ತಾನ ಸರಕಾರವು ಸಮಿತಿಯವರು ಹೇಳಿದಂತೆ ನಡೆಯುತ್ತ ಬಂದುದರ ಪರಿಣಾಮವಾಗಿ ಇಂದು ಪಾಕಿಸ್ತಾನ ಸರಕಾರದವರು ಹಟವಾದಿಗಳಾಗಿರುವರೆಂದು ನಿರೀಕ್ಷಕರಿಗೆ ಎನಿಸದಿರದು. ಈ ಬಗ್ಗೆಯೂ ಸಮಿತಿಯವರು ವಿಚಾರ ಮಾಡುವದು ಅವಶ್ಯವಾಗಿದೆ.

ಕಾಶ್ಮೀರ ಪ್ರಶ್ನೆಯಲ್ಲಿ ಹಿಂದ ಮತ್ತು ಪಾಕ ಎರಡೂ ಸರಕಾರಗಳನ್ನು ಒಂದೇ ಬಗೆಯಾಗಿ ನೋಡಿಕೊಳ್ಳಲಾಗುವದೆಂದು ಹೇಳುವದು ನ್ಯಾಯ್ಯವಾಗಲಾರದು. ಕಾಶ್ಮೀರ ಸರಕಾರದ ಸೈನಿಕರಿಗೆ ಸಹಾಯ ಮಾಡುವದಕ್ಕಾಗಿ ಕಾಶ್ಮೀರ ಸರಕಾರದ ಆಮಂತ್ರಣದಂತೆಯೇ ಹಿಂದ ಸೈನ್ಯ ಅಲ್ಲಿ ಬಿಡಾರ ಮಾಡಿರುವದು. ಅದು ಒಂದು ಬಗೆಯಿಂದ ಸಹಾಯಕ ಸೈನ್ಯದಂತೆ ಅಲ್ಲಿ ಇರುವದು. ಆದರೆ ಪಾಕಿಸ್ತಾನ ಸೈನಿಕರಾದರೊ ದಾಳಿಗಾರರಂತೆ, ಆಗಂತುಕರಂತೆ, ದರೋಡೆಗಾರರಂತೆ ಕಾಶ್ಮೀರಲ್ಲಿ ಇರುವರು. ಈ ಪರಿಸ್ಥಿತಿಯಲ್ಲಿ ಅಸಲು ಕಾಶ್ಮೀರನ್ನು ಬಿಟ್ಟು ಹೊರಟು ಬರುವದು ಕ್ರಮಪ್ರಾಪ್ತವಾಗಿದೆ, ಕಾಶ್ಮೀರಲ್ಲಿ ಶಾಂತಿಯು ಪ್ರಸ್ಥಾಪಿತವಾಗಿ ನ್ಯಾಯ್ಯವಾದ ತಳಹದಿಯಲ್ಲಿ ಸಾರ್ವತ್ರಿಕ ಮತಗಣನೆ ನಡೆಯಬೇಕಾದರೆ ಪಾಕಿಸ್ತಾನ ಸೈನ್ಯವು ಅಲ್ಲಿಂದ ಕಾಲ್ದೆಗೆಯುವದು ಅತ್ಯವಶ್ಯವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಯುಕ್ತರಾಷ್ಟ್ರ ಸಂಘ ಸಮಿತಿಯವರು ಈ ವರೆಗಿನ ತಮ್ಮ ಹೊಯ್ದಾಟದ ಮನೋವೃತ್ತಿಯನ್ನು ಬಿಟ್ಟುಗೊಟ್ಟು ನಿಶ್ಚಿತ ನಿರ್ಧಾರದಿಂದ ಮುಂದಡಿಯಿಟ್ಟದ್ದಾದರೆ ಅವರಿಗೆ ಯಶಸ್ಸು ಸಿಕ್ಕಬಹುದು.

ಪಾಕಿಸ್ತಾನ ಸರಕಾರದವರು ಕಾಶ್ಮೀರದ್ಲಲಿಯ ತಮ್ಮ ಸೈನ್ಯವನ್ನು ವಿಸರ್ಜಿಸಲು ಒಪ್ಪದಿದ್ದುದರಿಂದುಂಟಾದ ಪರಿಸ್ಥಿತಿಯನ್ನು ವಿಮರ್ಶಿಸಿ ಎರಡೂ ಸರಕಾರಗಳಲ್ಲಿ ಒಡಂಬಡಿಕೆಯನ್ನು ಉಂಟುಮಾಡುವದಕ್ಕಾಗಿ ಯುಕ್ತರಾಷ್ಟ್ರ ಸಂಘದವರು ಅ್ಯ. ನಿಮಿಜ್‌ರನ್ನು ಮಧ್ಯಸ್ಥರೆಂದು ನೇಮಿಸಲಿರುವರೆಂದು ಸುದ್ದಿ ಹಬ್ಬಿದೆ. ನಿಮಿಜ್‌ರಾದರೊ ಸಾರ್ವತ್ರಿಕ ಮತಗಣನಾಧಿಕಾರಿಗಳೆಂದು ಈಗಾಗಲೆ ನೇಮಿಸಲ್ಪಟ್ಟಿರುವರು. ಈ ಸಂದರ್ಭದಲ್ಲಿ ಅವರು ಮಧ್ಯಸ್ಥರೆಂದು ಕೆಲಸ ಮಾಡಿ ಯಶಸ್ವಿಯಾಗದಿದ್ದರೆ ಮುಂದಿನ ಅವರ ಮಹತ್ವದ ಕಾರ್ಯದಲ್ಲಿಯೂ ವ್ಯತ್ಯಯ ಬರಬಹುದು. ಅದೇನೇ ಇದ್ದರೂ ಅ್ಯ. ನಿಮಿಜ್‌ರು ಮಧ್ಯಸ್ಥನ ಹೊಣೆಗಾರಿಕೆಯನ್ನು ಹೊರಲು ಸಿದ್ಧರಿರುವರೆಂದು ಪ್ರಸಿದ್ಧವಾಗಿದೆ. ಈ ಬಗೆಯ ಸುದ್ದಿ ಪ್ರಸಿದ್ಧವಾಗುತ್ತಿರುವಾಗಲೆ ಸಮಿತಿಯವರು ಮತ್ತೆ ಸಭೆಸೇರಿ ಮುಂದೆಯಾವ ಉಪಾಯವನ್ನು ಕೈಕೊಳ್ಳಬೇಕೆಂಬ ಬಗೆಗೆ ವಿಚಾರನಡೆಸಿದರೆಂದು ತಿಳಿಯುತ್ತದೆ. ಈ ಪ್ರಶ್ನೆಯನ್ನು ಮರಳಿ ಭದ್ರತಾ ಮಂಡಳಕ್ಕೆ ಕಳಿಸುವ ವಿಚಾರವನ್ನು ಸಮಿತಿಯವರು ಇಟ್ಟುಕೊಂಡಿಲ್ಲೆಂದೂ ತಿಳಿಯುತ್ತದೆ. ಶಾಂತಿಸಂಬಂಧದಲ್ಲಿ ಹಿಂದ ಪಾಕ ಸರಕಾರಗಳ ಸಂಯುಕ್ತ ಪರಿಷತ್ತನ್ನು ಕೂಡಿಸಬೇಕೆಂದು ಮಾಡಿದ್ದು ಅದು ಯಶಸ್ವಿಯಾಗದಿದ್ದುದು ಸರ್ವಶ್ರುತ. ಈ ಸಂಬಂಧದಲ್ಲಿ ನಡೆದ ಪತ್ರವ್ಯವಹಾರವನ್ನು ಪ್ರಸಿದ್ಧಿಸಬೇಕೆಂದು ಹಿಂದುಸ್ತಾನ ಸರಕಾರದವರು ಸಮಿತಿಯವರಿಗೆ ಕೇಳಿಕೊಂಡಿದ್ದಾರೆ. ಆದರೆ ಸಂಧಾನ ಪ್ರಯತ್ನಗಳಿನ್ನೂ ನಡೆಯಲಿರುವದರಿಂದ ಈಗಲೆ ಅದನ್ನು ಪ್ರಸಿದ್ಧಿಸುವದಿಲ್ಲೆಂದು ಸಮಿತಿಯ ಅಧ್ಯಕ್ಷರು ಹೇಳಿರುವರು. ಅದೇನೇ ಇದ್ದರೂ ಸಮಿತಿಯವರು ಈ ಮೊದಲಿನಂತೆ ದಾಕ್ಷಿಣ್ಯಮನೋವೃತ್ತಿಯಿಂದ ಈ ಪ್ರಶ್ನೆಯನ್ನು ಬಿಡಿಸಲು ಪ್ರಯತ್ನಿಸಿದರೆ ಅವರಿಗೆ ಎಂದಿಗೂ ಯಶಸ್ಸು ಸಿಕ್ಕಲಾರದು. ಸದ್ಯದಲ್ಲಿ ಕಾಶ್ಮೀರಲ್ಲಿ ಪಾಕಿಸ್ತಾನ ಸೈನ್ಯವನ್ನು ವಿಸರ್ಜಿಸಿಬಿಡುವಂತೆ ಪಾಕ ಸರಕಾರವನ್ನು ಒತ್ತಾಯಪಡಿಸಿ ಮುಂದಿನ ಕ್ರಮವನ್ನು ಅನುಸರಿಸಲು ಮಾರ್ಗವನ್ನು ಸುಗಮಮಾಡುವದು ಸಮಿತಿಯವರ ಕರ್ತವ್ಯವಾಗಿದೆ.

× × ×

ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಕಾಂಗ್ರೆಸ ಕಾರ್ಯಸಮಿತಿಯು ಕರ್ನಾಟಕ ಆಂಧ್ರ, ಶಿಷ್ಟಮಂಡಳಗಳನ್ನು ೨೩ ನೇ ತಾರೀಕಿನ ದಿನ ಸಂದರ್ಶಿಸಿ ಅವರ ಹೇಳಿಕೆಗಳನ್ನು ಕೇಳಿಕೊಂಡಿತು. ಮದರಾಸನ್ನು ಇಬ್ಭಾಗಿಸಿ ತಮಿಳ, ಆಂಧ್ರರಿಗೆ ಕೊಡಬೇಕೆಂದು ಆಂಧ್ರರು ಹೊಸದಾಗಿ ಕೇಳಿಕೊಳ್ಳಹತ್ತಿದ್ದರಿಂದ ಆಂಧ್ರ ಪ್ರಾಂತರಚನೆಯಲ್ಲಿಯೂ ವಿಶೇಷ ಸ್ವರೂಪದ ತೊಡಕು ಉತ್ಪನ್ನವಾಗಿದೆ. ಕರ್ನಾಟಕ ಪ್ರಾಂತ ರಚನೆಯ ಬಗ್ಗೆಯಂತೂ ಹಳೆ ಹೊಸ ತೊಡಕುಗಳು ಮುಂದೆ ಹಾದಲ್ಲಿರುವದುಂಟು. ಶ್ರೀ ದಿವಾಕರ ಅವರ[illegible] ಧಾರೀಣಾಕ್ಕದಲ್ಲಿ ೩೩ ಕ್ಕೆ ಕಾಂಗ್ರೆಸ ಕಾ[illegible] ಸಮಿತಿಯನ್ನು ಕಂಡ ಕನ್ನಡಿಗರ[illegible] ಕಾಂಗ್ರೆಸ ಸಮಿತಿಯು ಶಿಷ್ಟಮಂಡಳ[illegible] ಹಕ್ಕನ್ನು ಸಮರ್ಥಿಸಿದರೂ [illegible] ಕಾರ್ಯಕರ್ತರಿಂದ [illegible] ಪ್ರಶ್ನೆಗಳನ್ನು ಕೇಳಿ [illegible] ಕೊಂಡೂ ತಿಳಿಯುತ್ತದೆ. ಕರ್ನಾಟಕದ [illegible] ಆಕಾಂಕ್ಷೆಗಳನ್ನು ಸ್ಪಷ್ಟ ಶಬ್ದಗಳಲ್ಲಿ [illegible] ಸಮಿತಿಯ ಮುಂದೆ ಇಟ್ಟಿತು. ಕರ್ನಾ[illegible] ಪ್ರಾಂತರಚನೆಯು ಬೇಗ ಆಗದಿದ್ದರೆ [illegible] ಸ್ಥಳದಲ್ಲಿ ಕನ್ನಡಿಗರಿಗಿರುವ ಪ್ರತ್ಯೇಕ[illegible] ಸಗಳು ಕಡಿಮೆಯಾಗುವವೆಂದೂ [illegible] ಮುಂದಿಟ್ಟು ಮಾಡಿಕೊಂಡಿರುವರಂತೆ. [illegible] ಘಟನೆಯಲ್ಲಿ ಕರ್ನಾಟಕದ [illegible] ಹಾದಿದ್ದರೆ ಕರ್ನಾಟಕದಲ್ಲಿ [illegible] ಯುಂಟಾಗುವದೆಂದೂ ಶಿಷ್ಟಮಂಡಳ[illegible] ಎಚ್ಚರಿಕೆಯ ಮಾತುಗಳನ್ನು ಹೇಳಿದ[illegible] ಕರ್ನಾಟಕ ಪ್ರಾಂತರಚನೆಯು ಈ ಪ್ರಶ್ನೆ[illegible] ಭಾಷಾನುಗುಣ ಪ್ರಾಂತರಚನೆಯ ತತ್ವ[illegible] ಕಾರವಾಗಿದ್ದು ಕಾಂಗ್ರೆಸ್ಸು ಇದಕ್ಕೆ [illegible] ಬದ್ಧವಾಗಿದೆ. ಕನ್ನಡ ಪರಿಸ್ಥಿತಿಯ[illegible] ಕರ್ನಾಟಕದ ಜನತೆ ಸ್ವತಂತ್ರ ಪ್ರಾಂತದ[illegible]ಗಾಗಿ ಇಷ್ಟೊಂದು ಆತುರರಾಗಿರು[illegible] ಇಲ್ಲವೆಂದು ಹೇಳ ಮುಂದೆ ಹಾಕಿ [illegible] ಮುಂದಕ್ಕೆ ಹಾಕುವದು ನ್ಯಾಯ್ಯವಾಗ[illegible]ರದು. ಆದುದರಿಂದ ಕಾಂಗ್ರೆಸ ಕಾರ್ಯ[illegible] ಸಮಿತಿಯವರು ಹೊಸ ಘಟನೆಯಲ್ಲಿ ಕರ್ನಾಟಕ ಪ್ರಾಂತದ [illegible]ತೆಯೂ ಅದಷ್ಟು ಬೇಗ ಕರ್ನಾಟಕ ಪ್ರಾಂ[illegible] ರಚನೆಯಾಗುವಂತೆಯೂ ಯೋಗ್ಯ [illegible]ಗಳನ್ನು ಕೈಗೊಳ್ಳಬೇಕೆಂದು ನಾವು ಆ[illegible] ಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

× × ×

ಆದರೆ ಈ ಶಿಷ್ಟಮಂಡಳದವರು ಸಾಧ್ಯವಾಗದಿದ್ದರೆ ಮೈಸೂರನ್ನು ಬಿಟ್ಟುಗೊಟ್ಟು ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂಬ ಬೇಡಿಕೆಯನ್ನು ಕಾರ್ಯ ಸಮಿತಿಯ ಮುಂದೆ ಇಟ್ಟದ್ದು ನಮಗೆ ಸಮಂಜಸ ತೋರುವದಿಲ್ಲ. ಈ ಮೊದಲು ನಾವು ವಾದಿಸುತ್ತ ಬಂದಂತೆ ಮೈಸೂರನ್ನೊಳಗೊಂಡು ಅಖಂಡ ಕರ್ನಾಟಕ ಪ್ರಾಂತ ರಚನೆಯ ಬಗ್ಗೆಯೇ ನಾವು ಆಗ್ರಹಪಡಬೇಕಲ್ಲದೆ ಮುಂಬಯಿಯಲ್ಲಿಯ ನಾಲ್ಕು ಜಿಲ್ಲೆ ಮತ್ತು ಮದರಾಸಿನಲ್ಲಿಯ ಎರಡು ಜಿಲ್ಲೆಗಳನ್ನು ತೆಗೆದುಕೊಂಡು ಸ್ವತಂತ್ರ ಪ್ರಾಂತ ರಚಿಸುವದಕ್ಕೆ ಸಿದ್ಧರಾಗಬಾರದು. ಇದರಿಂದ ಭಾಷಾನ್ವಯ ಪ್ರಾಂತರಚನೆಯ ತತ್ವಕ್ಕೆ ನಾವು ಅರೆದಾಳ ಬಡೆದಂತಾಗುವದು. ಸಂಸ್ಥಾನ ಸಮೀಕರಣದ ಈ ಯುಗದಲ್ಲಿ ಮೈಸೂರನ್ನೊಳಗೊಂಡು ಕರ್ನಾಟಕ ಪ್ರಾಂತವನ್ನು ರಚಿಸಲು ಮೊದಲಿನಷ್ಟು ತೊಡಕುಗಳು ಅಡ್ಡಬರಲಾರವು. ಮೈಸೂರಿನ ಜನಮತವಾದರೂ ಇತ್ತೀಚೆ ಅಖಂಡ ಕರ್ನಾಟಕ ಪ್ರಾಂತರಚನೆಯತ್ತ ಅನುಕೂಲವಾಗಹತ್ತಿದೆ. ಈ ಪರಿಸ್ಥಿತಿಯಲ್ಲಿ ನಾವೇ ನಮ್ಮ ಗುರಿಯನ್ನು ಸಂಕೋಚಿಸಹತ್ತಿದರೆ ಧ್ಯೇಯವೆಂದಿಗೂ ಸಾಧ್ಯವಾಗಲಾರದು. ಈ ಆರು ಜಿಲ್ಲೆಗಳಿಂದ ಕನ್ನಡಿಗರ ಸಾರ್ವಾಂಗಿಕ ಉನ್ನತಿಯಾಗಲಾರದು. ಹೈದರಾಬಾದ ಕನ್ನಡ ಪ್ರದೇಶ, ಮೈಸೂರು ಕೊಡಗು ಇವುಗಳ ಅಡಗಿರುವ ನೀಲಗಿರಿ ಕೊಳ್ಳೇಗಾಲ ಮತ್ತು ಸಮೀಪದ ಕನ್ನಡ ಪ್ರದೇಶವೆಲ್ಲ ಹೊಸ ಕರ್ನಾಟಕ ಪ್ರಾಂತದಲ್ಲಿ ಸೇರಿದ್ದಾಗಲೆ ಮಾತ್ರ ಕರ್ನಾಟಕವು ಸರ್ವಸಮೃದ್ಧ ಸುಂದರ ಸ್ವತಂತ್ರ ಪ್ರಾಂತವಾಗಿ ವಿರಾಜಮಾನವಾಗಬಲ್ಲದು. ನಾವೇ ನಮ್ಮ ಧ್ಯೇಯವನ್ನು ಸಂಕೋಚಿಸುತ್ತ ನಡೆದರೆ ಉಳಿದ ಪ್ರತಿಗಾಮೀಶಕ್ತಿಗಳಿಗೆಲ್ಲ ಅವಕಾಶ ಕೊಟ್ಟಂತಾಗುತ್ತದೆ. ಈಗಾಗಲೆ ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳು, ಮೈಸೂರು ಕೊಡಗು ಭಾಗವನ್ನು ಕೂಡಿಸಿ ಒಂದು ಪ್ರತ್ಯೇಕ ಪ್ರಾಂತವನ್ನು ನಿರ್ಮಿಸಬೇಕೆಂಬ ಬೇಡಿಕೆ ಮುಂದೆ ಬಂದಿರುವುದು ತಿಳಿಯುತ್ತದೆ ಇದು ಸಾಧ್ಯವಾದಪಕ್ಷದಲ್ಲಿ ಕನ್ನಡಿಗರ ಆಸೆ ಆಕಾಂಕ್ಷೆಗಳೆಲ್ಲ ಮಣ್ಣುಗೂಡಿದಂತಾಗುವವು. ಇದಕ್ಕೆ [illegible] ಕನ್ನಡಿಗರು ಮೈಸೂರನ್ನೊಳಗೊಂಡ ಅಖಂಡ ಕರ್ನಾಟಕ ಪ್ರಾಂತರಚನೆಗಾಗಿಯೇ ಪ್ರಯತ್ನಿಸಬೇಕು. ಕಾಂಗ್ರೆಸ ಕಾರ್ಯ ಸಮಿತಿಯವರಾದರೂ ಬಹಳ ದಿನಗಳ ಕನ್ನಡಿಗರ ಈ ಪ್ರಶ್ನೆಯನ್ನು ಸಹಾನುಭೂತಿಯಿಂದ ಬಿಡಿಸಿ, ಕರ್ನಾಟಕದ ಅಷ್ಟೇ ಅಲ್ಲ ಇಡೀ ಹಿಂದುಸ್ಥಾನದ ಸಾರ್ವಾಂಗಿಕ ಉನ್ನತಿಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಬಿನ್ನವಿಸುತ್ತೇವೆ.

ಹರಟೆ

ಮನೆ ಹುಡುಕಿನೋಡು ಮದುವೆ ಮಾಡಿ ನೋಡು

ಲೇ:— ವೆಂಕಟರಾಚಾರ್ಯ ಪಪ್ಪು, ಬಿ. ಎ. ಎಲ್‌ಎಲ್. ಬಿ. ವಕೀಲ, ಹುಬ್ಬಳ್ಳಿ)

[ರಸ್ತೆಯ ಒಂದು ಮಹಾಕೂಟ. ತನ್ನ ಷ್ಟಕ್ಕೆ ತಾನೆ ಸ್ವಗತ]

ಊರಲ್ಲಿ ಇರಲಿಕ್ಕೆ ಒಂದು ಮನೆ ಸಹ ಸಿಗ ಬಾರದೇ, ಎಂಥ ದುರ್ದೈವ ನನ್ನದು. ನಾನೇನು ನಿರಾಶ್ರಿತನೆನ್ನಬೇಕೆ, ಛೇ ಅಲ್ಲ. ಕಾಶೀವಾಸ, ಕರವೀರದಲ್ಲಿ ಭಿಕ್ಷಾಟನ, ದಂಡ ಕಾರಣ್ಯದಲ್ಲಿ ಊಟ, ಕನ್ಯಾಕುಮಾರಿಯಲ್ಲಿ ಸಾಯಂಸಂಧ್ಯಾ ಮಾಡುವ ಅಖಿಲಭಾರತ ನಾಗರಿಕನಂತೆ ನನ್ನದೂ ಸ್ಥಿತಿ. ಒಬ್ಬರಲ್ಲಿ ಶಯನ, ಒಬ್ಬರಲ್ಲಿ ಸ್ನಾನ, ಒಬ್ಬರಲ್ಲಿ ಪಾನ, ಒಬ್ಬರಲ್ಲಿ ಊಟ, ಒಬ್ಬರಲ್ಲಿ ವಿಶ್ರಾಂತಿ ಈ ಪ್ರಕಾರ ನನ್ನ ವಾಸ ಇಡೀ ನಗರದಲ್ಲಿ ಅನ್ನ ಬೇಕಾಗುವದು. ಹೀಗೆ ಸ್ವತಂತ್ರ ಹಿಂದುಸ್ತಾನ ದಲ್ಲಿ ಇನ್ನೆಷ್ಟು ದಿನ ಕಳೆಯಬೇಕು? ತೆರವು ಬಿದ್ದ ಜಾಗೆಯ ಮಾಲಕರನ್ನು ಕೇಳಿದರೆ ಮನೆ ಕಟ್ಟಿ ಬಾಡಿಗೆದಾರರಿಂದ ತಲೆಯ ಮೇಲೆ ಮೆಣ ಸು ಅರಿಸಿಕೊಳ್ಳಲಿಕ್ಕೆ ನಾವೇನು ಬುದ್ಧಿವಂತಿ ಕೆಯ ದಿವಾಳಿ ತೆಗೆದಿಲ್ಲವೆನ್ನುವರು. ಸರಕಾರ ವನ್ನು ವಿಚಾರಿಸಿದರೆ "ಹಳ್ಳಿಗಳಿಗೆ ಹೊರಳಿರಿ" ಎಂಬ ಉಪದೇಶಾಮೃತ. "ಮರಳಿ ಹಳ್ಳಿಗೆ ಅಥವಾ ಮಣ್ಣಿಗೆ". ದೇಹವನ್ನು ಬಿಟ್ಟ ಜೀವಕ್ಕೆ ಪುನಃ ದೇಹವನ್ನು ಪ್ರವೇಶಿಸಲಿಕ್ಕೆ ಹೇಳಿದಂತೆ. "ಬಾಡಿಗೆಗಾಗಿ" ಬೋರ್ಡುಗಳೆ ತೀರಿಕೊಂಡು ಬಿಟ್ಟವೆ. ಕೆಲವು ಮನೆಗಳಂತೂ ಬಾಡಿಗೆ ನಿಯಂತ್ರಣ ಕಾಯದೆಗೆ ಅಂಜಿ ಅರಮನೆ ಗಳಾಗಿ ನಿಂತಿವೆ. ದೆವ್ವನ ಮನೆಗಳೇ ಇಲ್ಲ. ಕಾಗೆ ಹೊಕ್ಕ ಮನೆಗಳೂ, ಕೆಟ್ಟ ಮುಹೂರ್ತ ದಲ್ಲಿ ಸತ್ತ ಮನೆಗಳೂ ಸಹಿತ ಖಾಲಿ ಉಳಿ ಯುವದಿಲ್ಲ. ಮೂಢನಂಬಿಗೆಬಡಕರೆಂದು ಹೆಸರಾದ ನಾವು ಈ ರೀತಿ ಎಲ್ಲವನ್ನು ತೊರೆದು ನಿಂತಿದ್ದೇವೆ. ನಾಯಿಕೊಡೆಯಂತೆ ಭೂಮಿತಿ ಗತಿಯಿಂದ ಬೆಳೆಯುವ ನಮಗೆ ಅನ್ನ ಕಡಿಮೆಬೀಳತೊಡಗಿದೆ, ವಸ್ತ್ರದ ಕೊರತೆ; ವಾಸಸ್ಥಳದ ಮಾತಂತೂ ನೀವೆ ನೋಡಿರುವಿರಿ. ಊರಲ್ಲಿ ಹವಾ ಆಡುವದರ ಸಲುವಾಗಿ ಕೆಲವು ಮನೆಗಳನ್ನು ಹೊತ್ತಿಲ್ಲದ ಹೊತ್ತಿನಲ್ಲಿ ವಶ ಪಡಿಸಿಕೊಂಡು ಬೈಲುಮಾಡಿದ್ದಾರೆ. ಪ್ರಜೆ ಬೆಳೆದಂತೆ ಸರಕಾರಿ ಖಾತೆ ಬೆಳೆಯತೊಡಗಿವೆ. ಕಚೇರಿಗೆ, ಅಧಿಕಾರಿಗಳಿಗೆ ಪ್ರಥಮ ಪ್ರಾಶಸ್ತ್ಯ, ನಂತರ ಮುನಸಿಪಾಲ್ಟಿ ಶಾಲೆಗಳು ಖಾಸಗಿ ಮನಿಗಳಲ್ಲೇ. ಬಾಡಿಗೆ ಮನೆಗಳೆಲ್ಲ ಸರಕಾರಿ ಅರ್ಧ ಸರಕಾರಿ, ಕಾಲು ಸರಕಾರಿ, ಮುಕ್ಕಾಲು ಸರಕಾರಿ ಕೆಲಸಕ್ಕೆ ದಿಕ್ಕಾಪಾಲಾಗಿ ಹೋಗಿ ಬಿಟ್ಟರೆ- ನಾನೇನು ಮಾಡಬೇಕು? ದಶವಾರ್ಷಿಕ ಯೋಜನೆಯಲ್ಲಿಯ ವಾಯುಸದನಕ್ಕೆ ಜೋತುಬೀಳಬೇಕೆ? ಕೆಲಸಕ್ಕೆ ಬಾರದ ಕಚೇರಿ ಗಳನ್ನು ಮುಚ್ಚಿರಿ. ಶಾಲೆಗಳನ್ನು ಶಾಂತಿ ನಿಕೇತನ ಪದ್ಧತಿಗನುಸಾರವಾಗಿ ಬೈಲು ದಾರಿ ಗುಂಟ ಬೆಳೆದ ಗಿಡಗಳ ಬುಡದಲ್ಲಿ ಹಾಕಿರಿ!!

ಮನೆ ಹುಡುಕುವ ನನ್ನ ಚಳವಳಿಗೆ ಎಂದು ಆಗಸ್ಟ ೧೫ ಉದಯವಾಗುವದೊ ನೋಡೇ ಬಿಡುವೆನು. ನಮ್ಮಲ್ಲಿಯ ಪ್ರಾಚೀನ ಅರ್ವಾ ಚೀನ ಸಮೀಚೀನ ಪಂಡಿತರೆಲ್ಲ ಅರಣ್ಯ ಪಂಡಿ ತರೆ. ನಿರುಪಯೋಗ ಶಾಸ್ತ್ರಗಳ ಸಂಶೋಧನೆ ಯಲ್ಲಿ ತಮ್ಮ ಆಯುಷ್ಯವನ್ನೆಲ್ಲ ದುರುಪಯೋಗ ಮಾಡಿದ್ದಾರೆ. ಕಾಮಶಾಸ್ತ್ರಪಿತಾಮಹನಾದ ವಾತ್ಸ್ಯಾಯನನ ಪರಿಚಯ ನಿಮಗೆ ಇರಲಿಕ್ಕೆ ಸಾಕು. ತನ್ನ ವೇಳೆಯನ್ನು ವ್ಯರ್ಥಹಾಳು ಮಾಡಿ ಜಾರಿಣಿಯರ ಲಕ್ಷಣವನ್ನು ಕೊಟ್ಟಿ ದ್ದಾನೆ. ಅದೆ ಖಾಲಿ ಮನೆಗಳ ಲಕ್ಷಣವನ್ನು ಕೊಟ್ಟಿದ್ದರೆ ನನಗೆ ಮತ್ತು ನನ್ನಂಥ ಅಸಂ ಖ್ಯಾತ ಮನೆಹುಡುಕರಿಗೆ ಎಷ್ಟು ಉಪಯೋಗ ವಾಗುತ್ತಿತ್ತು!

ಸುಣ್ಣ ಬಳಿದು, ಸಾರಣಿ ತೆಗೆದು, ತೋರಣ ಗಳನ್ನು ಕಟ್ಟಿ ಕೀಲಿ ಹಾಕಿದ ಒಂದು ಬಾಗಿ ಲನ್ನು ಕಂಡು ಹೊಸದಾಗಿ ಕಟ್ಟಿದ ಮನೆ ಇರ ಬಹುದೆಂದು ನೆರೆಮನೆಯ ಬಾಗಿಲನ್ನು ತಟ್ಟಿದೆ. ಬಾಗಿಲು ತೆರೆಯಿತು. ಅದು ಒಂದೇ ಒಂದು ಕೋಣೆಯ ಮನೆ. ಮಾಲಕನು ಬಾಗಿ ಲಲ್ಲೇ ನೆಲಕ್ಕೆ ಹಾಕಿದವನಂತೆ ತಂಗಿದ್ದನು. ಬಾಗಿಲು ತೆರೆದ ಸಪ್ಪಳವನ್ನು ಕೇಳಿ ಮತ್ತು ನನ್ನನ್ನು ನೋಡಿ ಅವನ ಉಷ್ಣಾಂಶವು ಏರಿರ ಬೇಕು. ತಳಕ್ಕೆ ಸೀಸುಹಾಕಿದ ಗೊಂಬೆ ಯಂತೆ ಅಲ್ಲೇ ಹೊರಳಾಡಿ, "ಯಾರ್ರೀ ನೀ.. ನೀ ..ನೀ.. ನೀವು" ಅನ್ನುತ್ತಾ ಬಂದೂಕಿನಿಂದ ಹೊರಬಿದ್ದ ಗುಂಡಿನಂತೆ ನನ್ನೆಡೆಗೆ ಬಂದನು. "ನೀವು ಕೇಳಿದಷ್ಟು ಬಾಡಿಗೆ ಕೊಡುತ್ತೇನೆ, ಪಾವತಿ ಕೇಳುವದಿಲ್ಲ, ನೀವು ಹೇಳಿದಂತೆ ಬಾಡಿಗೆ ಪತ್ರ ಬರಕೊಡುತ್ತೇನೆ. ಮುನಸಿ ಪಾಲ್ಟಿಯವರಿಗೆ ಅಥವಾ ಯಾರ್‍ಯಾರಿಗೆ ಎಷ್ಟೆಷ್ಟು ಬಾಡಿಗೆ ಹೇಳಬೇಕೊ ಆ ಪ್ರಕಾರ ಹೇಳುತ್ತೇನೆ. ನಿಮಗೆ ಇಷ್ಟವಿದ್ದರೆ ಖೊಟ್ಟಿ ಬಾಡಿಗೆಲೆಕ್ಕವನ್ನೂ ಇಡುತ್ತೇನೆ. ಆ ಮನೆಯು ತಮ್ಮದಾದರೆ ಒಮ್ಮೆಯಾದರೂ ನನಗೆ ಬಾಡಿ ಗೆಗೆ ಕೊಡುತ್ತೇನೆ ಅನ್ನಿರಿ" ಎಂದು ದೀನ ಸ್ವರ ದಲ್ಲಿ ಪ್ರಾರಂಭಿಸಿದೆ. "ನಾಲ್ಕಾರು ವರ್ಷದ ಮುಂಗಡ ಬಾಡಿಗೆ ತೆಗೆದುಕೊಳ್ಳಿರಿ. ಏನಾ ದರೂಮಾಡಿ ಮನೆ ಕೊಡ್ರಿ".

"ಅದು ಬಾಡಿಗೆ ಮನೆ ಅಲ್ಲರಿ. ಅದು ನಮ್ಮದೇ ಲ್ಯಾಟರಿನ್."

"ಹಾಗಾದರೆ ಅದಕ್ಕೆ ಇಷ್ಟು ಏಕೆ ಶೃಂಗಾರ?"

"ನೀವು ಎಲ್ಲೊ ಸಳ್ಳವಾದವರು ಸ್ವಾಮೀ, ನಿಮಗೇನು ತಿಳಿಯಬೇಕು? ನಾವು ಹೊಟ್ಟೆ ತುಂಬಿಕೊಳ್ಳುವದು ಅದರಿಂದಲೇ."

"ಹಾಗೇಕೆ ಬೈಕೊಳ್ಳುತ್ತೀರಿ?"

"ಬೈಕೊಳ್ಳುವದಿಲ್ಲ. ಈ ಊರಲ್ಲಿ ೩೫೦೦೦ ಮನೆಗಳು; ಅದಕೆ ಲ್ಯಾಟರಿನ ಮಾತ್ರ ೨೫೦೦. ಹೀಗಾಗಿ ನಾಲ್ಕಾರು ಮನೆಯವರು ಅದನ್ನೇ ಬಾಡಿಗೆ ಹಿಡಿದಿರುತ್ತಾರೆ. ಅದಕ್ಕಾಗಿ ಅಂದದ್ದು."

"ಹಾಗಾದರೆ ನಿಮ್ಮ ಗೊತ್ತಿನಲ್ಲಿ ಖಾಲಿ ಮನೆಗಳೇನಾದರೂ ಅವೆಯೇ?"

"ಪಕ್ಕದ ಮನೆ ಖಾಲಿ ಆಗತಕ್ಕದ್ದಿದೆ- ವಿಚಾ ರಿಸಿರಿ."

ನಾನು ಪಕ್ಕದ ಮನೆಯನ್ನು ಹೊಕ್ಕೆ.

"ಈ ಮನೆ ಖಾಲಿಯಾಗುವದದೆಯೇ?"

"ಈ ಮನೆ ಮಾಲಕರೆ ನಿಮ್ಮನ್ನು ಕಳಿಸಿ ದಂತೆ ಕಾಣುತ್ತದೆ. ಸಭೆಯಲ್ಲಿ ಭಾಷಣ ಬೇಸರ ಬಂದರೆ ಮುಂಗಡ ಚಪ್ಪಾಳೆ ಬಾರಿಸಿ ಉಪನ್ಯಾ ಸಕರನ್ನು ಕೂಡಿಸುವಂತೆ ನಮ್ಮ ಮಾಲಕನು ನಮ್ಮನ್ನು ಬಿಡಿಸುವ ಉದ್ದೇಶದಿಂದ ಹಾಗೆ ನಿಮಗೆ ಹೇಳಿರಬಹುದು. ಇಕಾ! ನೋಡ್ರಿ!! ಬಂಗಾರದಂತಹ ಕಾಯಿದೆ ನಮ್ಮ ಬೆನ್ನುಬಲಾ ಇರ್ತ ನಾವೇಕೆ ಮನೆ ಖಾಲಿ ಮಾಡೋಣ್ರೀ? ಕದಾಚಿತ್ ಬಿಡಿಸಿದ್ರೆ ಯಾವ ಜನ್ಮನ್ನ ಎಷ್ಟು ರೂಪಾಯಿ ಬಾಡಿಗೆಗೆ ತಂದು ನಿಂದಿರಿಸುತಾರ, ಇದ್ರ ಎಚ್ಚರ ನಮ್ಮ ಖಬರತಪ್ಪಿದ ಮಾಲಕಗೆ ಇಲ್ಲೇ ಇಲ್ಲಾ."

"ಕ್ಷಮಿಸಿರಿ, ವರಸಂಶೋಧನೆಗೆ ನಡೆದ ಕನ್ಯಾಪಿತನಂತೆ ನಾನೂ ಮನೆಸಂಶೋಧನೆಯ ದಂಡಯಾತ್ರೆ ಕೈಕೊಂಡೇನಿ."

ಅಷ್ಟರಲ್ಲಿ ಒಂದು ದೊಡ್ಡ ಚಾಳು ದೃಷ್ಟಿಗೆ ಬಿತ್ತು. ಚಾಳಿನ ಮಾಲಕನು ಒಂದು ಗಡಿ ಯಾರ ಇಟ್ಟುಕೊಂಡು ನಳದ ಕಟ್ಟೆ ಹಿಡಿದು ಕುಳಿತಿದ್ದನು.

"ಜ ಮಿನಿಟು ಆತು ಆ ಮನಿಯವರ ಸರ್ತಿ" ಎಂದು ಮಾಲಕನು ಬಾಡಿಗೆದಾರನ ಮೇಲೆ ಗುಡುಗಿದನು. ನನ್ನನ್ನು ಆಪಾದಮಸ್ತಕ ಸಿಂಹಾವಲೋಕನಮಾಡಿ ನಳಬಂದು ಆಗುವ ವರೆಗೆ ತಡೆಯಲಿಕ್ಕೆ ಹೇಳಿದನು.

ನಡುವೆ ಅವರೊಳಗೆ ಸಂಭಾಷಣೆ ಸಾಗಿತ್ತು.

"ಏ ಭಯ್ಯಾ, ಅವರ್‍ಯಾರು ಮೊನ್ನೆ ಬಾಡಿಗೆ ಬಂದವರೇ? ಹೆಚ್ಚು ಬಾಡಿಗೆ ಕೊಡುವ ದಿಲ್ಲೇನು, ಅವರ ಮನೆ ವಿದ್ಯುದ್ದೀಪಾ ಬಂದು ಮಾಡು ನಡಿ."

"ಅವಾ ನೋಡು ಕಾಯಿದೇ ಬೆದರಿಕೆ ತೋರಿಸಲಿಕ್ಕೆ ಹತ್ಯಾನ. ಮತ್ತ ಸಣ್ಣಾಗಿ 'ಮೂರ್ಖರು ಕಟ್ಟಿದ ಮನ್ಯಾಗ ಬುದ್ಧಿ ವಂತರು ಇರತಾರ' ಅಂತ ನನ್ನ ಮುಂದ ಹಾಡತಾನ.

"ಹಂಡು ಹೊಚ್ಚಸಲಿಕ್ಕೆ ಅಂತ" ಅವನ ಮನೆ ಛಪ್ಪರಾ ಹಾರಿ ಹೊಡಸು....ನಡಿ ....ಈ ಬಾಡಿಗೆದಾರ್‍ರು ಅಂದರೆ ಒಂಟಮರಿ ಇದ್ಹಾಂಗ. ಇವರಿಗೆ ಬಾಡಿಗೆ ಕೊಡೂದು ಅಂದರ ಇವರ್ನ ಒಳಗಹಾಕಿ ಮನಿ ಕಟ್ಟಿ ದ್ಹಾಂಗ. ಬಿಡಲಿಕ್ಕೆ ಒಲ್ಲರು."

"ಸ್ವಾಮಿ ನಾನೂ ತಮ್ಮ ಭಾವೀ ಬಾಡಿಗೆ ದಾರಆಗಬೇಕಂತ ಬಂದೇನಿ." ಎಂದೆ ನಾನು.

"ತಿಳೀತು ಮನೆ ಹಿಡಿಲಿಕ್ಕೆ ಸತ್ಯಾಗ್ರಹ ಮಾಡಿದ್ಹಾಂಗ ಧರಣೀ (ಸ್ಕ್ವಾಟರ್ಸ) ಕೂತ ಬಿಟ್ಟರಲ್ಲಾ. ಕಳ್ಳತನದಿಂದ ಕಾಲು ಸಂಗ್ರಹ ಮಾಡು ಅವರೇನು? ಅಂದರ ಪೋಲೀಸರ ಪಾದಧೂಳಿ ನಮ್ಮ ಚಾಳಿನ್ಯಾಗ ಮೇಲಿಂದ ಮೇಲೆ ಬೀಳತದೆ."

"ಖಂಡಿತ ಅಂಥಾ ಮನುಷ್ಯನಲ್ಲಾ. ಕಾಯಿದೆಭಂಗ ಮಾಡುವವನಲ್ಲ. ನೆಹರೂ ಸರ ಕಾರದ ಮೇಲೆ ನನ್ನದು ನಿಸ್ಸೀಮ ವಿಶ್ವಾಸ."

"ರೈತ ಪರಿಷತ್ತಿನ್ಯಾಗ ಮೊದಲನೇ ಮಾಮೂಲಿ ಠರಾವು ಇದ್ಹಾಂಗ ನೆಹರು ಸರ ಕಾರದ್ಹಾಗಿನ ನಿಮ್ಮ ವಿಶ್ವಾಸ ಯಾರು ಕೇಳಿ ದ್ದೀಗ?"

"ಮನೆ ಹುಡುಕಿ ಹುಡುಕಿ ನಾನಾ ತರಹದ ಮಾಲಕರ ಮುಲಾಖತ್ತ ಆಗೇದ. ಅದಕ ಪ್ರಶ್ನೆ ಇಲ್ಲದನ ಉತ್ತರಾ ಕೊಡೂ ಚಟಾ ಬಿದ್ದದ ನನಗ. ಬೇರೆ ಮಾಲಕರು ಕೇಳಿದ ಕೆಲವು ಪ್ರಶ್ನೆ ಮಾದರಿ ನೋಡ್ರೀ:

"ಹಿಂದೂ ಕೋಡಿನ ಬಗ್ಗೆ ನಿಮ್ಮ ಮತಾ ಏನು?

"ಕಾಶ್ಮೀರವು ಇಬ್ಭಾಗಿಸಲ್ಪಡಬೇಕೊ?

"ರಾಷ್ಟ್ರಭಾಷಾ ಹಿಂದೀ ಇರಬೇಕೊ ಹಿಂದುಸ್ಥಾನಿ ಇರಬೇಕೋ?

"ಭಾಷಾವಾರ ಪ್ರಾಂತರಚನೆಯಾದರೆ ಏನಾಗುತದ?

"ರಮಿ ಜೂಜಾಟ ಆಗುತದೇನು?

"ಥೋರ್ಡ್ ಪಾರ್ಟಿ ಅಂದರ ಯಾವದು? ಮುಂತಾದ ಅನೇಕ ಪ್ರಶ್ನೆ. ಕಾಂಗ್ರೆಸ ಸರ ಕಾರದಿಂದ ಹಿಡಕೊಂಡು ನಮ್ಮ ಅಜ್ಜನ ತಲೆ ಮ್ಯಾಲೆ ಎಷ್ಟು ಕೂದಲವ ಇಲ್ಲಿ ತನಕಾ ಪ್ರಶ್ನೆ ಕೇಳ್ಯಾರ. ಅರ್ಥ, ಕಾಮ, ಮೋಕ್ಷ ಇವು ಲಗ್ನದ ಉದ್ದೇಶ: ಇವು ಮೂರು ಬಿಟ್ಟರ ಕನ್ಯಾಕ ಹ್ಯಾಂಗ ಪ್ರಶ್ನೆ ಕೇಳತಾರೊ ಹಾಂಗ ಬಾಡಿಗೆ ದಾರರಿಗೆ ಬಾಡಿಗೆಸಂಬಂಧ ಪ್ರಶ್ನೆ ಅಷ್ಟು ಬಿಟ್ಟು ಉಳಿದ ಎಲ್ಲಾ ರಾಜಕೀಯ ಸಾಮಾಜಿಕ ಆರ್ಥಿಕ ಧಾರ್ಮಿಕ ವಗೈರೆ ವಗೈರೆ ಪ್ರಶ್ನೆ ಕೇಳತಾರ..."

ಅವನು ಒಮ್ಮಿಂದೊಮ್ಮೆ ಬೆಚ್ಚಿದವನಂತೆ ಕೂಗತೊಡಗಿದ:

"ಪಗಡಿಕೊಟ್ಟು ಬಂಧಿಸಲಿಕ್ಕೆ ಬಂದ "ಬೋಗಸ್ ಬಾಡಿಗೆದಾರ" ಅಯ್ಯೊ ಬೋ-ಗ-ಸ್ಸ ಬಾ-ಡಿ-ಗೇ-ದಾ-ರ!"

"ಕಳ್ಳನ ಜೀವ ಹುಳ್ಳಹುಳ್ಳ. ನಿಮ್ಮ ಕನ ಸಿನಲ್ಲಿ ಕೂಡಾ ಮೇಲಿಂದ ಮೇಲೆ "ಪಗಡಿ" "ಬೋಗಸ್ ಬಾಡಿಗೇದಾರ" ಇವೇ ಅಲ್ಲವೇ?"

ರಷ್ಯಾನ್ಸಿಯಲ್ಲಿ ಈಚೆಗೆ ಒಂದೇ ವಾರದಲ್ಲಿ ಎರಡು ಆತ್ಮಹತ್ಯೆಗಳ ವರದಿಯಾಗಿದೆ. ಒಂದು ಒಬ್ಬ ಇಂಟರಮೀಡಿಯೇಟ್ ವಿದ್ಯಾರ್ಥಿ ಯದು. ಬಡತನದಲ್ಲಿ ವಿದ್ಯಾಭ್ಯಾಸ ಮಾಡ ಬೇಕಾಗಿದ್ದ ಆವನು ಕಾಲೇಜ ಸಂಬಳಕ್ಕಾಗಿ ಪಾಲಕರು ಕೊಟ್ಟಿದ್ದ ೧೦ ರೂಪಾಯಿ ನೋಟನ್ನು ಕಳೆದುಕೊಂಡು ಎಷ್ಟು ಪ್ರಯತ್ನ ಪಟ್ಟರೂ ಅಷ್ಟು ಹಣ ದೊರಕಿಸಲಾರದೆ ಹತಾ ಶನಾಗಿ ನೇಣು ಹಾಕಿಕೊಂಡ. ಇನ್ನೊಬ್ಬ ಯುವಕ ಹಿಂದೀ ಕವಿ "ಶೀಲ" ಚತುರ್ವೇದಿ. ಈಚೆಗೆ ಸೀದಾ ಇನಸ್ಪೆಕ್ಟರನಾಗಿ ನೇಮಕ ಹೊಂದಿದ ಆತನು ತನ್ನ ಕಾವ್ಯಪ್ರತಿಭೆಗೆ ಯೋಗ್ಯ ಮನ್ನಣೆ ದೊರೆಯದ್ದರಿಂದ ಭಗ್ನ ಮನೋರಥನಾಗಿ ಆತ್ಮಹತ್ಯೆ ಮಾಡಿಕೊಂಡನು.

—ಹಿಂದುಸ್ತಾನ ಟೈಮ್ಸ

ಗಣೇಶಚೌತಿಯಲ್ಲಿ ಗುಡಿಗಾರರ ಕಲಾಪೂಜೆ

ಬರೆದವರು:— **ಜಿ. ಆರ್. ಹೆಗಡೆ, ಕುಮಟಾ.**

ಚೌತಿ ಹಬ್ಬ ನಮ್ಮ ಕಲಾವಿದರ ಹಬ್ಬ. ಸಾಮಾನ್ಯನಾದ ಕಸಬುದಾರ ತನ್ನ ಕೃತಿಗಳಿಂದ ನಮ್ಮಲ್ಲಿರುವ ಕಲಾಪ್ರೇಮವನ್ನು ಜಾಗ್ರತಗೊಳಿಸಲು ಅದೊಂದು ಸಂದರ್ಭ. ಪ್ರತಿ ಮನೆಗೂ ಗಣಪತಿ ವಿವಿಧ ವೇಷಭೂಷಣಗಳನ್ನು ತೊಟ್ಟು ಬರುತ್ತಾನೆ. ಅವನನ್ನು ಸ್ವಾಗತಗೊಳ್ಳುವ ನೆವದಿಂದ ಮನೆಯನ್ನೆಲ್ಲ ಸಾರಿಸಿ ಗೋಡೆಗಳಿಗೆ ಬಣ್ಣಬಳಿದು ಓರಣವಾಗಿಟ್ಟುಕೊಳ್ಳಲು ಹಬ್ಬ ಒಂದು ಕಾರಣ.

ನಾನಾರೂಪಿ ಗಣೇಶ

ಭಾದ್ರಪದ ಚೌತಿಗೆ ವಿನಾಯಕ ಸಾವಿರ ರೀತಿಯಲ್ಲಿ ರೂಪುಗೊಂಡು ಸಾವಿರ ಮನೆಗಳಲ್ಲಿ ಬರುತ್ತಾನೆ. ನಮ್ಮ ಗುಡಿಗಾರರು, ನಮ್ಮೂರಿನ ಕಲಾವಿದರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವದಕ್ಕೆ ಅದು ಒಳ್ಳೆಯ ಸಂಧಿ. ಹಳ್ಳದ ದಂಡೆಯಲ್ಲಿ ಬಿದ್ದ ಬೆನಕನ ಮಣ್ಣು ಕಲಾವಿದನ ಕೈಚಳಕಕ್ಕೆ ಸಿಲುಕಿ ಆಕಾರಪಡೆದು ಜನರ ಮನದಲ್ಲಿ ಭಕ್ತಿಯನ್ನು ಉದ್ರೇಕಿಸಿ ಪೂಜೆ ಸಲ್ಲಿಸಿಕೊಳ್ಳುವ ವಿಚಿತ್ರ ಸನ್ನಿವೇಶ ಅದು.

ಚೌತಿ ಹಬ್ಬಕ್ಕೆ ಒಂದು ತಿಂಗಳಿರುವಾಗ ಒಮ್ಮೆ ನಮ್ಮ ಗುಡಿಗಾರನ ಮನೆಗೆ ಹೋಗಿ ನೋಡಿರಿ. ಕಾಲಿಡುವದಕ್ಕೂ ಎಡೆ ಇಲ್ಲದಷ್ಟು ಕಡೆಗೆ ನೆಲವೆನ್ನದೆ, ಮಂಚ ಮಾಳಿಗೆಯೆನ್ನದೆ ಕಿಡಕಿ ಬೋದುಗಳೆನ್ನದೆ, ಗೋಡೆಯ ಮೇಲಿರುವ ಹಲಿಗೆಯೆನ್ನದೆ-ಉದ್ದಕ್ಕೂ ಎತ್ತರಕ್ಕೂ ಸಾಲುಸಾಲಾಗಿ ಬೇರೆಬೇರೆ ಭಂಗಿಯಲ್ಲಿ ಭಿನ್ನ ಭಿನ್ನ ಅಭಿರುಚಿಯುಳ್ಳ ಜನರಿಗೆ ಸೇರಿಕೆಯಾಗುವ ಹಾಗೆ ಆ ಮಣ್ಣು ವೇಷ ಹೊಂದಿ ನಿಂತಿರುತ್ತದೆ. ಪ್ರತಿಯೊಬ್ಬನೂ ತನ್ನ ಅಭಿರುಚಿಗೆ ತಕ್ಕುದಾದ, ತನ್ನ ದರ್ಜೆಗೆ ಬೇಕಾದಂಥ ಗಣಪತಿಯನ್ನು ಅಲ್ಲಿ ಕಾಣಬಹುದು. ಕಲಾವಿದ ತನ್ನ ನಾಲ್ಕಾರು ಸಂಗಡಿಗರೊಂದಿಗೆ ಅವುಗಳನ್ನು ನಿರ್ಮಿಸುತ್ತಿರುತ್ತಾನೆ. ವಿಗ್ರಹದ ರೂಪ ಶಾಸ್ತ್ರವತ್ತಾಗಿ ಇರಬೇಕಾದುದು ಮುಖ್ಯ. ಅದರ ಜೊತೆಗೆ ದೇಹದ ಅಂಗಾಂಗಳು ಪ್ರಮಾಣಬದ್ಧವಾಗಿರಬೇಕು. ಪ್ರತ್ಯೇಕತೆ ಉಳ್ಳ ಪ್ರತಿಯೊಂದು ಮಡಿಕೆಯೂ ಚನ್ನಾಗಿರಬೇಕು. ಒಂದೊಂದು ವಿಗ್ರಹವೂ ಇನ್ನೊಂದರಿಂದ ಬೇರೆಯಾಗಿರಬೇಕು. ಅದನ್ನು ರಚಿಸುತ್ತಿದ್ದಾಗ ಅದು ಮಾರಿಹೋದಮೇಲೆ ಬರಬಹುದಾದ ಹಣದ ಲೋಭಕ್ಕಿಂತ ಲೋಪದೋಷಗಳಿಲ್ಲದ ಸುಂದರ ವಿಗ್ರಹವನ್ನು ನಿರ್ಮಿಸಬೇಕೆನ್ನುವದರಲ್ಲಿಯೇ ಅವನ ಲಕ್ಷ್ಯವೆಲ್ಲ ಕೇಂದ್ರೀಕೃತವಾಗಿರುತ್ತದೆ. ಆಗ ಹೊಟ್ಟೆಪಾಡಿಗಾಗಿ ಹೊಲಸಾದರೂ ಅಡ್ಡಿಯಿಲ್ಲ, ಅದಷ್ಟು ಹೆಚ್ಚು ರಚಿಸೋಣ ಎನ್ನುವ ಕಸಬುದಾರನಿಗಿಂತ ಶ್ರಮದ ಪರಿವೆಯಿಲ್ಲದೆ ಸೌಂದರ್ಯದ ಆರಾಧನೆಮಾಡುವ ಕಲಾವಿದ ಆ ಗುಡಿಗಾರನಲ್ಲಿ ಜಾಗೃತನಾಗಿರುವದನ್ನು ನಾವು ಕಾಣಬಹುದು.

ಎಳೆಯರ ತರಬೇತಿ

ಅವನ ಸಂಗಡಿಗರೆಲ್ಲ ಅವನ ಮನೆಯವರೇ ಅವರೆಲ್ಲ ಅವನಂತೆ ಮಣ್ಣಿಗೆ ಆಕಾರ ಕೊಡುವದರಲ್ಲಿ ತೊಡಗಿರುತ್ತಾರೆ. ಅವನ ೮—೧೦ ವರ್ಷದ ಹುಗುವಿನಿಂದ ಹಿಡಿದು ಹೆಂಗಸರು, ಕೈಸಾಗದ ಮುದಕರ ತನಕ ಎಲ್ಲರಿಗೂ ಗಣಪತಿಯ ಕೆಲಸವೇ. ಬೇರೆ ಬೇರೆ ಅವಸ್ಥೆಗಳಲ್ಲಿರುವ, ಅಪೂರ್ಣವಾಗಿರುವ ನಿರ್ಮಾಪಕನ ವಿಚಾರತರಂಗಗಳ ಬೇರೆ ಬೇರೆ ಬಗೆಯ ರೂಪಗಳನ್ನು ನಾವು ಕಾಣುತ್ತೇವೆ. ಆಗ ಚಿಕ್ಕ ಕಲಾರಾಧಕರಿಗೆ ಪ್ರತ್ಯಕ್ಷ ಅನುಭವ ಕೊಟ್ಟು ಕಲಿಸುವ ಪಾಠಶಾಲೆ ಅವನ ಮನೆ. ಯಾವ ಮಟ್ಟದ ಮನಸ್ಸಿಗೂ ಕೈಕೆಲಸಕ್ಕೂ ಅಲ್ಲಿ ಅನುವಿದೆ. ಆ ಗುಡಿಗಾರನ ಮನೆಯ ಜನರೇ ಅಲ್ಲ, ನೆರೆಹೊರೆಯವರು ಕೂಡ, ವಿಗ್ರಹ ನಿರ್ಮಾಣ ಕಲೆಯ ಗಂಧವೂ ಗೊತ್ತಿಲ್ಲದವರು ಕೂಡ ಆ ಆವರಣದಲ್ಲಿ ಅದ್ಭುತವಾದ ಕೃತಿ ನಿರ್ಮಿಸಬಹುದು. ಆ ಎಲ್ಲರ ಕೃತಿಗಳಿಗೂ ಕೂಡ ತನ್ನ ಅನುಭವ ಪ್ರತಿಭೆಗಳಿಂದ ಜೀವಕಳೆ ತುಂಬುವ ಶಕ್ತಿಯುಳ್ಳ ಮುಖ್ಯಗುರು ಗುಡಿಗಾರ ಅಲ್ಲಿಯೇ ಕೂತಿರುತ್ತಾನೆ. ಸುತ್ತಲೂ ಕೆಲಸ ಮಾಡುತ್ತಿರುವವರು ಬೇರೆ ಬೇರೆ ಭಾವನೆಗಳಿಂದ ನಿರ್ಮಿಸಲು ಯತ್ನಿಸಿದ ಆ ಗೊಂಬೆಗಳು ಅವರ ಭಾವನೆಗೆ ತಕ್ಕುದಾದ ಪೂರ್ಣತೆಯನ್ನು ಅವನ ಕೈಯಲ್ಲಿ ಪಡೆಯುತ್ತವೆ. ತಪ್ಪಿದರೆ ಶಿಕ್ಷಿಸುವಗುರು ಅವನಲ್ಲ. ಎಂತಹ ತಪ್ಪು ಮಾಡಿದರೂ ಅದನ್ನು ಸುಧಾರಿಸಿ ಅದನ್ನೇ ಅದೇ ದಾರಿಯಲ್ಲಿ ಮುನ್ನಡೆದು ಪೂರ್ಣತೆಗೆ ಮುಟ್ಟಿಸಲು ಶಕ್ತಿಪಡೆದಿರುವ ಕಲಾನಿಪುಣ ಅವ. ಅವನ ದೃಷ್ಟಿಯಲ್ಲಿ ಎಳೆಯ ಕಲಾವಿದನೂ ತಪ್ಪು ಮಾಡುವದೇ ಇಲ್ಲ. ಎಳೆಯನಿಗೆ ಅದರಲ್ಲಿ ಅನುಭವ ಪರಿಶ್ರಮ ಕಡಿಮೆ. ಅವನಿಗೆ ಬೇಕಾದ ರೀತಿಯಲ್ಲಿ ನಿರ್ಮಿಸುವದಕ್ಕೆ ಬಿಟ್ಟು ತಾನು ನಿರ್ಮಿಸಿದ ವಿಗ್ರಹಗಳು ಉಳಿದ ಪೂರ್ಣ ವಿಗ್ರಹಗಳ ಜೊತೆಯಲ್ಲಿ ನಿಂತಾಗ ಎಂತಹ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ಅವನೇ ಕಂಡುಕೊಳ್ಳಲು ಬಿಟ್ಟುಬಿಟ್ಟರೆ ಅವನ ವಿಕಾಸಕ್ಕೆ ಅನುವಾಗುತ್ತದೆ ಎಂಬುದನ್ನು ಆ ಹಿರಿಯ ಕಲಾವಿದ ಬಲ್ಲ. ಉಳಿದ ಪರಿಪೂರ್ಣ ವಿಗ್ರಹಗಳ ಸಾಲಿನಲ್ಲಿ ನಿಂತಾಗ ತನ್ನ ದೋಷಗಳ ಪರಿಚಯ ತನಗೇ ಆಗುವಂತೆ ಮಾಡುವದಕ್ಕೆ ಅವನಿಗೆ ಅನುಕೂಲವಾಗುತ್ತದೆ. ಹೀಗೆ ಅಲ್ಲಿ ಹೊಸ ಕಲಾವಿದ ತನಗೆ ಗೊತ್ತಿಲ್ಲದಂತೆಯೆ ಸಮರ್ಥನಾದ ನೇತೃತ್ವದಲ್ಲಿ ಉದಯಹೊಂದುತ್ತಿರುತ್ತಾನೆ

ಹದಿನೈದು ಇಪ್ಪತ್ತು ದಿನಗಳ ಹಿಂದೆ ಬರಿಯ ಮಣ್ಣಿನ ವಿಗ್ರಹವಾಗಿದ್ದ ಗಣಪತಿಗಳೆಲ್ಲ ಚೌತಿ ಹಬ್ಬಕ್ಕೆ ಎರಡು ದಿನಗಳಿಗೆ ಮುಂಚೆ ಬಣ್ಣ ಬಳಿದುಕೊಂಡು ಬಟ್ಟೆ ಧರಿಸಿ ನಿಮ್ಮ ಮನೆಗೆ ಬರುವದಕ್ಕೆ ಸಿದ್ಧನಾಗಿ ಕೂತಿರುತ್ತವೆ. ಕೆಂಪುದಾಸಾಳದ ಬಣ್ಣ ಬಡಿದುಕೊಂಡು ಭಯಂಕರಾಕಾರ ಹೊಂದಿರುವದರಿಂದ ಹಿಡಿದು ಗಾಂಧಿ ಟೊಪ್ಪಿಗೆಹಾಕಿಕೊಂಡು ತಿರಂಗಿ ಝುಂಡಾ ಹಿಡಿದು ತಕಲಿ ತಿರುಗಿಸುವ ಕಾಂಗ್ರೆಸ್ ಗಣಪತಿಯ ತನಕ ಹಲವು ಭಂಗಿಗಳಲ್ಲಿ ಬೇರೆ ಬೇರೆ ಭಾವವನ್ನು ಪ್ರದರ್ಶಿಸುತ್ತ ನಿಂತಿರುವ ಅನೇಕ ಗಣಪತಿ ವಿಗ್ರಹಗಳು ನಮಗೆಆಶ್ಚರ್ಯವನ್ನುಂಟುಮಾಡುತ್ತವೆ. ಸಾವಿರಾರು ರೂಪಾಯಿಗಳನ್ನು ವೆಚ್ಚಮಾಡಿ ಕಲಾಶಾಲೆಗಳಲ್ಲಿ ಏರ್ಪಡಿಸುವ ಕಲಾಪ್ರದರ್ಶನಗಳಿಗಿಂತ ಹೆಚ್ಚು ಯಶಸ್ವಿಯಾಗಿ ಸಾಮಾನ್ಯನಿಂದ ಹಿಡಿದು ತೀವ್ರ ಕಲಾಪ್ರೇಮಿಯ ತನಕ ಎಲ್ಲರನ್ನೂ ಆಕರ್ಷಿಸುವ ನಮ್ಮ ಊರಿನ ಕಲಾವಿದನ ನೈಪುಣ್ಯದ ಪ್ರದರ್ಶನ ದೊಡ್ಡ ಪ್ರಮಾಣದಲ್ಲಿ ಆಗ ಅಲ್ಲಿ ನಡೆಯುತ್ತದೆ.

ವಿಗ್ರಹವನ್ನು ನಿರ್ಮಾಣಮಾಡಿದ ಕೈಯೇ ಬಣ್ಣದ ಕುಂಚವನ್ನು ಹಿಡಿದು ತನ್ನ ಶಕ್ತಿಯನ್ನು ತೋರಿಸುತ್ತದೆ. ಬೇರೆ ಬೇರೆ ಬಣ್ಣಗಳ ಮಿಶ್ರಣ; ಅವುಗಳ ಬೀಳುವ ಪರಿಣಾಮ ಎಲ್ಲಿ ಎಷ್ಟು ಬಣ್ಣ ಹಾಕಬೇಕು, ಯಾವ ಭಾವನೆಯನ್ನು ಪ್ರದರ್ಶಿಸುವದಕ್ಕೆ ಯಾವ ಬಣ್ಣ ಚನ್ನಾಗುತ್ತದೆ, ಇವೆಲ್ಲ ಸೂಕ್ಷ್ಮವನ್ನು ಆ ಕುಶಲ ಗುಡಿಗಾರ ಗ್ರಹಿಸಿರುತ್ತಾನೆ. ತಾನೇ ಮೂರ್ತಿನಿರ್ಮಾಪಕನಾಗಿ, ತಾನೇ ಮಾರಾಟಗಾರನಾಗಿ, ತಾನೇ ಗಿರಾಕಿಯ ವಿಮರ್ಶಕನ ಕಣ್ಣನ್ನು ಪಡೆಯಕೊಂಡಿರಬೇಕಾಗಿದೆ ಅವನಿಗೆ. ಆಗ ಅದನ್ನರಿತೇ ಆ ವಿಗ್ರಹಗಳು ರೂಪುಗೊಂಡಿರುತ್ತವೆ.

ಅಲ್ಲಿ ಸಿದ್ಧವಾಗಿರುವ ಒಂದೊಂದು ವಿಗ್ರಹವೂ ಅವನ ಗಿರಾಕಿಗಳ ಮನಸೆಳೆಯುವಂತಹದು. ಗಿರಾಕಿಯ ಅಭಿರುಚಿ ಕಲಾವಿದನ ಪ್ರತಿಭೆಗೆ ಜೊತೆಗೊಂಡು ನಮ್ಮ ಗುಡಿಗಾರ ಕಲಾವಿದನ ಕೈಚಾಣ ಕುಂಚಗಳನ್ನು ಓಡಿಸಿ ಮಣ್ಣಿಗೆ ವಿಶಿಷ್ಟರೂಪವನ್ನು ಕೊಡುತ್ತಾನೆ. ಅಂದು ಚೌತಿ ಹಬ್ಬದ ದಿನ ಗಣಪತಿಯನ್ನು ಒಯ್ಯಲು ಬರುವ ಪ್ರತಿಯೊಬ್ಬನಿಗೂ ತಾನು ಒಯ್ಯುವ ವಿಗ್ರಹ ಇನ್ನೊಬ್ಬನದಕ್ಕಿಂತ ಚನ್ನಾಗಿರಬೇಕೆಂದಾಸೆ. ಅವರೆಲ್ಲರಿಗೂ ಸಮಾಧಾನವಾಗುವ ಹಾಗೆ ವಿಗ್ರಹಗಳನ್ನು ತಯಾರಿಸಿಟ್ಟಿರುತ್ತಾನೆ. ಅಂದು ಗುಡಿಗಾರನ ಮನೆ ಅವನಲ್ಲಿರುವ ಕಲಾವಿದನ ಪ್ರತಿಭೆಯು ರೂಪಹೊಂದಿ ಸಾಮಾನ್ಯನ ಕೈಗೆ ಕಣ್ಣಿಗೆ ಮನಕ್ಕೆ ಹಬ್ಬವನ್ನುಂಟುಮಾಡುತ್ತದೆ. ಸಾಮಾನ್ಯನ ಕೈಗೆ ಕಲಾಪೂರ್ಣವಾದ ಕೃತಿಯೊಂದು ಸಿಕ್ಕಿ ಅವನ ಜೀವನ ಹಿಗ್ಗಲು ಅನುವುಮಾಡಿಕೊಡುತ್ತಾನೆ. ನಮ್ಮ ಗುಡಿಗಾರ ಚೌತಿಹಬ್ಬದ ದಿನ.

ಉಪನ್ಯಾಸ ಸಮ್ರಾಟ ಪ್ರೇಮಚಂದ

[ಲೇಖಕರು: ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪ]

ಪ್ರೇಮಚಂದರು ಹಿಂದೀ ಸಾಹಿತ್ಯ ಕ್ಷೇತ್ರದಲ್ಲೆಲ್ಲ ಸರ್ವಶ್ರೇಷ್ಠ ಲೇಖಕರು. ಕೇವಲ ಹಿಂದೀ ಭಾಷೆಯಲ್ಲಿ ಅವರ ಅಮರ ಕೃತಿಗಳು ಇರುವತನಕ ಜನತೆ ಅವರ ಪ್ರತಿಭಾಪ್ರಗಲ್ಭತೆಯ ಮಹತ್ವ, ವ್ಯಕ್ತಿತ್ವ ಮತ್ತು ಕಲಾಕುಶಲತೆಗಳನ್ನು ತಿಳಿಯಲಾರದು. ಇತರ ಪ್ರಸಿದ್ಧ ಭಾಷೆಗಳಲ್ಲಿ ಭಾಷಾಂತರವಾದ ಬಳಿಕ ಪ್ರತಿಯೋರ್ವನೂ ಇಂತಹ ಕೃತಿರತ್ನಗಳು ಇದಕ್ಕಿಂತ ಮುಂಚೆಯೇ ತಮ್ಮ ಭಾಷೆಗೆ ಬರಬೇಕಿತ್ತೆಂದೆನ್ನದಿರಲಾರರು. ಅಷ್ಟು ಮೇಲ್ಮಟ್ಟದವು ಪ್ರೇಮಚಂದರ ಕೃತಿಗಳು.

ಪ್ರೇಮಚಂದರ ಸಾಹಿತ್ಯ ಅಗಾಧ ಮತ್ತು ಅಪಾರ. ಮಾತಿನ ಸ್ವಚ್ಛತೆ ಹೆಜ್ಜೆ ಹೆಜ್ಜೆಗೂ ಶಾರಂತರ ಕೃತಿಗಳನ್ನು ನೆನಪಿಗೆ ತರುತ್ತದೆ. ಅತಿ ಕಠಿಣ ಜಟಿಲ ಸಮಸ್ಯೆಗಳನ್ನೂ ತನ್ನ ನಿತ್ಯವ್ಯವಹಾರದ ವಿಚಾರದಂತೆ ಬಿಡಿಬಿಡಿಯಾಗಿ ಸರಳ ಶೈಲಿಯಲ್ಲಿ ಲಲಿತವಾಗಿ ಹಲವೇ ಶಬ್ದಗಳಲ್ಲಿ ವಿವರಿಸುವ ಹಿರಿಮೆ ಪ್ರೇಮಚಂದರ ವಶವಾಗಿದೆ. ಅತಿ ಗೂಢ ಗಹನವಾದುದನ್ನೂ ಸ್ಪಷ್ಟವಾಗಿ ಮನಮುಟ್ಟುವಂತೆ ಚಿತ್ರಿಸುವ ಶಕ್ತಿ ಬೇರೆ ಕಡೆಗಳಲ್ಲಿ ಸಿಗದು. ಹಲವೆಡೆಗಳಲ್ಲಿನ ವಾಕ್ಯಗಳನ್ನು ಬಾಯಿಪಾಠ ಮಾಡಿಕೊಂಡರೂ ಕೆಡನಿಸುತ್ತದೆ.

ಪಾತ್ರಗಳಲ್ಲಿ ಜೀವಕಳೆ

ಇನ್ನು ಅವರ ಕಾದಂಬರಿಗಳಲ್ಲಿನ ಪಾತ್ರಗಳು, ಆ ಪಾತ್ರಗಳ ಸಂಪೂರ್ಣ ಮೂರ್ತಿಯನ್ನೂ ಜೀವಂತಾಕೃತಿಯನ್ನೂ ಓದುಗರ ಮುಂದೆ ಇಡುತ್ತಾ ಅವುಗಳ ಉತ್ಥಾನ-ಪತನ, ಅವುಗಳಿಗಾಗುವ ಘಾತ-ಪ್ರತಿಘಾತ, ಸುಖ-ದುಃಖ ಹಾಗೂ ಕಷ್ಟನಷ್ಟಗಳನ್ನು ಸಂಪೂರ್ಣವಾಗಿ ಪರಿಚಯ ಮಾಡಿಕೊಡುತ್ತವೆ. ಅವ ಪಾತ್ರವನ್ನೂ "ಇದಿಲ್ಲದಿದ್ದರೂ ಆಗುತ್ತಿತ್ತು" ಎಂದೆನ್ನುವಂತಿಲ್ಲ. ಪ್ರತಿಯೊಂದು ವ್ಯಕ್ತಿಯ ಕುರಿತು ಶ್ರದ್ಧೆ, ಪ್ರೀತಿ, ವಿಸ್ಮಯ ತನ್ನಿಂದ ತಾನೇ ಆಗುತ್ತಿದೆ. ಶರಚ್ಚಂದ್ರರ ಕೃತಿಗಳ ನ್ನೋದುವಾಗ ಅನೇಕ ಕಡೆಗಳಲ್ಲಿ ಪುಸ್ತಕ ಮುಚ್ಚಿಟ್ಟು ಚೆನ್ನಾಗಿ ಕೆಲನಿಮಿಷ ಅತ್ತು ತಿರುಗಿ ಓದುವ ಸಂದರ್ಭಗಳಿವೆ. ಆದರೆ ಪ್ರೇಮಚಂದರ ಕೃತಿಗಳಲ್ಲಿ ಅಂತಹುದಕ್ಕೆಡೆಯಿಲ್ಲ. ಪ್ರತಿಯೊಂದೆಡೆಯಲ್ಲೂ ಓದುಗರು ಪಕ್ಷಪಾತಿಗಳಾಗಿ ಮುಂದುವರಿಯುತ್ತಾರೆ.

ಬಾಬೂ ಪ್ರೇಮಚಂದರು ಹಿಂದೀ ಸಾಹಿತ್ಯ ಕ್ಷೇತ್ರಕ್ಕೆ ಬರುವುದಕ್ಕಿಂತ ಮೊದಲು ಉರ್ದೂ ಸಾಹಿತ್ಯಗಣದ ವ್ಯವಸಾಯಿಯಾಗಿದ್ದರು. ಕಾರಣ ಹಿಂದೀ ಸಾಹಿತ್ಯಪ್ರಪಂಚದ ಪ್ರಕೃತಿ ಸೌಂದರ್ಯವನ್ನು ಮರೆಮಾಚದೆ ಅದಕ್ಕೆ ಉರ್ದೂ ಸಾಹಿತ್ಯೋದ್ಯಾನದ ಸೊಬಗು ಮತ್ತು ಸೊಗಸನ್ನಿತ್ತು ಮಿರುಗುಗೊಳಿಸಿದರು. ಓರ್ವ ವ್ಯಕ್ತಿ ಕಾದಂಬರಿಕಾರನೆಂದ ಬಳಿಕ ಅವನು ಪಾತ್ರಕ್ಕುಚಿತ ಮಾತುಗಾರಿಕೆಯನ್ನು, ಭಾವಕ್ಕೆ ತಕ್ಕ ಕಥನೋಪಕಥನಗಳನ್ನು ಬಳಸಿಕೊಂಡಿದ್ದರೇನೇ ಸಾರ್ಥಕ. ಆ ಶಕ್ತಿ ಇದ್ದರೇನೇ ಅವ ಉದ್ದಾಮ ಲೇಖಕ. ಅದೇ ಶಕ್ತಿ ಪ್ರೇಮಚಂದರಲ್ಲಿ ಬುಡದಿಂದ ಕೊನೆವರೆಗೂ ಕಾಣಸಿಗುವುದು. ಭಿನ್ನ ಭಿನ್ನ ಪಾತ್ರ, ವಿವಿಧ ಸಂದರ್ಭಗಳಲ್ಲಿನ ಅವರ ಮಾತಿನ ಜಾಣ್ಮೆ ಇನ್ನೆಲ್ಲೂ ಸಿಗಲೊಲ್ಲದು. ಚರಿತ್ರ ಚಿತ್ರಣ ಮಾಡುವಾಗ ಭಿನ್ನಭಾಷೆಯ ಅವಶ್ಯಕತೆಯಿದ್ದಂತೆ ಭಾವವ್ಯಂಜನದಲ್ಲೂ ಭಿನ್ನ ಭಾಷೆಯ ಅವಶ್ಯಕತೆ ಇರುತ್ತದೆ. ಇಕ್ಕಡೆಯಲ್ಲೂ ಪ್ರೇಮಚಂದರು ಸಾಹಸಿಗಳು. ಅವರ ಕೃತಿಗಳಲ್ಲಿ ದೀನರು, ಬಡವರು, ಬಲ್ಲಿದರು, ಮೂರ್ಖರು, ಪಂಡಿತರು. ಪಾಮರರು, ಸ್ತ್ರೀ-ಪುರುಷರು, ಹಿಂದೂ-ಮುಸಲ್ಮಾನರು ಹೀಗೆ ಎಲ್ಲಾ ರೀತಿಯವರೂ ಬಂದು ಹೋಗುತ್ತಾರೆ. ಪ್ರತಿಯೊಬ್ಬನೂ ತನಗುಚಿತ ಮಾತುಗಾರಿಕೆಯಿಂದಲೇ ಎಲ್ಲರಿಗೂ ಚಿರಪರಿಚಿತನಾಗುತ್ತಾನೆ. ಉರ್ದೂ ಸಾಹಿತ್ಯದಲ್ಲೂ ಅವರ ಪರಿಶ್ರಮವಿರುವ ಕಾರಣ ಅವರ ಮುಸಲ್ಮಾನ ಪಾತ್ರಗಳು ಜೀವಂತವಾಗಿ ಬರುತ್ತವೆ. ವಿವಿಧ ರಸ ಭಾವಗಳ ನಿರೂಪಣೆಯಲ್ಲಿಯೂ ಭಾಷೆಯ ರೀತಿ ಅನುರೂಪವಾಗಿರುತ್ತದೆ

ವಿಶ್ವ ಕ್ಷೇತ್ರ

ಪ್ರೇಮಚಂದರಿಗಿಂತಮೊದಲಹಿಂದೀಸಾಹಿತ್ಯ ವಿಲಾಸಸಾಹಿತ್ಯವಾಗಿದ್ದು ಕೆಲವೇ ಉಚ್ಚ ವರ್ಗದವರ ಮಹತ್ವವನ್ನೇ ಚಿತ್ರಿಸುವ ರಚನೆಯಾಗಿತ್ತು. ಪ್ರೇಮಚಂದರು ಮಾತ್ರ ಈ ವಿಶಾಲವಿಶ್ವವನ್ನೇ ತಮ್ಮ ಸಾಹಿತ್ಯ ಕ್ಷೇತ್ರವನ್ನಾಗಿ ಆರಿಸಿದರು. ಮಾತ್ರವಲ್ಲದೆ ದೀನ ದಲಿತರ, ಶೋಕಾರ್ತಜೀವಿಗಳ ಆರ್ತನಾದವನ್ನು ಉಚ್ಚ ಸ್ವರದಲ್ಲಿ ಜನಮನ ಕದಡುವಂತೆ ಉದ್ಘೋಷಿಸಿ, ಅವರ ಕಷ್ಟಪರಂಪರೆಯನ್ನು ಜೀವಂತವಾಗಿ ಚಿತ್ರಿಸಿ ಅವರನ್ನು ಮೇಲ್ಮಟ್ಟಕ್ಕೆ ತಂದಿರಿಸುವ ಹಿರಿಗೆಲಸವನ್ನು ಕೈಗೊಂಡರು. ಕಾರಣ ಅವರ ಗ್ರಂಥಗಳು ಭಾರತೀಯರ ಧರ್ಮ ಗ್ರಂಥವೆಂದರೂ ತಪ್ಪೆನಿಸದು. ಅವರ ಕೃತಿಗಳು ಆರ್ತ ಜನಪಕ್ಷದ ಸಾಹಿತ್ಯವೆನ್ನಲೂಬಹುದು. ಅಂತೂ ಅವರ ರಚನೆಗಳಿಂದ ನಮ್ಮೊಳಗಣ ಟೊಳ್ಳನ್ನು ಕಾಣುವಂತಾಯಿತು. ನಮ್ಮ ಕೌಟುಂಬಿಕ, ಸಾಮಾಜಿಕ ಹಾಗೂ ರಾಜಕೀಯ ಜೀವನದಲ್ಲಿ ಹಲವಾರು ಕುರೀತಿಗಳು ಹಲವಾರು ವರ್ಷಗಳಿಂದ ತುಂಬಿದ್ದು, ಅವುಗಳ ಮೂಲ ತತ್ವವನ್ನಾವರಿಸಿದ್ದುವು. ಅವುಗಳ ನೈಜಶಕ್ತಿ ನಿರ್ನಾಮವಾಗಿತ್ತು. ಅಂತಹದರ ಪುನರ್ನಿರ್ಮಿತಿಯೇ ಪ್ರೇಮಚಂದರ ಉದ್ದೇಶ. ಈಶ್ವರನಲ್ಲಿ ಅವರ ಭಕ್ತಿಭಾವವೆಂತಿದ್ದಿತೋ? ಅಂತೂ ಅವರು ದೀನದಲಿತರ ಪೈಗಂಬರರಾದರು. ಹಲವಾರು ವರ್ಷಗಳಿಂದ ತಿರಸ್ಕರಿಸಲ್ಪಡುತ್ತಿದ್ದ ವೇಶ್ಯೆಯರ, ವಿಧವೆಯರ, ಭಿಕ್ಷುಕರ ಹಾಗೂ ಒಕ್ಕಲಿಗರ ದೀನವಾಣಿಯನ್ನು ಉದ್ಘೋಷಿಸಿ, ಅವರನ್ನು ಮನುಷ್ಯರೆಂದು ಸಾರಿ ತೋರಿಸಿದ ಮಹಾವ್ಯಕ್ತಿ ಪ್ರೇಮಚಂದ. ಜನತೆ ಅಸ್ವತಂತ್ರತೆಯ ಕೊಳೆನೀರಿನ ಕೊಳದಲ್ಲಿ ತೊಳಲುತ್ತಿದ್ದಾಗ ಅವರ ಕಷ್ಟಗಳನ್ನು ನಿರ್ನಾಮ ಮಾಡುವ ಉದಾತ್ತ ಧ್ಯೇಯವನ್ನು ಕೈಕೊಂಡ ಉದ್ದಾಮವ್ಯಕ್ತಿ ಪ್ರೇಮಚಂದ.

ಮುಖ್ಯ ಕೃತಿಗಳು

ಪ್ರೇಮಚಂದರು ಆದಿಯಲ್ಲೇ ಒಂದು ಹಿರಿ ಉದ್ದೇಶವನ್ನು ಹಿಡಿದುಕೊಂಡು ಸಾಹಿತ್ಯ ಕ್ಷೇತ್ರಕ್ಕೆ ಬರುತ್ತಾರೆ. ಅಲ್ಲದೆ ಹಿಂದೂ ಸಮಾಜದ ಕಠಿಣ ಸಮಸ್ಯೆಗಳನ್ನು ಬಿಡಿಸುತ್ತಾರೆ. "ಪ್ರೇಮಾ" ಅವರ ಪ್ರಥಮ ಕಾದಂಬರಿ. ಆದರೆ ಈ ಸಣ್ಣ ಕಾದಂಬರಿಯು ಬೃಹತ್ಕಥೆಯನ್ನು ಹೇಳಹೊರಟರೂ ಎಷ್ಟು ಚೆನ್ನಾಗಬೇಕಿತ್ತೋ ಅಷ್ಟು ಚೆನ್ನಾಗಿಲ್ಲವೆಂದು ಹಲವರ ಮತ. ಎರಡನೆ ಕಾದಂಬರಿ "ಸೇವಾಸದನ". ವರದಕ್ಷಿಣೆಯಿಂದಾಗಿ ಎಷ್ಟು ಭೀಕರ ಅನರ್ಥದಾಗುತ್ತದೆಯೆಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ ಕಾದಂಬರಿಯಿದು. ಅವರ ವಿಶ್ವಪ್ರೇಮದ ಆದರ್ಶವನ್ನೂ "ಸೇವಾಸದನ"ದಲ್ಲಿ ಕಾಣಬಹುದು.

ಮೂರನೇ ಕಾದಂಬರಿ "ಪ್ರೇಮಾಶ್ರಮ". ಕೃಷಿಕರ ದುರವಸ್ಥೆ, ಜಮೀನ್ದಾರರ ಅತ್ಯಾಚಾರ, ವಕೀಲರು, ಪೋಲೀಸರು ಮೊದಲಾದ ಮೇಲಧಿಕಾರಿಗಳ ದುಷ್ಕೃತ್ಯಗಳನ್ನು ವಿವರವಾಗಿ ಚಿತ್ರಿಸಿದ ಕಾದಂಬರಿಯಿದು. "ರಂಗಭೂಮಿ" ಅವರ ಅತ್ಯುತ್ತಮ ಕೃತಿಯೆನ್ನಬಹುದು. ಪಾರಸ್ಪರಿಕ, ಸಾಮಾಜಿಕ, ರಾಜನೈತಿಕ ಜೀವನದ ಮನೋವೈಜ್ಞಾನಿಕ ಚಿತ್ರಣವನ್ನು ಇದರಲ್ಲಿ ಚಿತ್ರಿಸಿದ್ದಾರೆ. "ರಂಗಭೂಮಿ"ಯ ಕಥಾವಸ್ತುವಿನ ಪ್ರಧಾನಾಂಗ ಸತ್ಯಾಗ್ರಹಸಂಗ್ರಾಮ, ಮತ್ತಿದರಲ್ಲಿ ನಿಃಸ್ವಾರ್ಥ ಭಾವದಿಂದ ಸೇವೆ ಮಾಡುವ ವ್ಯಕ್ತಿಯ ವಿಜಯ. ಇದನ್ನು ರಾಷ್ಟ್ರೀಯ ಸಾಹಿತ್ಯವೆಂದರೆ ಸರಿಯಾಗಿ ಕಾಣಬಹುದು. ಸಮಾಜದ ಸಮರಕ್ಷೇತ್ರದಲ್ಲಿ ಪುರುಷನಂತೆ ಸ್ತ್ರೀಯೂ ಉದಾತ್ತ ಕಾರ್ಯವನ್ನು ಮಾಡಬಲ್ಲಳೆಂಬುದರ ಪ್ರದರ್ಶನ "ರಂಗಭೂಮಿ"ಯ ವೈಶಿಷ್ಟ್ಯ. ಇದರಲ್ಲಿದ್ದಷ್ಟು ಧೀರೋದಾತ್ತ ವ್ಯಕ್ತಿಗಳು ಬೇರೆಡೆಯಲ್ಲಿ ಸಿಗಲಾರರು. ಅಂತೂ "ರಂಗಭೂಮಿ" ಯುಗಯುಗಾಂತರಗಳ ತನಕ ಉಳಿಯುವ ಕೃತಿ.

"ಕಾಯಾಕಲ್ಪ"ದಲ್ಲಿ ಆಧ್ಯಾತ್ಮಿಕ ವಿಚಾರ ನಮ್ಮನ್ನಾಕರ್ಷಿಸುತ್ತದೆ. ಕರ್ತವ್ಯ ಮತ್ತು ತ್ಯಾಗದಿಂದ ದಿವ್ಯ ಪ್ರೇಮದ ಶೋಭೆ ಹೇಗೆ ಬೆಳಗಬಹುದೆಂಬುದನ್ನು "ಕಾಯಾಕಲ್ಪ"ದಲ್ಲಿ ಕಾಣಬಹುದು. ನಂತರದ ಕೃತಿಯೇ "ಗಬನ್" ಇದರ ಕನ್ನಡ ಅನುವಾದವೇ ಕು. ಶಿ. ಹರಿದಾಸಭಟ್ಟರ "ರಮಾನಾಥ". ಮಾನವ ಎಷ್ಟರ ಮಟ್ಟಿಗೆ ದುರ್ಬಲ ಮತ್ತು ಸಮರ್ಥನೆಂಬುದನ್ನು "ಗಬನ್"ನಲ್ಲಿ ಕಾಣಬಹುದು. ಅತಿ ಸೂಕ್ಷ್ಮ ತಪ್ಪು ಮನುಷ್ಯನನ್ನೆಷ್ಟು ಕೆಳಮಟ್ಟಕ್ಕಿಳಿಸುತ್ತದೆ, ಪರಿಸ್ಥಿತಿಯ ಪ್ರಬಲ ಪ್ರವಾಸದಿಂದ ವ್ಯಕ್ತಿ ಯಾವ ರೀತಿಯಲ್ಲಿ ಮೇಲೆ ಕೆಳಗೆ ಬೀಳುತ್ತೇಳುತ್ತ ಜೀವಿಸುತ್ತಾನೆಂಬುದನ್ನು "ಗಬನ್"ನಲ್ಲಿ ಕಾಣಬಹುದು. ಸ್ತ್ರೀಯರ ಆಭರಣ ಪ್ರೇಮದಿಂದ ಗಂಡಂದಿರು ಅದೆಷ್ಟು ಕಷ್ಟನಷ್ಟಗಳನ್ನೆದುರಿಸಬೇಕಾಗುತ್ತದೆ, ಪ್ರೇಮದಿದಿರು ಸುಳ್ಳು ಸ್ವಪ್ನದಂತೆ ವಿದ್ಯಾಗರ್ವ ಎಂತು ಆದರ ದಿವ್ಯ ಸ್ವರೂಪವನ್ನು ಕಲುಷಿತಗೊಳಿಸುತ್ತದೆಂಬುದನ್ನು ಬಯಲಿಗೆಳೆಯುವುದು "ಗಬನ್"ನ ಉದ್ದೇಶ.

"ನಿರ್ಮಲಾ", "ಪ್ರತಿಜ್ಞಾ"ಗಳೆರಡು ಚಿಕ್ಕದರಲ್ಲಿ ಚೆನ್ನಾದ ಕಾದಂಬರಿಗಳು. "ನಿರ್ಮಲಾ"

೧೨ ನೆಯ ಪುಟಕ್ಕೆ

...ವನ್ನು ೧೫ ವರ್ಷ ಹಿಂದೀ ಮತ್ತು ಇಂಗ್ಲಿಶ ಭಾಷೆ

...ಕರಡುಸಮಿತಿಯ ಹೊಸ ಕಲಮು— ಎಡಪಕ್ಷಗಳ ಒಕ್ಕೂಟದ ಮಾತುಕತೆ ...ಮುರಿದವು; ಡಾ. ರಾಧಾಕೃಷ್ಣನ್‌ಗೆ ...

...ಘಟನಾಸಮಿತಿ

...ದೀ ಇಡೀ ಹಿಂದುಸ್ತಾನದಲ್ಲಿ ನಿರಾಶ್ರಿತರ ...ಸ್ತಿಯ ಸಂಬಂಧದಲ್ಲಿ ಒಂದೇ ಬಗೆಯ ...ಶಾಸನವು ಇರಬೇಕೆಂದೂ ಹೊಸ ಘಟನೆಯು ...ಕಾಲಂ ನೇ ಜಾನೇವರಿ ೨೬ ಕ್ಕೆ ಜಾರಿಯಲ್ಲಿ ಬರುವ ಮೊದಲು ಯಾವದೇ ಪ್ರಾಂತದ ...ಶಾಸನ ಸಭೆಯ ಸಾರ್ವತ್ರಿಕ ಚುನಾವಣೆಯನ್ನು ...ನಡೆಸುವದಾದರೆ ಆ ಬಗ್ಗೆ ಅವಶ್ಯವಿರುವ ಅಜ್ಞೆ ...ಗಳನ್ನು ಹೊರಡಿಸಲು ಗವರ್ನರ ಜನರಲ್‌ರಿಗೆ ...ಅಧಿಕಾರವಿರಬೇಕೆಂದೂ ಶ್ರೀ ಗೋಪಾಲ ...ಸ್ವಾಮಿ ಅಯ್ಯಂಗಾರರು ಮುಂಡಿಸಿದ ಗೊತ್ತು ...ವಳಿ ಘಟನಾ ಸಮಿತಿಯಲ್ಲಿ ೧೯ ಕ್ಕೆ ...ಸ್ವೀಕೃತವಾಯಿತು. ಈ ಮಸೂದೆಯನ್ನು ...ಮುಂಡಿಸಲು ಅಪ್ಪಣೆ ಕೊಡಬಾರದೆಂದು ...ಮೌಲಾನಾ ಹಜರತ ಮೊಹಾನಿಯವರೊಬ್ಬರೇ ...ಹೇಳಿದರು. ವಿಶೇಷ ಚರ್ಚೆಯ ನಂತರ ...ಮಸೂದೆಯು ಸ್ವೀಕೃತವಾಯಿತು.

...ಹಿಂದೀ ಒಕ್ಕೂಟದ ಘಟಕಗಳ ಮೇಲ್ಮನೆ ...ಗಳ ಸಂಬಂಧದಲ್ಲಿ ಘಟನಾ ಸಮಿತಿಯಲ್ಲಿ ...ಕರಡು ಸಮಿತಿಯ ಅಧ್ಯಕ್ಷರಾದ ಡಾ. ಅಂಬೇ ...ಡಕರರು ೧೯ಕ್ಕೆ ಮುಂಡಿಸಿದ ಗೊತ್ತುವಳಿಯೂ ...ಸ್ವೀಕೃತವಾಯಿತು. ಈ ಕಲಮಿನಲ್ಲಿ ಪಾರ್ಲ ...ಮೆಂಟು, ಘಟಕ, ಮೇಲ್ಮನೆಗಳ ವಿಷಯದಲ್ಲಿ ...ತೀರ ಭಿನ್ನವಾದ ನಿರ್ಣಯ ಕೈಗೊಳ್ಳುವವರೆಗೆ ...ಘಟಕಗಳ ಮೇಲ್ಮನೆಯ ಸದಸ್ಯರ ಸಂಖ್ಯೆ ...ಯು ಆ ಘಟಕದ ಶಾಸನ ಸಭೆಯ ಸದಸ್ಯರ ...ಒಟ್ಟು ಸಂಖ್ಯೆಯ ಒಂದುನಾಲ್ಕಾಂಶಕ್ಕಿಂತ ...ಹೆಚ್ಚಾಗದಷ್ಟು ಆದರೆ ೪೦ ಕ್ಕಿಂತ ಕಡಿಮೆ ...ಯಿಲ್ಲದಷ್ಟು ಇರಬೇಕು. ಮೇಲ್ಮನೆಯ ಸದ ...ಸ್ಯರಲ್ಲಿ ಒಂದುಮೂರಾಂಶ ಸದಸ್ಯರು ಆ ಘಟ ...ಕದಲ್ಲಿರುವ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ...ಸದಸ್ಯರಿಂದ, ಒಂದುಮೂರಾಂಶ ಸದಸ್ಯರು ...ಘಟಕದ ಶಾಸನ ಸಭೆಯಿಂದ ಒಂದುಹನ್ನೆರ ...ಡಾಂಶ ಪದವೀಧರರಿಂದ, ಒಂದುಹನ್ನೆರ ...ಡಾಂಶ ಶಿಕ್ಷಕರಿಂದ ಉಳಿದವರು ಗವರ್ನರ ...ರಿಂದ ಆರಿಸಲ್ಪಡಬೇಕು ಎಂದು ಹೇಳಿದೆ. ...ಹದಿನೈದು ದಿನಗಳ ಹಿಂದೆ ಈ ಕಲಮಿನ ಚರ್ಚೆ ...ನಡೆದಾಗ ಇದರ ಪುನರ್ವಿಚಾರ ಮಾಡ ...ಬೇಕೆಂದು ಹೇಳಲಾಗಿತ್ತು. ಅದಕ್ಕನುಸಾರ ...ವಾಗಿ ಕರಡು ಸಮಿತಿಯ ಅಧ್ಯಕ್ಷರು ಈ ...ಮಸೂದೆಯನ್ನು ಮುಂಡಿಸಿರುವರು ಈ ಕಲ ...ಮಿನ ಮೇಲೆ ಚರ್ಚೆ ನಡೆದಾಗ ಪದವೀಧರರಿಗೆ ...ಮತಾಧಿಕಾರ ಬೇಡ ಎಂದೂ ಪ್ರತಿಪಾದಿಸ ...ಲಾಯಿತು. ಹಿಂದುಸ್ತಾನದ ಯಾವದೇ ವಿಶ್ವ ...ವಿದ್ಯಾಲಯದ ಪದವೀಧರನಾಗಿ ಮೂರು ...ವರ್ಷ ಕಾಲ ಗತಿಸಿದವನು ಸಾಮಾನ್ಯವಾಗಿ ...ವಾಸ ವಾಸಿಸುವ ಘಟಕದಲ್ಲಿ ಮೇಲ್ಮನೆಯ ...ಮತಾಧಿಕಾರ ಪಡೆದವನಾಗುವನು ಎಂಬದಾಗಿ ...ಕರಡುಸಮಿತಿಯವರು ತಂದ ಉಪಸೂಚನೆಯೊಂ ...ದಿಗೆ ಮೂಲ ಕಲಮು ಸ್ವೀಕೃತವಾಯಿತು.

...ಅಧ್ಯಕ್ಷರಿಗೆ ಅಧಿಕಾರ

...ಒಕ್ಕೂಟ ಅಧ್ಯಕ್ಷರಿಗೆ ಕಠಿಣಸಮಯ ...ದಲ್ಲಿ ಕೊಡುವ ಅಧಿಕಾರಗಳಿಗೆ ಸಂಬಂಧಿಸಿದ ...ರಡು ಕಲಮುಗಳನ್ನು ೨೦ ನೇ ತಾರೀಕಿನ ...ದಿನ ಸ್ವೀಕರಿಸಲಾಯಿತು. ಇಂದಿನ ಚರ್ಚೆಯೂ ...ಕ್ಕೆ ತುಂಬಿಸಿದ್ದಾಗಿದ್ದಿತು. ಪ್ರಾಂತ ಕೇಂದ್ರ ...ಗಳಲ್ಲಿಯೂ ಪಾರ್ಲಮೆಂಟರಿ ವ್ಯವಸ್ಥೆಯಲ್ಲಿ ಆವಶ ...ದ ಸಮಯದಲ್ಲಿ ಅಧ್ಯಕ್ಷನು ತಿದ್ದುಪಡಿಮಾಡ ...ಬಹುದೆಂದು ಇದು ಪ್ರಜಾಪ್ರಭುತ್ವಕ್ಕೆ ಅಪಾ ...ಯವಾಗಿರುವದೆಂದು ಶ್ರೀ. ಬಿ ದಾಸರು ಪ್ರತಿ ...ಪಾದಿಸಿದರು. ಮೈಸೂರಿನ ಶ್ರೀ ಎಸ್. ವಿ. ...ಕೃಷ್ಣಮೂರ್ತಿರಾಯರು ಕಲಮಿಗೆ ಬೆಂಬಲ ...ವಿತ್ತು ಆವಶ್ಯಕದ ಸಮಯದಲ್ಲಿ ದೇಶದ ...ಐಕ್ಯತೆ ಭದ್ರತೆಗಳ ಜೊತೆಯು ಸಂಪೂರ್ಣ ...ವಾಗಿ ಕೇಂದ್ರದಿಂದ ನಡೆಸುವ ವ್ಯವಸ್ಥೆಯು ...ಗೆ ಆ ಸಮಯದಲ್ಲಿ ಕೇಂದ್ರ, ಪ್ರಾಂತಗಳಲ್ಲಿ ...ಕ್ಕಾಟ ನಡೆದರೆ ದೇಶಹಿತಕ್ಕೆ ಧಕ್ಕೆಯುಂಟಾ ...ಗುವದೆಂದು ಅವರು ಹೇಳಿದರು. ಡಾ. ಅಂಬೇ ...ಡಕರರು ಉತ್ತರ ಕೊಟ್ಟ ನಂತರ ಕಲಮು ...ಸ್ವೀಕೃತವಾಯಿತು.

...ಕಠಿಣ ಸಮಯದಲ್ಲಿ ನಾಗರಿಕರು ತಮ್ಮ ...ಮೂಲಭೂತ ಹಕ್ಕುಗಳಿಗಾಗಿ ನ್ಯಾಯಾಲಯಕ್ಕೆ ಹೋಗುವ ಹಕ್ಕನ್ನು ಸ್ಥಗಿತಗೊಳಿಸಲು ಅಧ್ಯಕ್ಷನಿಗೆ ಅಧಿಕಾರವಿದೆಯೆಂದು ಹೇಳುವ ಹೊಸ ಕಲಮನ್ನು ಡಾ. ಅಂಬೇಡಕರರು ಮುಂಡಿಸಿದರು. ೨೮೦ನೇ ಕಲ್ಮಿನ ಬದಲು ಈ ಕಲಮನ್ನು ಮುಂಡಿಸಲಾಯಿತು. ಇಂಥಹ ಅಜ್ಞೆಯನ್ನು ಹಿಂದುಸ್ತಾನದ ಯಾವದೇ ಭಾಗಕ್ಕೆ ಇಲ್ಲವೆ ಇಡೀ ದೇಶಕ್ಕೆ ಅನ್ವಯಿಸಬಹುದು. ಸಾಧ್ಯವಾದಷ್ಟು ಬೇಗ ಈ ಅಜ್ಞೆಯನ್ನು ಪಾರ್ಲಮೆಂಟನಲ್ಲಿ ಮುಂಡಿಸಬೇಕು ಎಂದೂ ಈ ಕಲಮಿನಲ್ಲಿ ಹೇಳಿದೆ. ಇದಕ್ಕೆ ಮುಂಡಿಸಲ್ಪಟ್ಟ ಉಪಸೂಚನೆಗಳು ನಿರಾಕೃತವಾದವು. ಇಲ್ಲವೆ ಹಿಂತೆಗೆದುಕೊಳ್ಳಲ್ಪಟ್ಟವು. ಮೂಲ ಕಲಮು ಸ್ವೀಕೃತವಾಯಿತು.

ಹಿಂದೀ ಒಕ್ಕೂಟ ಹಾಗು ಘಟಕಗಳಿಗಾಗಿ ನೇಮಿಸಲಾಗುವ ಪಬ್ಲಿಕ್ ಸರ್ವಿಸ್ ಕಮಿಶನುಗಳಿಗೆ ಸಂಬಂಧಿಸಿದ ಅಯಿದು ಕಲಮುಗಳು ೨೨ ನೇ ತಾರೀಕು ಸ್ವೀಕೃತವಾದವು ಇಂದಿನ ಚರ್ಚೆಯಲ್ಲಿ ಕೆಲ ಸದಸ್ಯರು ತೀರ ಸಂಕುಚಿತ ಮನೋವೃತ್ತಿಯನ್ನು ತಳೆದಿದ್ದು ಕಂಡುಬರುತಿದ್ದಿತು. ಕೇವಲ ಯೋಗ್ಯತೆಯನ್ನೇ ಮುಖ್ಯವಾಗಿಟ್ಟುಕೊಂಡು ನೌಕರರನ್ನು ಆರಿಸಿಕೊಂಡರೆ ಬಹುಸಂಖ್ಯ ಸಮಾಜಕ್ಕೆ ಪ್ರಾತಿನಿಧ್ಯ ಸಿಕ್ಕದೆ ಹೋಗಬಹುದು. ಆದುದರಿಂದ ಈ ಸಮಸ್ಯೆಯನ್ನು ಬಿಡಿಸಲು ಮುಂದುವರಿದು ಮಧ್ಯಮ ಹಾಗೂ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕ ಸ್ಪರ್ಧೆಯ ಪರೀಕ್ಷೆಗಳನ್ನೇರ್ಪಡಿಸಿ ಪ್ರತಿಯೊಂದು ವರ್ಗದಿಂದಲೂ ಅವರವರ ಅರ್ಹತೆಯಂತೆ ಉಮೇದ್ವಾರರನ್ನು ಆರಿಸಬೇಕು ಎಂದು ಶ್ರೀ ಬಿ. ಎಂ. ಮುನವಳ್ಳಿಯವರು ಇಂದಿನ ತಮ್ಮ ಭಾಷಣದಲ್ಲಿ ಅಭಿಪ್ರಾಯಪಟ್ಟರು.

ಡಾ. ರಾಧಾಕೃಷ್ಣನ್‌ರು

ಘಟನೆಯಲ್ಲಿ ನಿರೂಪಿಸಿದ ಉದ್ದೇಶವನ್ನು ನಾವು ವೇಗದಿಂದ ಮತ್ತು ದೃಢನಿರ್ಧಾರದಿಂದ ಕಾರ್ಯಕಾರಿ ಮಾಡಿದರೆ ನಮ್ಮ ರಾಜಕೀಯ ಮತ್ತು ಆರ್ಥಿಕ ಭವಿತವ್ಯ ಉಜ್ವಲವಾಗುವದೆಂಬಲ್ಲಿ ಸಂದೇಹವಿಲ್ಲ ಎಂದು ಮಾಸ್ಕೋದಲ್ಲಿ ಹಿಂದೀ ರಾಯಭಾರಿಗಳಾಗಿ ನೇಮಕಹೊಂದಿದ ಡಾ. ರಾಧಾಕೃಷ್ಣನ್‌ರು ೨೪ ಕ್ಕೆ ಘಟನಾಸಮಿತಿಯಲ್ಲಿ ತಮ್ಮ ಕೊನೆಯ ಭಾಷಣ ಮಾಡುತ್ತ ಹೇಳಿದರು. ನಮ್ಮ ಉದ್ದೇಶವನ್ನು ಕಾರ್ಯಕಾರಿಯಾಗಿಸುವ ಕ್ರಮವನ್ನು ನಮ್ಮ ಭವಿತವ್ಯವು ಅವಲಂಬಿಸಿದೆ ಎಂದು ಅವರ ಅಭಿಪ್ರಾಯ. ರಾಜಕಾರಣವು ಪ್ರತಿಕ್ರಿಯೆಯ ಪರಿಣಾಮವಲ್ಲದೆ ಕಾರಣವಲ್ಲ. ಜಗತ್ತಿನಲ್ಲಿ ಆರ್ಥಿಕ ತೊಂದರೆಗಳಿರುವ ಮೂಲಕ ರಾಜಕೀಯ ಕ್ರಾಂತಿಗಳಾಗುತ್ತವೆ. ಜೀವನಮಟ್ಟ ತೃಪ್ತಿಕರವಾಗಿರುವ ದೇಶಗಳಲ್ಲಿ ರಾಜಕೀಯ ವಾತಾವರಣವು ಸ್ತಿಮಿತದಲ್ಲಿ ಇರುತ್ತದೆ. ಆದುದರಿಂದ ನಮ್ಮ ದೇಶದ ಆಡಳಿತೆಯ ಸೂತ್ರ ವಹಿಸಿಕೊಂಡು ನಮ್ಮ ವಿಶ್ವಾಸಕ್ಕೆ ಪಾತ್ರರಾದ ಮುಂದಾಳುಗಳ ಘಟನೆಯಲ್ಲಿ ರೂಪಿಸಿರುವ ಮಹೋನ್ನತ ಉದ್ದೇಶಗಳನ್ನು ಕೃತಿಗಿಳಿಸಿ ವಿಲಂಬದಿಂದ ಸಾಮಾಜಿಕ ಅನ್ಯಾಯಕ್ಕೆ ಕಾರಣವಾಯಿತೆನ್ನುವ ಆರೋಪಕ್ಕೆ ಗುರಿಯಾಗುವದಿಲ್ಲೆಂದು ಆಶಿಸುತ್ತೇನೆ ಎಂದು ಹೇಳಿದರು. ಬಡವರು ಬಲ್ಲಿದರು ಮತ್ತು ಜಾತಿ ಪಂಥ ಮೊದಲಾದವುಗಳಿಗೆ ಎಡೆಗೊಡದಂಥ ಪ್ರಜಾಸತ್ತೆಯನ್ನು ನಿರ್ಮಿಸುವದೇ ನಮ್ಮ ಧ್ಯೇಯ. ಈ ಧ್ಯೇಯವನ್ನು ನಾವು ಹೇಗೆ ಸಾಧಿಸುವೆವೆಂಬದನ್ನು ಜಗತ್ತು ನೋಡಲಿದೆ. ಈ ದೇಶದಲ್ಲಿ ನಾವು ಜ್ಞಾನಮಾರ್ಗವನ್ನನುಸರಿಸಲು ಬದ್ಧಕಂಕಣರಾಗಿರುವೆವು. ಸೋವಿಯೆಟ ರಶಿಯದಲ್ಲಿ ನಾನು ಇದೇ ಮಾರ್ಗವನ್ನನುಸರಿಸಿ ಅವರ ಧ್ಯೇಯ ಧೋರಣಗಳನ್ನು ಅರಿತುಕೊಂಡು ನಮ್ಮ ಧ್ಯೇಯ ಧೋರಣಗಳ ಜ್ಞಾನ ಮಾಡಿಕೊಡಲು ಪ್ರಯತ್ನಿಸುವೆನು. ಅದರಿಂದ ಪರಸ್ಪರ ತಿಳವಳಿಕೆಯಾಗುವದಕ್ಕೆ ಸಹಾಯವಾಗಬಹುದು. ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ತಮ್ಮ ಪರವಾಗಿ ಮತ್ತು ಸಭಿಕರ ಪರವಾಗಿ ಡಾ. ರಾಧಾಕೃಷ್ಣನ್‌ರನ್ನು ಅಭಿನಂದಿಸಿದರು ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರೂ ಡಾ. ರಾಧಾಕೃಷ್ಣನ್‌ರ ಗೌರವಾರ್ಥ ಇಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಮಾಸ್ಕೋ ರಾಯಭಾರ ಅತ್ಯಂತಸೂಕ್ಷ್ಮವಾಗಿದೆ. ಅಂತೆಯೆ ಡಾ. ರಾಧಾಕೃಷ್ಣನ್‌ರನ್ನು ರಾಯಭಾರಿಯೆಂದು ನೇಮಿಸಿದೆ. ಶಿಕ್ಷಕ, ತತ್ವಜ್ಞಾನಿಯು ಉತ್ಕೃಷ್ಟ ರಾಯಭಾರಿಯಾಗಬಲ್ಲನೆಂದು ನಮಗೆ ಬಲದಾದ ನಂಬಿಕೆಯುದೆಂದು ಮುಂತಾಗಿ ಪಂಡಿತ ಜವಾಹರಲಾಲರು ಹೇಳಿದರು.

೧೫ ವರ್ಷ ಹಿಂದೀ-ಇಂಗ್ಲಿಶ

ಹಿಂದುಸ್ತಾನದ ರಾಷ್ಟ್ರಭಾಷಾ ಪ್ರಶ್ನೆಯ ವಿಚಾರದಲ್ಲಿ ಘಟನಾ ಸಮಿತಿಯ ಕರಡು ಸಮಿತಿಯು ಮಧ್ಯ ಮಾರ್ಗವೊಂದನ್ನು ಸ್ವೀಕರಿಸಿದೆ. ಶ್ರೀ ಕನ್ನಯ್ಯಾಲಾಲ ಮುನಶಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಕರಡು ಸಮಿತಿಯ ಸಭೆಯಲ್ಲಿ ಡಾ. ಅಂಬೇಡಕರರು ತಮ್ಮ ಹೊಸ ಸೂಚನೆಯನ್ನು ವಿವರಿಸಿದರು. ಹಿಂದೀ ಒಕ್ಕೂಟದ ಅಧಿಕೃತ ಭಾಷೆಯು ದೇವನಾಗರಿ ಲಿಪಿಯ ಹಿಂದೀ ಇರತಕ್ಕದ್ದೆಂಬ ಕಲಮು ಈಗ ಕಾಂಗ್ರೆಸ ಪಕ್ಷದ ಮುಂದೆ ಇದೆ. ಆದರೆ ಹೊಸ ಘಟನೆ ಪ್ರಾರಂಭವಾಗಿ ೧೫ ವರುಷಗಳ ವರೆಗೆ ಇಂಗ್ಲಿಶ ಭಾಷೆಯನ್ನೆ ಸರಕಾರದ ಎಲ್ಲ ವ್ಯವಹಾರಗಳಿಗೆ ಉಪಯೋಗಿಸಬೇಕೆಂಬ ಉಪಕಲಮು ಅದಕ್ಕೆ ಜೋಡಿಸಲ್ಪಟ್ಟಿರುವದು. ಅಂಕಿಗಳನ್ನು ಅಂತರ್‌ರಾಷ್ಟ್ರೀಯ ಇಲ್ಲವೆ ಅರ್ಯಾಬಿಕ್ ಅಥವಾ ಸಂಸ್ಕೃತ ಲಿಪಿಯಲ್ಲಿ ಬರೆಯಬೇಕೋ ಎಂಬುದು ಮಾತ್ರ ಇನ್ನೂ ನಿರ್ಣಯವಾಗಿರುವದಿಲ್ಲ.

ಪ್ರಾಂತಗಳು ತಮ್ಮ ಪ್ರಾದೇಶಿಕ ಭಾಷೆ ಅಥವಾ ಭಾಷೆಗಳನ್ನು ಇಲ್ಲವೆ ಹಿಂದಿಯನ್ನು ಒಳಾಡಳಿತ ವ್ಯವಹಾರಕ್ಕಾಗಿ ನಿರ್ಣಯ ಮಾಡಿಕೊಳ್ಳಬೇಕು. ಆದರೆ ಪ್ರಾಂತೀಯ ಶಾಸನ ಸಭೆಗಳು ಬೇರೆ ನಿರ್ಣಯ ಮಾಡುವ ವರೆಗೆ ಇಂಗ್ಲಿಶನ್ನು ಸರಕಾರದ ವ್ಯವಹಾರಕ್ಕೆ ಉಪಯೋಗಿಸಬೇಕು. ರಾಷ್ಟ್ರದ ವರಿಷ್ಠ ನ್ಯಾಯಾಲಯ ಮತ್ತು ಪ್ರಾಂತಗಳಲ್ಲಿಯ ಹೈಕೋರ್ಟುಗಳ ನಡವಳಿಕೆಗಳು ಪಾರ್ಲಮೆಂಟು ಮತ್ತು ಶಾಸನ ಸಭೆಗಳಲ್ಲಿ ಮುಂಡಿಸಲಾಗುವ ಮಸೂದೆಗಳು ಮತ್ತು ಘಟನಾನುಸಾರ ಹೊರಡಿಸುವ ಅರ್ಡಿನೆನ್ಸುಗಳ ನಿಯಮಗಳು ಬಾಯಲಾಗಳು ಇಂಗ್ಲೀಶ ಭಾಷೆಯಲ್ಲಿಯೆ ಇರತಕ್ಕದ್ದು ಎಂದು ಗೊತ್ತಾಗಿದೆ.

ಎಡಪಕ್ಷಗಳ ಒಕ್ಕೂಟ ಚರ್ಚೆ

ಸಾರ್ವತ್ರಿಕ ಚುನಾವಣೆಗಳು ವಿಶೇಷತಃ ಪಶ್ಚಿಮ ಬಂಗಾಲ ಶಾಸನ ಸಭೆಗಳ ಚುನಾವಣೆಗಳು ಸಮೀಪಿಸಿದಂತೆ ಆಯಾ ಎಡಪಕ್ಷಗಳು ಚುನಾವಣೆಗಳ ಸಿದ್ಧತೆಯನ್ನು ಭರದಿಂದ ನಡೆಸಿವೆ. ಎಲ್ಲ ಎಡಪಕ್ಷಗಳು ಒಗ್ಗೂಡಿ ಕಾಂಗ್ರೆಸ್ಸನ್ನು ಎದುರಿಸಬೇಕೆಂಬ ಪ್ರಯತ್ನಗಳೂ ನಡೆದಿವೆಯೆಂದು ತಿಳಿಯುತ್ತದೆ. ಶರಚ್ಚಂದ್ರರ ಹೊಸ ಪಕ್ಷ ಮತ್ತು ಜಯಪ್ರಕಾಶರ ಸಾಮ್ಯವಾದಿ ಪಕ್ಷಗಳಲ್ಲಿ ಐಕಮತ್ಯವಾಗಬಹುದೇ ಎಂಬ ಬಗ್ಗೆ ಮಾತುಕತೆಗಳು ಈ ತಿಂಗಳ ಪ್ರಾರಂಭದಿಂದಲೆ ಸುರುವಾಗಿದ್ದವು. ಆದರೆ ಈ ಮಾತುಕತೆಗಳು ಮುರಿದವೆಂದು ಇದೇ ತಾನೆ ತಿಳಿದುಬಂದಿದೆ. ಅಂತೆಯೆ ನಾಗಪುರದಲ್ಲಿ ಕೂಡಲಿರುವ ಎಡಪಕ್ಷಗಳ ಒಕ್ಕೂಟ ಪರಿಷತ್ತಿಗೆ ಸಾಮ್ಯವಾದಿಗಳು ಹೋಗುವದಿಲ್ಲ. ಬಾಬೂ ಶರಚ್ಚಂದ್ರರೇ ಈ ಪರಿಷತ್ತನ್ನು ಕರೆದಿರುವರು. ಈ ಮಾತುಕತೆಗಳು ಮೂರು ಸೂಚನೆಗಳ ಬಗೆಗೆ ನಡೆದವೆಂದು ಸಾಮ್ಯವಾದೀ ಪಕ್ಷದ ವಕ್ತಾರನೊಬ್ಬನು ಹೇಳಿದನು. ೧) ಎಲ್ಲ ಎಡಪಕ್ಷಗಳನ್ನು ವಿಲೀನಗೊಳಿಸಿ ಒಂದೇ ಸಂಯುಕ್ತ ಪಕ್ಷವನ್ನು ಸ್ಥಾಪಿಸುವದು ೨) ಕಮ್ಯುನಿಸ್ಟರನ್ನು ಹೊರತುಪಡಿಸಿ ಎಲ್ಲ ಎಡಪಕ್ಷಗಳನ್ನು ಸೇರಿಸಿ ಒಂದೇ ಏಕೀಕೃತ ಗುಂಪನ್ನು ಸ್ಥಾಪಿಸುವದು ಮತ್ತು ೩) ಎಲ್ಲ ಎಡ ಪಕ್ಷಗಳಲ್ಲಿ ಚುನಾವಣೆಯ ಬಗ್ಗೆ ಒಂದು ಬಗೆಯ ತಿಳವಳಿಕೆ. ಆದರೆ ಎಲ್ಲ ಎಡ ಪಕ್ಷಗಳ ವಿಲೀನೀಕರಣವನ್ನು ಉಳಿದ ಪಕ್ಷಗಳು ಒಪ್ಪಿಕೊಳ್ಳಲಿಲ್ಲ. ಎರಡನೆ ಸೂಚನೆಯನ್ನು ಬಹುತರ ಎಲ್ಲ ಪಕ್ಷಗಳು ಮೆಚ್ಚಿದವಾದರೂ ಸಾಮ್ಯವಾದೀ ಪಕ್ಷಕ್ಕೆ ಮಾತ್ರ ಅದು ಒಪ್ಪಿಗೆಯಾಗಲಿಲ್ಲ. ಏಕೆಂದರೆ ಎಲ್ಲ ಪಕ್ಷಗಳು ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಒಂದುಗೂಡಿದರೆ ಪರಸ್ಪರ ಕಲಹವುಂಟಾಗುವದು ನಿಶ್ಚಿತವೆಂದು ಅವರ ಅಭಿಪ್ರಾಯವಿದ್ದುತ್ತದೆ. ಸಾಮ್ಯವಾದೀ ಪಕ್ಷವು ಮುಕ್ತವಾಗಿ ಮುಂದೆ ತನ್ನ ಕಾರ್ಯಕ್ರಮವನ್ನು ಇಟ್ಟು ಚುನಾವಣೆಗೆ ನಿಲ್ಲುವದು. ಅದು ತನ್ನ ವ್ಯಕ್ತಿತ್ವವನ್ನು ಈ ವಿಷಯದಲ್ಲಿ ಸಹ ಅಳಿಸಿಕೊಳ್ಳಲು ಸಿದ್ಧವಿಲ್ಲ. ಜಯಪ್ರಕಾಶರು ಶರಚ್ಚಂದ್ರರೊಡನೆ ನಡೆಸಿದ ಮಾತುಕತೆಗಳು ಇಂತು ಮುರಿದದ್ದರಿಂದ ಅವರು ಕಲಕತ್ತೆಯಿಂದ ಮುಂಬಯಿಗೆ ಮರಳಿರುವರು.

ಪುಣೆ ವಿಶ್ವವಿದ್ಯಾಲಯ

ಪುಣೆ ವಿಶ್ವವಿದ್ಯಾಲಯದ ಮೊದಲನೇ ಪದವೀದಾನ ಸಮಾರಂಭವು ಗವರ್ನರರೂ ಚಾನ್ಸಲರರೂ ಆಗಿರುವ ಸರ್ ರಾಜಾ ಮಹಾರಾಜಾಸಿಂಗರ ನೇತೃತ್ವದಲ್ಲಿ ನಡೆಯಿತು. ವಿಶ್ವವಿದ್ಯಾಲಯದಲ್ಲಿ ಮತ್ತು ಪರೀಕ್ಷೆಗಳಲ್ಲಿ ಶಿಕ್ಷಣ ಮಾಧ್ಯಮಕ್ಕಾಗಿ ಯಾವದೇ ಕಟ್ಟುನಿಟ್ಟಿನ ನಿಯಮಗಳನ್ನಿಟ್ಟುಕೊಳ್ಳಕೂಡದು. ಶಿಕ್ಷಣದ ಮಾಧ್ಯಮವು ಇಂತಹದೇ ಆಗಿರಬೇಕೆಂದು ಹಟತೊಡದೆ ಆದಷ್ಟು ಸಾಧ್ಯವಿದ್ದಷ್ಟು ವ್ಯಾಪಕವೂ ವ್ಯಾವಹಾರಿಕವೂ ಆಗಿರಬೇಕು ಎಂದು ರಾಜಾ ಮಹಾರಾಜಸಿಂಗರು ಅಭಿಪ್ರಾಯ ಪಟ್ಟರು. ಇನ್ನು ೧೫ ವರ್ಷಗಳ ವರೆಗೆ ಆಡಳಿತೆಯ ಭಾಷೆಯು ಇಂಗ್ಲೀಶೇ ಇರಬೇಕೆಂದು ಕಾಂಗ್ರೆಸ ಕಾರ್ಯಸಮಿತಿಯು ನಿರ್ಣಯಿಸಿದ್ದು ಜಾಣತನದ್ದಾಗಿದೆ. ಈ ವಿಶ್ವವಿದ್ಯಾಲಯದವರು ಕ್ರಮಶಃ ಇಂಗ್ಲಿಶನ್ನು ತೆಗೆದೊಗೆದು ಪ್ರಾದೇಶಿಕ ಭಾಷೆಗೆ ಅದರ ಸ್ಥಾನವನ್ನು ಕೊಡಬೇಕೆಂದು ಸೂಚಿಸಿದ್ದು ಯೋಗ್ಯವಾಗಿದೆ. ಇಂಗ್ಲಿಶ ಮಾಧ್ಯಮವು ಒಮ್ಮೆಲೆ ಹೋಗಬೇಕಾಗಿದ್ದರೂ ಅದಕ್ಕೆ ೫ ಅಥವಾ ೧೦ ವರ್ಷ ಮಿತಿಹಾಕುವದು ಯೋಗ್ಯವಲ್ಲ. ಮಾಧ್ಯಮದ ಭಾಷೆಯನ್ನು ಸುಲಭವಾಗಿ ಬದಲಿಸಲು ಬರುವಂಥ ಇತಿಹಾಸ, ಸಂಸ್ಕೃತ, ತತ್ವಜ್ಞಾನ ಮೊದಲಾದವುಗಳಿಂದ ಈ ಬದಲಾವಣೆಯನ್ನು ಪ್ರಾರಂಭಿಸಿ ಭೌತಿಕ ವಿಜ್ಞಾನ, ವೈದ್ಯಕ, ಇಂಜಿನಿಯರಿಂಗ ಮೊದಲಾದವುಗಳಲ್ಲಿ ಕ್ರಮೇಣ ಬದಲಾವಣೆ ಮಾಡಬೇಕು ಎಂದೂ ಅವರು ಹೇಳಿದರು. ಪ್ರಾಥಮಿಕ ಶಿಕ್ಷಣವನ್ನು ವಿದ್ಯಾರ್ಥಿಯ ತಾಯ್ನುಡಿಯಲ್ಲಿಯೆ ಕೊಡುವದು ಸ್ವಾಭಾವಿಕ. ಆದರೆ ಅವನು ಮಾಧ್ಯಮಿಕ ಶಾಲೆಗೆ ಬಂದೊಡನೆ— ಅವನಿಗೆ ಬೇರೆ ಭಾಷೆಗಳನ್ನು ಕಲಿಸುವದು ಅವನ ಹಿತದೃಷ್ಟಿಯಿಂದಲೆ ಲಾಭಕರವಾದುದು ಎಂದೂ ಗವರ್ನರರು ಅಭಿಪ್ರಾಯಪಟ್ಟರು. ಪುಣೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಪ್ರಾಧ್ಯಾಪಕರು ಹಳ್ಳಿಗಳೊಡನೆ ಸಂಬಂಧವಿಟ್ಟುಕೊಂಡು ಗ್ರಾಮಾಂತರಗಳಲ್ಲಿಯ ಸಮಸ್ಯೆಗಳನ್ನು ಬಿಡಿಸಲು ಪ್ರವೃತ್ತಿಸಬೇಕು. ಸಾಮಾಜಿಕ ಸೇವಾಭಾವನೆಯು ಅಭಿವೃದ್ಧಿಯಾಗುವತ್ತ ಹೆಚ್ಚು ಲಕ್ಷ ಪೂರಯಿಸಬೇಕು ಯೋಗ್ಯ ಶಿಕ್ಷಣ ಮಟ್ಟವನ್ನು ಕಾಯ್ದುಕೊಂಡು ಹೋಗಬೇಕು. ಭಾವೀ ವಿಶ್ವವಿದ್ಯಾಲಯಗಳು ಹಿಂದಿನ ಗುರುಕುಲಗಳಾಗಿ ತಮ್ಮ ವಿದ್ಯಾರ್ಥಿಗಳ ಸಾರ್ವಾಂಗಿಕ ಉನ್ನತಿಗಾಗಿ ಪ್ರಯತ್ನಿಸುವಂತಾಗಲಿ ಎಂದು ಮುಂತಾಗಿ ರಾಜಾ ಮಹಾರಾಜಸಿಂಗರು ಆಸೆ ವ್ಯಕ್ತಪಡಿಸಿದರು.

● ಹೈದರಾಬಾದ ಕಾಂಗ್ರೆಸ ಅಧ್ಯಕ್ಷರಾದ ಸ್ವಾಮೀ ರಮಾನಂದ ತೀರ್ಥರು ಸರದಾರ ಶರಣಗೌಡರನ್ನು ಕಾಂಗ್ರೆಸ್ಸಿನಿಂದ ಹೊರಗೆ ಹಾಕಿದ ತಮ್ಮ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದಾರೆ. ಸರದಾರ ಶರಣಗೌಡರು ಈಗ ಮತ್ತೆ ಕಲಬುರ್ಗಿ ಜಿಲ್ಲಾ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿಗಳ ಕೆಲಸವನ್ನು ಕೈಕೊಂಡಿದ್ದಾರೆ.

● ಬೆಂಗಳೂರಿನ ಪ್ರಸಿದ್ಧ ರಾಜಕಾರಣಿಗಳೂ ಸಾಹಿತಿಗಳೂ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಡಿ. ವಿ. ಗುಂಡಪ್ಪನವರ ತಾಯಿ ಶ್ರೀ ಅಲುಮೇಲಮ್ಮನವರು ೧೮ ಕ್ಕೆ ರಾತ್ರಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೮೫ ವರುಷಗಳಾಗಿದ್ದವು.

● ಸಪ್ಟೆಂಬರದಲ್ಲಿ ಬೆಂಗಳೂರಿನಲ್ಲಿ ಜಾಗತಿಕ ಛಾಯಚಿತ್ರಗಳ ದ್ವಿತೀಯ ಪ್ರದರ್ಶನವು ನಡೆಯುವದು. ಇದಕ್ಕೆ ಜಪಾನ ಮತ್ತು ಜರ್ಮನಿಗಳನ್ನೊಳಗೊಂಡು ೩೫ ರಾಷ್ಟ್ರಗಳು ಚಿತ್ರಗಳನ್ನು ಕಳಿಸಿವೆ. ಮೈಸೂರು ಫೋಟೋಗ್ರಾಫಿಕ ಸೊಸಾಯಿಟಿಯವರು ಇದನ್ನು ಏರ್ಪಡಿಸಿದ್ದು ಸರ್ ಸಿ. ವಿ. ರಾಮನ್ನರು ಇದನ್ನು ಪ್ರಾರಂಭಿಸುವರು.

ಪರೀಕ್ಷೆಗಳು ಮತ್ತು ಆತ್ಮಹತ್ಯೆಗಳು

ಪರೀಕ್ಷೆಗಳಿಗೀಯುವ ಅವಾಸ್ತವ ಮಹತ್ವದ ಫಲ

ಲೇಖಕರು: ಶ್ರೀ ಕೆ. ಜಿ. ಸಾಯುದೀನ
(ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರು)

ಮೊನ್ನಿನ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ನಪಾಸಾದ ಕಾರಣ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡರೆಂಬ ಸುದ್ದಿಯಿಂದ ಸ್ವಲ್ಪ ಉದ್ವಿಗ್ನನಾಗಿ ಇದನ್ನು ಬರೆಯುತ್ತಿದ್ದೇನೆ. ಇಂಥ ಸಂದರ್ಭಗಳು ದುರ್ದೈವದಿಂದ ಅಪೂರ್ವವಾಗಿಲ್ಲ. ಎಲ್ಲ ಪ್ರಾಂತಗಳಿಂದಲೂ ವರ್ಷವರ್ಷವೂ ಇಂಥ ಘಟನೆಗಳ ಸುದ್ದಿಗಳು ಬರುತ್ತಿರುತ್ತವೆ. ಆದರೆ ಅವುಗಳಿಂದ ಒಂದು ಕ್ಷಣ ಆಳವಾಗಿ ಕಳವಳಗೊಂಡರೂ ಇದರ ಕಾರಣಗಳನ್ನು ವಿಚಾರಿಸಿ ಇದರಲ್ಲಿ ಶಿಕ್ಷಕರಿಗೂ ತಂದೆತಾಯಿಗಳಿಗೂ ಇರುವ ಹೊಣೆಯನ್ನು ಅಳೆಯುವ ಗೋಜಿಗೆ ನಾವು ಹೋಗುವುದಿಲ್ಲ.

ಪರೀಕ್ಷೆಗಳಿಗಿರುವ ಅನೈಸರ್ಗಿಕ ಮಹತ್ವ

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಪರೀಕ್ಷೆಗಳಿಗಿರುವ ಅನೈಸರ್ಗಿಕ ಮಹತ್ವವೇ ಈ ಸಮಸ್ಯೆಯ ಮೂಲವೆಂದು ತೋರುತ್ತದೆ. ಎಳೆಯ ವಿದ್ಯಾರ್ಥಿಯ ಮುಂದೆ ಅಮೂಲ್ಯವಾದ ಇಡಿಯ ಜೀವಮಾನವೇ ಇರುತ್ತದೆ. ಇದರ ಗರ್ಭದಲ್ಲಿ ಏನೇನಡಗಿರುತ್ತದೋ ಯಾರು ಬಲ್ಲರು? ಅಲ್ಲದೆ ಎಳನೆತ್ತರು ಒಮ್ಮೆಲೇ ಸೋಲಿನಿಂದ ಎದೆಗುಂದುವುದಿಲ್ಲ. ಭವಿಷ್ಯದ ಆಶೆಯಿದ್ದೇ ಇರುವದು. ಹೀಗೆ ಸ್ವಾಭಾವಿಕ ಆಶಾವಾದಿಗಳಾದ ವಿದ್ಯಾರ್ಥಿಗಳೂ ಈ ದುರಂತ ನಿರ್ಣಯಕ್ಕೆ ಬರಬೇಕಾದರೆ ನಾವು ಅವರಲ್ಲಿರುವ ತಾರತಮ್ಯವಿವೇಕವನ್ನು ವಿಕೃತಗೊಳಿಸಿದ್ದೇವೆಂದು ಅರ್ಥವಾಗುತ್ತದೆ. ಭಾವೀ ಜೀವನದ ಎಲ್ಲ ಪ್ರತ್ಯಾಶೆಗಳ ಸಿರಿಗಿಂತಲೂ ಪರೀಕ್ಷೆಯಲ್ಲಿ ನಿರ್ದಿಷ್ಟ ಗುಣಗಳನ್ನು ಪಡೆಯಲಾರದೆ ಹೋದ ದುಃಖದ ಘಟನೆಯೇ ಅವನಿಗೆ ಹೆಚ್ಚು ದೊಡ್ಡದೆಂದು ಅನಿಸಿ ಅದಕ್ಕಾಗಿ ಪ್ರಾಣವನ್ನೇ ಕಳೆದೊಗೆಯುವ ಪ್ರವೃತ್ತಿಯುಂಟಾಗುವುದೇಕೆ? ಅವನು ಶಾಲೆ ಕಾಲೇಜುಗಳಲ್ಲಿ ಪಡೆದ ವಿದ್ಯೆ ಸರಿಯಾದ ವಿಷಯ ಮೌಲ್ಯದ ವಿವೇಕವನ್ನು ಹುಟ್ಟುಮಾಡಿಲ್ಲವೆಂದೇ ಇದರ ಅರ್ಥ.

ಪರೀಕ್ಷೆಗಳಿಗಿರುವ ಅಯೋಗ್ಯ ಮಹತ್ವದಿಂದ ವಿದ್ಯಾರ್ಥಿಯ ಮನಸ್ಸಿನಲ್ಲುಂಟಾಗುವ ಉದ್ವೇಗದ ತಿಳಿವಳಿಕೆ ನಮಗೆಲ್ಲರಿಗೂ ಇದೆ. ಶಾಲೆಗಳಲ್ಲಿ ದಿನದಿನವೂ ಕಲಿತ ಕಲಿಕೆ, ಭಾವನೆಯ ಜಾಗೃತಿ, ಸಮಾಜದಲ್ಲಿ ಹೊಂದಿಕೊಳ್ಳುವ ರೀತಿಯ ಅಭ್ಯಾಸ, ತಾರತಮ್ಯ ಜ್ಞಾನದ ಸಂಪಾದನೆ, ಚರಿತ್ರ ನಿರ್ಮಾಣ ಇವೇ ಮುಖ್ಯ. ಆದರೆ ಇದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಶಾಲೆಯ ಜೀವನದಲ್ಲಿ ಬೌದ್ಧಿಕ ಮತ್ತು ಕಲಾತ್ಮಕ ಜಾಗೃತಿಯಾಗಿದೆಯೋ ಇಲ್ಲವೋ ಎಂದು ನೋಡುವ ಶಿಕ್ಷಕರೆಷ್ಟು ಜನ, ವಿದ್ಯಾರ್ಥಿಗಳೆಷ್ಟು ಜನ? ಆದರೆ ಪರೀಕ್ಷೆಯ ಮಾತು ಬಂದರೆ ಸಾಕು, ಅದರಲ್ಲಿ ನಿರ್ದಿಷ್ಟ ಗುಣಗಳನ್ನು ಸಂಪಾದಿಸುವದೇ ಸಮಸ್ತ ಶಿಕ್ಷಣದ ಚರಮ ಧ್ಯೇಯವೋ ಎಂಬಂತೆ ಎಂಥ ಚಾಂಚಲ್ಯ, ಎಂಥ ಉದ್ವೇಗ!

ವಿದ್ಯಾರ್ಥಿಗೆ ತುಂಬ ಗುಣಗಳು ದೊರೆತರೆ ಅವನು ಅಭಿನಂದನಾರ್ಹ, ಕಡಿಮೆ ಬಿದ್ದರೆ ಖೇದಾಸ್ಪದ, ಅವನು ನಪಾಸಾದನೆಂದರಂತೂ ಅದು ಅತ್ಯಂತ ನಿಂದ್ಯ- ಅದಕ್ಕೆ ಕಾರಣವೇನೆಂಬುದನ್ನು ಗಮನಿಸುವವರಿಲ್ಲ. ಜೀವನ ತತ್ವಗಳ ತಪ್ಪು ಗ್ರಹಿಕೆಯೇ ಇದಕ್ಕೆ ಕಾರಣ. ಇದರಲ್ಲಿ ಶಿಕ್ಷಕರ ಮತ್ತು ತಂದೆತಾಯಿಗಳ ತಪ್ಪಿನ ಪಾಲೇ ಹೆಚ್ಚು. ವಿದ್ಯಾರ್ಥಿಗಳು ಹೆಚ್ಚಾಗಿ ಹಿರಿಯರಿಂದಲೇ ಈ ಪರೀಕ್ಷಾಭೀತಿಯ ಅಂಟು ರೋಗವನ್ನು ಸೋಂಕಿಸಿಕೊಂಡಿರುತ್ತಾರೆ.

ಶಿಕ್ಷಕರು ಚಿಂತಿಸಲಿ

ಶಿಕ್ಷಕರೂ ಮುಖ್ಯೋಪಾಧ್ಯಾಯರೂ ಈ ವಿಷಯವನ್ನು ಆಳವಾಗಿ ಪರಾಮರ್ಶಿಸಿ ತಮ್ಮ ಅಧೀನದ ಶಾಲಾ ಪರೀಕ್ಷೆಗಳಲ್ಲಾದರೂ ತಂತ್ರವನ್ನು ಮಾರ್ಪಡಿಸಬೇಕು. ಪರೀಕ್ಷಾ ಮಂಡಲ ಮತ್ತು ವಿಶ್ವವಿದ್ಯಾಲಯಗಳು ಈಗಿನಂತೆ ಗುರಿಯಿಂದ ತುಸು ತಪ್ಪಿದರೆ ಸೋಲು ಎಂಬ ಅಂಧ ಪದ್ಧತಿಯನ್ನು ಬದಲಿಸಿ ಹೆಚ್ಚು ವಿಕಾಸಶೀಲ, ಮಾನವೀಯ ಪದ್ಧತಿಯನ್ನನುಸರಿಸಿದರೆ ಶ್ರೇಯಸ್ಕರ.

ಪರೀಕ್ಷೆಯ ಭಯವನ್ನು ಸಡಿಲಿಸುವುದಿಷ್ಟೆ ನಮ್ಮ ಕೆಲಸವಲ್ಲ. ಅತ್ಯಂತ ಉದಾರವಾದ ಪರೀಕ್ಷಾಪದ್ಧತಿಯಲ್ಲೂ ನಪಾಸಾಗುವವರಿದ್ದೇ ಇರುವರು. ಅವರಲ್ಲಿ ಅದರ ದುಃಖವನ್ನು ಉಳಿದವರಿಗಿಂತ ಹೆಚ್ಚಾಗಿ ಹಚ್ಚಿಕೊಳ್ಳುವವರೂ ಇರುವರು. ಶಿಕ್ಷಕರೂ ಹೆತ್ತವರೂ ಅರಿತು ನಡೆಯಬೇಕಾದ್ದು ಇಲ್ಲಿ. ಅವರಲ್ಲಿ ಕೆಲವರು ಸೋತ ವಿದ್ಯಾರ್ಥಿಯನ್ನು ಬೆದರಿಸುವದೂ ಬಹಿರಂಗವಾಗಿ ಅವಮಾನಗೊಳಿಸುವದೂ ಉಂಟು. ಇಂಥ ಪರದುಃಖಸಂತೋಷಿಗಳು ಶಿಕ್ಷಕರಾಗಲಿ ತಂದೆತಾಯಿಗಳಾಗಲಿ ಆಗಲಂತೂ ಅರ್ಹರಲ್ಲ; ಅಷ್ಟೇಕೆ, ನೆರೆಮನೆಯ ವಾರ್ಡರರು ಕೂಡ ಆಗಲು ಯೋಗ್ಯರಲ್ಲ. ಆದರೆ ಇಂಥ ಪಾಷಾಣಹೃದಯರಲ್ಲದವರೂ ತಿಳಿವಳಿಕೆಯಿಲ್ಲದೆ ಮಕ್ಕಳ ಮನಸ್ಸಿನಲ್ಲಿ ಆಗುವ ಕೋಲಾಹಲವನ್ನು ಗುರುತಿಸಲಾರದೆ ಅವರಿಗೆ ಯೋಗ್ಯ ಸಹಾನುಭೂತಿ ತೋರಿಸಲು ತಪ್ಪುತ್ತಾರೆ. ದೊಡ್ಡವರ ದೃಷ್ಟಿಯಲ್ಲಿ ಈ ಮಾನಸಿಕ ಕೋಲಾಹಲಗಳು ಅಷ್ಟೇನೂ ಗಮನಾರ್ಹವಲ್ಲದಿರಬಹುದಾದರೂ ಹುಡುಗನ ದೃಷ್ಟಿಯಲ್ಲಿ ಅವು ತುಂಬ ಗಂಭೀರವೂ ವಾಸ್ತವವೂ ಆಗಿವೆ. ಅವನೊಡನೆ ಈ ಭಾವನೆಯಿಂದಲೆ ವ್ಯವಹರಿಸಬೇಕು.

ಮಕ್ಕಳಿಗೆ ಬಾಲ್ಯ ಮತ್ತು ಕಿಶೋರಾವಸ್ಥೆಗಳಲ್ಲೊದಗುವ ಅನೇಕ ತೊಡಕುಗಳಿಂದ ಪಾರಾಗಲು ಅವರಿಗೆ ಸಹಾಯ ಮಾಡುವದು ಹೆತ್ತವರ ಮತ್ತು ಶಿಕ್ಷಕರ ಕರ್ತವ್ಯ. ತಾವು ಹಿರಿಯರಾದ ಅಥವಾ ಕೌಟುಂಬಿಕ ಸ್ಥಾನಮಾನದಲ್ಲಿ ಮೇಲ್ಪಟ್ಟವರಾದ ಮಾತ್ರಕ್ಕೆ ಕಣ್ಮುಚ್ಚಿ ಮಕ್ಕಳು ತಾವೆಂದುದಕ್ಕೆ ಸೈಗುಟ್ಟಬೇಕೆಂಬ ಭಾವನೆಯನ್ನು ತೊರೆದುಬಿಡಬೇಕು. ಅಹಂಮನ್ಯತೆಯಿಂದ ಸಾಮಾಜಿಕ ಸಂಬಂಧಗಳು ನೇರವಾಗಲಾರವು. ಮಗುವಿನ ಪ್ರೇಮಾದರಗಳನ್ನು ಕೌಶಲದಿಂದಲೂ ಸಹಾನುಭೂತಿಯಿಂದಲೂ ಮಾತ್ರ ಗಳಿಸಿಕೊಳ್ಳಲು ಸಾಧ್ಯ.

ಇಂಥ ಸರಿಯಾದ ವಾತಾವರಣದಲ್ಲಿರುವ ಮಗು ಹೀಗೆ ಭಯಾನಕವೂ ಅಪರಿಹಾರ್ಯವೂ ಆದ ಕೃತಿಗೆ ಸಹಸಾ ಕೈಹಾಕಲಾರದು. ಪ್ರೇಮ ಸಹಾನುಭೂತಿಗಳಿಲ್ಲದೆ ಜಗತ್ತೇ ತನಗೆ ಶತ್ರುವೆಂಬ ಭಾವನೆಯುಂಟಾದಾಗ ಮಗು ಸ್ವಾಭಾವಿಕವಾಗಿ ತನ್ನ ದುಃಖಗಳನ್ನೇ ನೆನೆನೆನೆದು ಏಕಾಂತದಲ್ಲಿ ಹಲಬುತ್ತ ಈ ದುರಂತ ಉಪಾಯಕ್ಕೆ ಶರಣು ಹೋಗುವದು. ಎಲ್ಲ ಪ್ರಸಂಗಗಳಲ್ಲಿಯೂ ಹೀಗೆಯೆ ಆಗುತ್ತಿರುತ್ತದೆ ಎಂಬ ಧೃಷ್ಟತೆ ನನಗಿಲ್ಲ ಇನ್ನೂ ಮನಶ್ಶಾಸ್ತ್ರಕ್ಕೆ ನಿಲುಕದಿರುವ ಯಾವುದಾದರೊಂದು ಸ್ವಭಾವಸಿದ್ಧ ದೌರ್ಬಲ್ಯದಿಂದಲೂ ಈ ದುಃಖಕರ ಘಟನೆ ಘಟಿಸಬಹುದು. ಆದರೂ ಸಾಮಾನ್ಯವಾಗಿ ಹೇಳಬೇಕಾದರೆ ಹೆತ್ತವರು, ಶಿಕ್ಷಕರು ಮತ್ತು ಸಾಮಾನ್ಯವಾಗಿ ಸಮಾಜವೇ ತೋರುವ ನಡೆವಳಿಯಿಂದಲೇ ಮಗುವಿನ ಮನಸ್ಸಿನಲ್ಲಿ ಧೈರ್ಯ ಶಾಂತಿಗಳಾಗಲಿ, ಅಧೈರ್ಯ ಅಶರಣಭಾವಗಳಾಗಲಿ ಉಂಟಾಗುವವೆನ್ನಲು ಅಡ್ಡಿಯಿಲ್ಲ.

ಶಿಕ್ಷಣದ ಜೀವಾಳ

ಶಿಕ್ಷಣದಲ್ಲಿ, ಅದೂ ಪ್ರಾರಂಭಾವಸ್ಥೆಯಲ್ಲಿ, ಮಕ್ಕಳಲ್ಲಿ ಸುರಕ್ಷಿತತೆಯ ಧೈರ್ಯವನ್ನೂ ತಾನು ಬಾಳುತ್ತಿರುವ ಜಗತ್ತಿಗೆ ಸುಖವಾಗಿ ಹೊಂದಿಕೊಂಡಿರುವ ಭಾವನೆಯನ್ನೂ ಉಂಟುಮಾಡುವುದಕ್ಕೆ ಮಹತ್ವ ಕೊಡಬೇಕು. ಹಾಗಾದರೆ ಅವುಗಳಿಗೆ ಏನಾದರೊಂದು ಪರೀಕ್ಷಾಕಾಲ ಬಂತೆಂದರೆ ತಾವು ಒಬ್ಬಂಟಿಗರಾಗಿಲ್ಲ, ಸುತ್ತಲೂ ಗೆಳೆತನದ ಬೆಂಬಲವುಂಟೆಂಬ ಧೈರ್ಯವುಂಟಾಗುತ್ತದೆ; ಆಗ ಮಾತ್ರ ಮಗು ಏಕಾಂಗಿಯಾಗಿ ಹೋರಾಡುವ ಪ್ರಸಂಗ ಬಾರದೆ ಇಂಥ ದುರಂತಗಳು ಕಡಿಮೆಯಾದಾವು.

ಯಾವುದು ಯಾವುದಕ್ಕಿಂತ ಮೇಲು, ಯಾವುದಕ್ಕಿಂತ ಕೀಳೆಂಬ ವಿವೇಕವನ್ನು ಹುಡುಗರಲ್ಲಿ ಹುಟ್ಟಿಸುವುದು ಮತ್ತು ಮಹತ್ತಿಗೆ ಮಹತ್ವ ಮತ್ತು ಗೌಣಕ್ಕೆ ಗೌಣತ್ವವನ್ನು ಕೊಡಲು ಕಲಿಸುವುದೂ ಅವಶ್ಯವಾದ ಶಿಕ್ಷಣಾಂಗವೇ. ಮಹತ್ವ ಗೌಣತ್ವಗಳ ಬಗ್ಗೆ ಅಭಿಪ್ರಾಯಭೇದಗಳಿರಬಹುದು. ಆದರೂ ಮಾಧ್ಯಮಿಕ ಮತ್ತು ಉಚ್ಚ ಶಿಕ್ಷಣಗಳ ಸಮಯದಲ್ಲಿ ತಾರತಮ್ಯವಿವೇಕವನ್ನು ಹುಡುಗರೊಡನೆ ವಿಮರ್ಶಾತ್ಮಕವಾಗಿ ಚರ್ಚಿಸಿ ಅವರ ಧ್ಯೇಯ ಉದ್ದೇಶಗಳಿಗೆ ಯೋಗ್ಯವಾದ ತಾರತಮ್ಯ ವ್ಯವಸ್ಥೆಯನ್ನು ಮಾಡಿ ಕೊಡಬೇಕು.

ಜಗತ್ತಿನಲ್ಲಿ ಜೀವಿಕೆಯನ್ನು ಗಳಿಸಬೇಕಾದ್ದರಿಂದ ಕೆಲ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಬೇಕು; ಜಗತ್ತಿನಲ್ಲಿ ಸರಿಯಾದ ದಾರಿ ತೋರಲು ಜ್ಞಾನ ಸಂಪಾದನೆ ಮಾಡಬೇಕು; ಪರಿಶ್ರಮದಲ್ಲಿಯೂ ವಿಶ್ರಾಂತಿಯಲ್ಲಿಯೂ ಮನುಷ್ಯ ಜೀವನವನ್ನು ಕೃತಾರ್ಥವಾಗಿ ಮಾಡುವ ಸಲುವಾಗಿ ಚರಿತ್ರ, ಧೈರ್ಯ, ಸತ್ಯಸಂಧತೆ, ಔದಾರ್ಯ, ಸಹಕಾರ ಮೊದಲಾದ ಗುಣಗಳಲ್ಲಿ ಆಸಕ್ತಿಯೂ ಬೇಕು. ಇವೆಲ್ಲವೂ ತಮ್ಮ ತಮ್ಮ ರೀತಿಯಲ್ಲಿ ಮಹತ್ವವಾದವೂ ಅವುಗಳ ಪ್ರಾಮುಖ್ಯದಲ್ಲಿ ಒಂದು ತಾರತಮ್ಯವ್ಯವಸ್ಥೆಯಿದ್ದೇ ಇದೆ. ಶಾಲೆ ಕಾಲೇಜುಗಳ ಶಿಕ್ಷಣ ಪ್ರಣಾಲಿಯನ್ನೆಲ್ಲ ದಾಟಿದ ಮೇಲೂ ಈ ವ್ಯವಸ್ಥೆಯು ಗಂಧವೇ ವಿದ್ಯಾರ್ಥಿಗಾಗದಿದ್ದರೆ ಆ ಶಿಕ್ಷಣದಲ್ಲೇ ಏನೋ ಕೊರತೆಯಿದೆಯೆಂದು ತಿಳಿಯಬೇಕು.

ಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿರುವುದೊಂದೇ ಜೀವನದ ಇತರ ಸಮಸ್ತ ವಿಷಯಗಳನ್ನೂ ನಿರರ್ಥಕವಾಗಿ ಮಾಡುವುದೆಂಬ ಭಾವನೆ ವಿದ್ಯಾರ್ಥಿಯಲ್ಲುಂಟಾಗಿದ್ದರೆ ಅವನ ಶಿಕ್ಷಕರು (ಮತ್ತು ಹೆತ್ತವರು) ಜೀವನದ ತಾತ್ಪರ್ಯವನ್ನು ಅವನಿಗೆ ತಿಳಿಸಿಕೊಡುವ ಅವ್ಯ ಕರ್ತವ್ಯದಿಂದ ಚ್ಯುತರಾಗಿದ್ದಾರೆಂದು ತಿಳಿದುಕೊಳ್ಳಬೇಕು. ಅದಕಾರಣ, ವಿದ್ಯಾರ್ಥಿಯೊಡನೆ ಮೌಲ್ಯವಿವೇಕವನ್ನು ಚರ್ಚಿಸಿ ಶಿಕ್ಷಣಕ್ರಮದಲ್ಲಿ ಅವನ ಮನಸ್ಸಿನಲ್ಲಿ ಅಜ್ಞಾತವಾಗಿ ಉದ್ಭವಿಸಿರಬಹುದಾದ ಮೌಲ್ಯಕಲ್ಪನೆಯನ್ನು ಜಾಗೃತಾವಸ್ಥೆಗೆ ತಂದು ವಿವೇಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಎಡೆ ಮಾಡಿಕೊಡಬೇಕು.

ಜೀವನದ ಉತ್ತರೋತ್ತರದಲ್ಲಿ ವಿಪತ್ತು ಪೆಟ್ಟುಗಳನ್ನು ಅವಿಚಲಚಿತ್ತದಿಂದ ಎದುರಿಸಿಕೊಳ್ಳುವ ಧೃತಿ, ಸೋಲಿನಿಂದ ಗೆಲುವನ್ನು ರೂಪಿಸಿಕೊಳ್ಳುವ ಹಟ, ಆದರೆ ಎಲ್ಲದರಲ್ಲಿಯೂ ತಲೆಕೆಡಿಸಿಕೊಳ್ಳದ ವಿವೇಕ — ಇವೇ ಸರಿಯಾದ ಶಿಕ್ಷಣಕ್ಕೆ ಬರಬೇಕಾದ ಫಲ.

ಪರೀಕ್ಷೆ ಮತ್ತು ಉದ್ಯೋಗ

ಪರೀಕ್ಷೆಗಳಿಗೂ ಉದ್ಯೋಗಕ್ಕೂ ಸಂಬಂಧವೂ ರೋಗದಂತೆ ವಿದ್ಯಾರ್ಥಿಯ ... ಕಾಡುತ್ತದೆ. ಸರಕಾರಿ ಪರೀಕ್ಷೆಯಲ್ಲಿ ಸೋ... ಟಾದರೆ ಅವನಿಗೆ ಮೊದಲೇ ನಿರುದ್ಯೋಗ ಪೀಡಿತವಾದ ಜಗತ್ತಿನಲ್ಲಿ ಉದ್ಯೋಗ ... ಕುವದೇ ದುಸ್ತರವಾಗಿಬಿಡುತ್ತದೆ. ... ಯಲ್ಲಿ ಸೋತವನು ಎಲ್ಲದರಲ್ಲೂ ... ನೆಂದೇ ಭಾವಿಸಲ್ಪಡುತ್ತವೆ. ... ಪರೀಕ್ಷೆಯಲ್ಲಿ ಸರಿಯಾಗಿ ಮಾಡಲಾ...

—೧೯ ನೆಯ ಪು...

ಲಂಡನ್ನಿನಲ್ಲಿ ಸ್ವಾತಂತ್ರ್ಯೋತ್ಸವ

ಭಾರತದ ಭೂಜಲಾಕಾಶ ಪಡೆಗಳ ವಿದ್ಯಾರ್ಥಿಗಳು ಸೇರಿ ಹೈಕಮಿಶನರ ಶ್ರೀ ಕೃಷ್ಣ ಮೆನನರಿಗೆ ಗೌರವರಕ್ಷೆ ಸಲ್ಲಿಸುತ್ತಿರುವದು.

ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಸಡಗರದಿಂದ ಭಾಗವಹಿಸಿದ ಎರಡು ಭಾರತೀಯ ಮಕ್ಕಳು.

ವಿಚಾರ ದ್ವಂದ್ವ

ಈ ಶಿರೋಲೇಖದ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಲಾಗುವದು. ಕೇವಲ ವ್ಯಕ್ತಿಗತ ಟೀಕೆಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ಒಕ್ಕಲತನದ ಅಭಿವೃದ್ಧಿ

ಮೊನ್ನೆ ಮುಖ್ಯ ಮಂತ್ರಿಗಳು— "ಭಾರತವು ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಬೇಕೆಂಬ ಭಾರತ ಸರಕಾರದ ನಿರ್ಧಾರವನ್ನು ಈಡೇರಿಸಲು ಮುಂಬಯಿ ಪ್ರಾಂತದ ಪ್ರತಿಯೊಬ್ಬನು ಹೊಸ ಹುರುಪಿನಿಂದ ಹೊಸ ಹುಮ್ಮಸದಿಂದ ಸರ್ವವಿಧದಲ್ಲೂ ಪ್ರಯತ್ನಿಸಬೇಕೆಂದೂ ಆಹಾರ ರಂಗದಲ್ಲಿ ಸರ್ವಾಂಗೀಣ ವಿಜಯಕ್ಕಾಗಿ ಟೊಂಕ ಕಟ್ಟಬೇಕೆಂದೂ ಹೇಳಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವ ಕಾರ್ಯದಲ್ಲಿ ರೈತನನ್ನು ಎದುರಿಸುವ ಎಡರು ತೊಡರುಗಳನ್ನು ನಿವಾರಿಸುವ ಉದ್ದೇಶಗಳಿಂದ "ಹೆಚ್ಚು ಆಹಾರ ಬೆಳೆಯುವ ಯೋಜನೆಗಳು" ಸಿದ್ಧವಾಗಿ ಕಾರ್ಯರೂಪಕ್ಕಿಳಿಯುತ್ತಿವೆಯೆಂದೂ ಹೇಳಿದ್ದಾರೆ. ಆದರೆ ಇಂಥ ಯೋಜನೆಗಳಿಂದ ಒಕ್ಕಲತನವು ಎಷ್ಟರಮಟ್ಟಿಗೆ ಪೋಷಣೆ ಹೊಂದುವದೋ ಊಹಿಸಲು ಸಾಧ್ಯವಿಲ್ಲ. ಯೋಜನೆಗಳನ್ನು ಹೆಚ್ಚೆಚ್ಚು ಸಿದ್ಧಗೊಳಿಸುವದಕ್ಕಿಂತಲೂ ಅದನ್ನು ಸಕ್ರಿಯವಾಗಿ ಉಪಯೋಗಿಸುವದರಲ್ಲಿ ಹೆಚ್ಚು ಪರಿಣಾಮವಿದೆ. ಯಾಕಂದರೆ ಇಷ್ಟರೊಳಗೇ ಒಕ್ಕಲುತನದ ಬೆಳವಣಿಗೆಗಾಗಿ ಹಲವಾರು ಯೋಜನೆಗಳು ಕಾರ್ಯರಂಗಕ್ಕಿಳಿದಿವೆ. ರೈತನಿಗೆ ತಗಾವೀ ಸಾಲ, ಉತ್ತಮ ಬೀಜದ ಪೂರೈಕೆ, ಸತ್ವಪ್ರಳ್ಳ ಗೊಬ್ಬರ— ಇನ್ನೂ ಎಷ್ಟೋ ಬೇಸಾಯದ ಬೆಳವಣಿಗೆಗಾಗಿ ಕಾನೂನುಗಳು ಜಾರಿಯಲ್ಲಿವೆ ಆದರೆ ಬಡ ರೈತನೊಬ್ಬ ತನ್ನ ಹೊಲದ ಸಾಗುವಳಿಗಾಗಿ ಸರಕಾರಕ್ಕೆ ಸಾಲ ಬೇಡಲು ಅರ್ಜಿ ಮಾಡಿದರೆ- ಅವನಿಗೆ ಆ ಸಾಲದ ಹಣ ಸಿಗಬೇಕಾದರೆ ಆ ಸಾರೆಯ ಬೇಸಾಯದ ಹಂಗಾಮೇ ತೀರಿ ಹೋಗಬೇಕು. ತನ್ಮಧ್ಯೇ ಇದಕ್ಕಾಗಿ ಅಧಿಕಾರಿಗಳ ಭೆಟ್ಟಿಗಾಗಿ— ಹತ್ತಿಪ್ಪತ್ತು ಸಾರೆ ಪೇಟೆಗೆ ಸಂಚರಿಸಿ— ಇನ್ನೂ ಯಾರ್‍ಯಾರ ಕೈ ಬಿಸಿ ಮಾಡಬೇಕಾಗುವದೋ ಹೇಳಲು ಬರುವಂತಿಲ್ಲ. ಕೊನೆಗೆ ಮಂಜೂರಾದ ಹಣ ಬೇಸಾಯಕ್ಕೆ ಸಿಗದೇ ಜೀವನಕ್ಕೇ ಉಪಯೋಗಿಸಿ ಹೋಗಿಬಿಡುತ್ತದೆ. ಮೊದಲಿಗೇ ಅರ್ಜಿ ಮಾಡಿಕೊಂಡರೆ ಹಂಗಾಮಿನ ಹೊರತು ವಿಚಾರಕ್ಕೇ ತೆಗೆಯುವದಿಲ್ಲ. ಹೀಗಾಗಿ ಬೇಸಾಯದ ರೈತನಿಗೆ ಈ ಯೋಜನೆಯಿಂದ ಪ್ರಯೋಜನವಾದದ್ದೇನು? ಕಾನೂನು ಜಾರಿಯಲ್ಲಿದೆ, ಅದರ ವಿಚಾರಣೆಗೆ ಪಗಾರ ತಿನ್ನುವ ಅಧಿಕಾರಿಗಳಿದ್ದಾರೆ, ಸಾಲದ ಹಣ ಕೊಟ್ಟೇ ಕೊಡುತ್ತಾರೆ. ಆದರೆ ಇದರಿಂದ ಬೇಸಾಯಕ್ಕೆ ಮಾತ್ರ ಪ್ರಯೋಜನವಾಗಲಿಲ್ಲ. ಅದು ಬೆಳೆಯಲೂ ಇಲ್ಲ.

ಎಷ್ಟೋ ಕೇಕತೀ ಫಾರ್ಮುಗಳಲ್ಲಿ ಬೀಜದ ಪೂರೈಕೆಯೂ ಈ ಅವ್ಯವಸ್ಥೆಯಲ್ಲಿಯೇ ಇದೆ. ಬೀಜ ಬಿತ್ತುವ ಹಂಗಾಮಿನಲ್ಲಿ ಅಲ್ಲಿ ಬೀಜಗಳ ಸಂಗ್ರಹವೇ ಇರುವದಿಲ್ಲ. ಇನ್ನೂ ಬಂದಿಲ್ಲ ಸ್ವಾಮೀ! ಸದ್ಯವೇ ತರಿಸುತ್ತೇವೆ, ಎಂದು ಹೇಳಿ ಬಿಡುತ್ತಾರೆ. ಕಟ್ಟಕಡೆಗೆ ಹಂಗಾಮು ತೀರಿ ಬಂದ ಬೀಜಗಳನ್ನು ಉಣುವದಕ್ಕೆ ಉಪಯೋಗಿಸಿ ದುರುಪಯೋಗವಾಗುವದೂ ಉಂಟು.

ಒಕ್ಕಲುತನಕ್ಕೆ ಹಿತ ಮಾಡುವ ಕಾನೂನಿನ ಕತೆ ಹೀಗಾದರೆ ಆ ರೈತ ಬೆಳೆದ ಧಾನ್ಯದ ಎತ್ತುವಳಿಮಾಡುವಾಗಿನ ಕತೆ ಇನ್ನೂ ರಂಜಕವಾಗಿದೆ. ಅಗ ಗಾಂಧೀಜಿಯವರ ಅಹಿಂಸಾ ತತ್ವವೂ ಮರೆತು ಹೋಗುತ್ತದೆ. ರೈತನು ಬೆಳೆದ ಧಾನ್ಯವೆಷ್ಟು? ಅವನ ಕುಟುಂಬಕ್ಕೆ ಎಷ್ಟು ಬೇಕಾಗುತ್ತದೆ? ಇವುಗಳ ವಿಚಾರ ಮಾಡದೆ ಧಾನ್ಯದ ವಸೂಲಿಯೊಂದೇ ಮುಖ್ಯ ಗುರಿಯಾಗಿ ಹೋಗುತ್ತದೆ. "ಹೊಸ ಕಾಯಿದೆಯಾಗಿದೆ. ನಿನಗೆ ರೇಶನ್ನ ಕಾರ್ಡು ಚಾಲೂ ಮಾಡಿ ಕೊಡುತ್ತೇವೆ" ಎಂದು ಹೇಳಿ ಎಷ್ಟೋ ಕಡೆಯ ಬಡ ರೈತರಿಂದ ಪೂರಾ ಧಾನ್ಯವನ್ನೂ ವಸೂಲ ಮಾಡಿಬಿಡುತ್ತಾರೆ. ಇದರಿಂದ ಬೇಸಾಯ ಮಾಡದ ಜನಸಾಮಾನ್ಯರಿಗೂ ಧಾನ್ಯ ಬೆಳೆದ ರೈತನಿಗೂ ಯಾವ ಅಭ್ಯಂತರ? ಇದರಿಂದ ರೈತನಿಗೆ ತನ್ನ ವ್ಯವಸಾಯದಲ್ಲಿ ಪ್ರೀತಿ ಹುಟ್ಟುವ ಬಗೆ ಹೇಗೆ? ಅವನು ಬೆಳೆದ ಧಾನ್ಯ ಅವನಿಗೆ ಹೆಚ್ಚಾಗಿದ್ದರೆ ಅದನ್ನು ಸರಕಾರಕ್ಕೆ ತೆಗೆದುಕೊಳ್ಳಲು ಒತ್ತಾಯ ಮಾಡಬಹುದು. ಅದಿಲ್ಲದೆ ಬೆಳೆದ ರೈತನಿಗೆ ಸಾಕಷ್ಟು ಪ್ರೋತ್ಸಾಹ ಸಿಗದೇ ಅವನು ಸೀದಾ ಕಾರ್ಡಿನಲ್ಲಿ ಉಣ್ಣುವದೆಂದರೆ ಒಕ್ಕಲುತನ ಬೆಳೆದೀತೇ?

ಇಂದಿನ ಸಮಾಜದಲ್ಲಿ ಒಕ್ಕಲುತನಕ್ಕೆ ಯಾವ ಸ್ಥಾನಮಾನಗಳಿವೆ? ರೈತನೆಂದ ಕೂಡಲೇ ಅವನೊಬ್ಬ ಅಜ್ಞ ವ್ಯಕ್ತಿಯೆಂದು ತಿಳಿಯಲಾಗುವದು. ಪರಿಸ್ಥಿತಿಯೂ ಹಾಗೆಯೇ ಆಗಿಬಿಟ್ಟಿದೆ. ಮೊದಲನೆಯದಾಗಿ ರೈತನಿಗೆ ಸಾಕಷ್ಟು ಶಿಕ್ಷಣವಿಲ್ಲ. ಶಿಕ್ಷಣದ ಅಭಾವದಿಂದ ರೈತನ ಬುದ್ಧಿಯೂ ವಿಕಾಸವಾಗಲಿಲ್ಲ. ತನ್ನ ಉದ್ಯಮವನ್ನು ಹೇಗೆ ಮುನ್ನಡೆಸಬೇಕು? ಅದರಲ್ಲಿ ಉಂಟಾದ ನ್ಯೂನತೆಯೇನು? ಇವುಗಳನ್ನೂ ವಿಚಾರಿಸಿಕೊಂಡು, ಅವನ್ನೆಲ್ಲ ಸುಧಾರಿಸಿ ಪ್ರಗತಿ ಹೊಂದುವ ರೈತ ನಮಗೆ ದೊರೆಯುವದು ದುರ್ಲಭ. ತಮ್ಮ ಅದಾಯ ವೆಚ್ಚಗಳ ಪರಿಜ್ಞಾನವನ್ನೂ ಪಡೆಯದೇ ಇರುವ ರೈತರು ನಮಗೆ ಹೇರಳವಾಗಿ ಸಿಗಬಹುದು. ಹೀಗಿರುವಾಗ ಅವರ ಒಕ್ಕಲತನದ ಬೆಳವಣಿಗೆಗೆ ಬೇಕಾಗುವಷ್ಟಾದರೂ ಶಿಕ್ಷಣ ಕೊಡಿಸುವದು ಅಗತ್ಯವಲ್ಲವೇ? ರೈತ ಬುದ್ಧಿವಂತನಾದರೆ ತನ್ನ ಉದ್ಯಮವನ್ನೂ ಬೆಳೆಸುವನು. ಅದಕ್ಕೊಂದು ಸ್ಥಾನಮಾನವನ್ನೂ ದೊರಕಿಸಿಕೊಳ್ಳುವನು.

"ಛತ್ರವನ್ನು ಬಿತ್ತಿ ಭಾಗ್ಯವಂತರಾಗಿರಿ" ಎಂದು ರೈತರಿಗೆ ಒಕ್ಕಲತನದ ಬಗ್ಗೆ ಪ್ರಚೋದನೆ ಮಾಡಲು— ನೂರು ಬಣ್ಣದ ಚಿತ್ರಪಟಗಳು ಎಲ್ಲೆಲ್ಲಿಯೂ ಹಾರಾಡಿದವು. ಆದರೆ ಸುಶಿಕ್ಷಿತನಾದ ರೈತನಿಗೆ ಇವುಗಳ ಅಗತ್ಯವಿದೆಯೇ? ಇನ್ನು ಅಜ್ಞರ ಮನಸ್ಸಿನ ಮೇಲೆ ಇವು ಮನರಂಜನೆಯ ಹೊರತಾಗಿ ಇನ್ನಾವ ಪರಿಣಾಮಮಾಡಿದೆ? ಪಾಡಿದ್ದರೆ ಚಿತ್ರಪಟಗಳು ಹಾರಾಡಿ ವರ್ಷಗಳು ಉರುಳಿದರೂ ಇನ್ನೂ ಆಹಾರದ ಕೊರತೆ ಕೆಲ ಮಟ್ಟಿಗಾದರೂ ಏಕೆ ನೀಗಲಿಲ್ಲ? ಇದಕ್ಕೆಲ್ಲ ಉತ್ತರ ದೊರೆಯಬಹುದು. ಒಕ್ಕಲುತನದ ಪೋಷಣೆಗೆ ಕಾನೂನುಗಳನ್ನು ತೋರಿಸಿ ಕೊಡಬಹುದು. ಆದರೆ ಕಾನೂನುಗಳಾಗಿಯೇ ಹೊರತಾಗಿ ಅವುಗಳ ಪ್ರಯೋಜನ ಮಾತ್ರ ದೊರೆಯಲಿಲ್ಲ. ಇದರಲ್ಲಿ ಹೆಚ್ಚಿನ ಹೊಣೆ ಸರಕಾರದ್ದಲ್ಲ, ಅಧಿಕಾರಿಗಳದ್ದು. ಒಕ್ಕಲುತನದ ಬಗ್ಗೆ ಅಧಿಕಾರಿಗಳು ಅಸ್ಥೆ ವಹಿಸಿ ಉದಾರ ಧೋರಣೆ ತಾಳದಿದ್ದರೆ ಅದು ಸಮೃದ್ಧವಾಗಿ— ಹುಲುಸಾಗಿ— ಬೆಳೆಯಲಾರದು. ಭಾರತದ ಆಹಾರ ಸಮಸ್ಯೆಯೂ ನೀಗಲಾರದು.

ಶಿರಸಿ —ವಿಶ್ವೇಶ್ವರ ಶರ್ಮಾ ತದ್ದಲಸೆ.

ಸಹಾಯಕ ಪುಸ್ತಕಗಳು

ದಿನಾಂಕ೧೫-೮-೧೯೪೯ರ 'ಕರ್ಮವೀರ'ದಲ್ಲಿ ಬಂದ 'ಸಹಾಯಕ- ಪುಸ್ತಕಗಳು' ಎಂಬ ಲೇಖ ಓದಿ ಸೋಜಿಗವೆನಿಸಿತು. ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಸಹಾಯಕ- ಪುಸ್ತಕಗಳು, ಪ್ರಶ್ನೋತ್ತರ ಪುಸ್ತಕಗಳು, ಶಬ್ದಾರ್ಥದ ಪುಸ್ತಕಗಳನ್ನುಪಯೋಗಿಸಲು ಸರಕಾರವು ಮಂಜೂರಿ ಕೊಡಲೆಂಬುದೇ ಲೇಖನದ ಆಶಯ. ಈ ಸಿದ್ಧಾಂತಕ್ಕೆ ಬರಲು ಲೇಖಕರು ತಮ್ಮ ಶಕ್ತಿ ಮೀರಿ ವಿಚಾರ ಪ್ರಚೋದನಾ ವೈಖರಿಯನ್ನು ಹರಿಯಿಸಿದ್ದಾರೆ.

ಶಿಕ್ಷಕರು ರಾಷ್ಟ್ರದ ರಚನಾಶಿಲ್ಪಿಗಳಾಗಿರುವಾಗ ಅವರಲ್ಲಿಯೂ ನ್ಯೂನತೆ, ಅದೂ ಅಂತಹ ನ್ಯೂನತೆ ಬಹುಸಂಖ್ಯವಾಗಿ ಕಂಡುಬರುವುದೆಂದರೆ ಹಾಸ್ಯಾಸ್ಪದ. ಹಿಂದಿನ ಕ್ರಮಗಳ ತಾಗಲೀ ಇಂದಿನದವುಗಳಂತಾಗಲೀ ಶಿಕ್ಷಕರು ಅತೀವ ಯೋಗ್ಯರೇ ಆಗಿದ್ದಲ್ಲಿ ಅವರಿಂದ ತಯಾರಾದ ಹುಡುಗರು ಅತ್ಯುತ್ತಮ ನಾಗರಿಕರಾಗುವುದರಲ್ಲಿ ಸಂಶಯವಿಲ್ಲ. ಪ್ರಾಥಮಿಕ ಶಿಕ್ಷಕರ ಆರ್ಥಿಕ ಪರಿಸ್ಥಿತಿ ಕೊಂಚವೂ ಸಮಾಧಾನಕರವಿಲ್ಲ. ಅವರ ಜೀವನ ಮಟ್ಟವನ್ನು ತೀವ್ರದಲ್ಲಿಯೇ ಸುಧಾರಿಸಬೇಕೆಂದು ಎಲ್ಲೆಲ್ಲೂ ಗುಲ್ಲು ಕೇಳುತ್ತಿದೆ. ಮಾಧ್ಯಮಿಕ ಶಿಕ್ಷಕರೊಡನೆಯೂ ಕಾಲೇಜಿನ ಪ್ರೊಫೆಸರ ಲೆಕ್ಚರರೊಡನೆಯೂ ತಮ್ಮನ್ನು ಕೂಡಿಸಿಕೋಡು 'ಅವರಿಗೇಕೆ ಅಷ್ಟು ಪಗಾರು?' 'ನಮಗೇಕೆ ಇಷ್ಟೆ?' ಎಂದು ಹೇಳುವವರೂ ನ್ಯಾಯಾನ್ಯಾಯ ತೂಗುವವರೂ ಇದ್ದಾರೆ. ಆದರೆ ಪ್ರಾಥಮಿಕ ಶಿಕ್ಷಕರ ವಿದ್ಯಾ ಪರಿಣತಿಯನ್ನು ಪರಿಗಣಿಸಿದಲ್ಲಿ ಅವರಿಗೆ ತಾವು ಕಲಿಸುತ್ತಿರುವ ಯಾವುದೇ ವಿಷಯದಲ್ಲಿಯೂ ಸಂಪೂರ್ಣ ಜ್ಞಾನವಿರುವುದಿಲ್ಲ. ಇಂತಹ ಅಪೂರ್ಣ ಸ್ಥಿತಿಯಲ್ಲಿ ಹೊಟ್ಟೆ ಒಡೆದು ಬಂದ ಈ ಜ್ಞಾನದ ಮರಿಗಳು ಮಕ್ಕಳ ಹೂ ಮನಸ್ಸಿಗೆ ಬಲವಾದ ಅಘಾತಪ್ರಾಯರಾಗಿ ಪರಿಣಮಿಸುತ್ತಾರೇ ವಿನಾ ತಂದೆ, ತಾಯಿ, ಸನ್ಮಿತ್ರ, ಆಪ್ತರಾಗಿ ವಿದ್ಯೆ ಬುದ್ಧಿ ಕಲಿಸಲು ಮುಂದಾಗುವುದಿಲ್ಲ. ನೂರಕ್ಕೆ ತೊಂಬತ್ತರಷ್ಟು ಶಿಕ್ಷಕರು ಚಟಕ್ಕೆ ತುತ್ತಾದವರೇ ಇರುತ್ತಾರೆ. ಮಕ್ಕಳೆದುರಿಗೆ ಕಲಿಸಲು ಕುಳಿತಾಗ ಬೀಡಿ ಸಿಗರೇಟು ಸೇದುವವರೂ ಚಹ ತರಿಸಿಕೊಂಡು ಪೀಕಲಾಟ ಎಬ್ಬಿಸುವವರೂ ಇದ್ದಾರೆ. ಕರ್ಣಕಠೋರವಾದ ಬಿರುನುಡಿಗಳನ್ನಾಡುವವರೂ ಇದ್ದಾರೆ. ಸಾಮಾನ್ಯವಾಗಿ ಯಾವ ವಿಷಯಗಳಲ್ಲಿಯೂ ಇವರು ಪೂರ್ಣ ಪಾರಂಗತರಲ್ಲ. ಇವರು ವಿಷಯವನ್ನು ಮನವಾರೆ ಎದೆಯಾರೆ ಮಕ್ಕಳು ಗ್ರಹಿಸುವಂತೆ ತಿಳಿಸಲು ಶಕ್ಯವಾಗದೆ ಪೇಚಾಡಿ 'ಬೆತ್ತದ' 'ಛಡಿಯ' ಬೆಂಬಲ ಬಯಸುತ್ತಾರೆ. ಸಮರ್ಥರಾದವರನ್ನೇ ಶಿಕ್ಷಕರ ಕೆಲಸಕ್ಕೆ ಆರಿಸಿದಾಗ ಸಹಾಯಕ ಪುಸ್ತಕಗಳನ್ನು ಬಳಸಲು ಮಂಜೂರಿ ಕೊಡುವ ಪ್ರಶ್ನೆಯೇ ತಲೆದೋರುವುದಿಲ್ಲ. 'ಧರ್ಮಶಾಲೆ ಅಂದರೆ ಧರ್ಮಶಾಲೆ', 'ಗಿಳಿ ಅಂದರೆ ಗಿಳಿ' ಎಂದು ಮಕ್ಕಳಿಗೆ ಗಿಳಿ ಪಾಠ ಮಾಡಿಸಿ ಮಕ್ಕಳ ಆಯುಷ್ಯದ ಅಮೂಲ್ಯ ವೇಳೆಯನ್ನು ಕಳೆಯುವ ಇವರಿಂದ ರಾಷ್ಟ್ರದ ಶೈಕ್ಷಣಿಕ ಸಂಸ್ಕಾರ ಎಷ್ಟರ ಮಟ್ಟಿಗೆ ಸಾಧ್ಯವೋ ಹೇಳಲಶಕ್ಯ. ಪ್ರಾಥಮಿಕಶಿಕ್ಷಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಅವರ ಜೀವನಮಟ್ಟವನ್ನು ಮೇಲಕ್ಕೆತ್ತಬೇಕೆಂಬುದು ನಿರ್ವಿವಾದ! ಆದರೆ ಅವರ ಸಮರ್ಥತೆಯ ಬಗ್ಗೆ ವಿಚಾರ ಮಾಡಿದಾಗ ಪ್ರತಿಫಲ ರೂಪವಾಗಿ ಮಕ್ಕಳ ಪಾಲಿಗೆ ಬರುವ ಜ್ಞಾನದ ಅಂಶ ಮಾತ್ರ ಅಷ್ಟಕ್ಕಷ್ಟೆ! ಇಂಥವರಿಗೆ ಸಹಾಯಕ ಪುಸ್ತಕಗಳನ್ನುಪಯೋಗಿಸಲು ಮಂಜೂರಿ ಕೊಟ್ಟರೂ ಅಷ್ಟೇ. ಹೀಗಿರುವಾಗ ಪ್ರಾಥಮಿಕ ಶಿಕ್ಷಕರಿಗೆ ಸಹಾಯಕ ಪುಸ್ತಕಗಳನ್ನುಪಯೋಗಿಸಲು ಮಂಜೂರಿ ಕೊಡುವುದಕ್ಕಿಂತ ಅಂತಹ ಎಳೆ ಮನಸ್ಸಿನ ಶಿಕ್ಷಕರಲ್ಲಿ ವಿದ್ಯಾಭಿರುಚಿಯನ್ನು ಹಚ್ಚಿ ಅವರ ಜ್ಞಾನ ಭಾಂಡಾರವನ್ನು ಹೆಚ್ಚಿಸುವುದೇ ಉತ್ತಮವಲ್ಲವೇ?

ಟ್ರೇಂಡ ಆಗಲು ಬೇಕಾದ ಎರಡು ವರ್ಷಗಳ ಕಾಲವಲ್ಲಿಯೇ ಕಲಿಕೆಯೆಲ್ಲ ಮುಗಿದು ಹೋಗುವುದೆಂದು ಭಾವಿಸುವುದು ತರವಲ್ಲ. ಮನುಷ್ಯನು ಹುಟ್ಟಿದಾರಭ್ಯ ಸಾಯುವತನಕವೂ ಕಲಿಯುವುದು ನಡೆದೇ ಇರುತ್ತದೆ. ಕಲಿಕೆ ಎಂದಿಗೂ ಮುಗಿಯದು. ಹೀಗಿರಲು "ವ್ಯಕ್ತಿಯು ಎಷ್ಟು ವಿಷಯಗಳನ್ನು ಆಳವಾಗಿ ಎರಡೇ ವರ್ಷಗಳಲ್ಲಿ ಅಭ್ಯಾಸ ಮಾಡಬಲ್ಲನು?" ಎಂಬುದು ಸಂಕುಚಿತ ಭಾವದ್ಯೋತಕವಾಗುವುದಿಲ್ಲವೆ? ಪ್ರತಿಯೊಂದು ವಿಷಯದಲ್ಲಿ ಪೂರ್ಣ ಪರಿಶ್ರಮವಿದ್ದ ಕರ್ತವ್ಯನಿಷ್ಠ 'ಕಲ್ಯಾಣ'ನು' ಎಷ್ಟೇ ವಿಷಯಗಳನ್ನಾದರೂ ಕಲಿಸಬಲ್ಲನು. ಆದರೆ ಯಾವುದಕ್ಕೂ 'ತಳಮಳ' ದಿಂದ ದುಡಿಯುವ ನಿಷ್ಠಾವಂತರು ಬೇಕು. ಅಂತಹ ಜನರನ್ನು ನೇಮಿಸುವುದರಿಂದ ರಾಷ್ಟ್ರದ ಭವ್ಯ ಭವಿತವ್ಯಕ್ಕೊಂದು ಹೊಸ ಕಳೆ ಹೊಸ ಜೀವ ಸಂಧಿಸಿ ಸುಜ್ಞಾನದ ಚಿತ್ರ ಮೂಡುವುದರಲ್ಲಿ ಸಂಶಯವಿಲ್ಲ ಹೊರತು, ಸಹಾಯಕ ಪುಸ್ತಕಗಳ ಹವ್ಯಾಸದಲ್ಲಿ ನಿಜವಾದ ಜ್ಞಾನಾರ್ಜನೆಗೂ ಜ್ಞಾನ ಪ್ರಕಾಶಕ್ಕೂ ತತ್ವಾರ ಬರುತ್ತದೆ.

ಕಾರವಾರ

೧೫-೮-೪೯ —ಉಪೇಂದ್ರ ನಾಯಕ

ಲಂಚದ ಹೊಣೆಯ ವ್ಯಾಪಕಾರ್ಥ

೧-೮-೧೯೪೯ ನೇ ದಿನಾಂಕದ "ಕರ್ಮವೀರ"ದಲ್ಲಿ ಬರೆದ "ಲಂಚದ ಹೊಣೆ" ಈ ವಿಷಯದ ಲೇಖದ ಬಗ್ಗೆ ವಿಶಾಲ ಹೃದಯದ ಓದುಗರೊಬ್ಬರು ಸಮಾಧಾನವನ್ನು ವ್ಯಕ್ತ ಮಾಡಿದುದಕ್ಕೆ ನಾನವರ ಅಭಾರವನ್ನು ಮನ್ನಿಸಿ, ಲಂಚದ ಹೊಣೆಯನ್ನು ಸರಕಾರಿ ನೌಕರರ ಮೇಲೆಯೇ ಹಾಕಲು ವಿಷಯವನ್ನು ಕೇಂದ್ರೀಕರಿಸಿದ ಅದರ ಮೋಡಿಯನ್ನು ಕಂಡಾಗ ಅವರಿಗೆ ಬಂದ ನಗೆಯು ಮಾರ್ಗದರ್ಶಕವಾಗಿರುತ್ತದೋ ಹೇಗೆಂಬುದನ್ನು ವಿಷಯದ ವ್ಯಾಪಕಾರ್ಥದ ದೃಷ್ಟಿಯಿಂದ ಈ ಕೆಳಗೆ ಕೊಂಚ ವಿವೇಚಿಸಿದ್ದೇನೆ.

ಲಂಚಗುಳಿಗಳಲ್ಲಿ (ಲಂಚವನ್ನು) ಕೊಡುವವರಿಗಿಂತ ತಗೊಳ್ಳುವವರೇ ಹೆಚ್ಚು ಹೊಣೆಗಾರರಲ್ಲವೆ? ಎಂತ ಕೇಳಿದ್ದರಲ್ಲಿ ಲಂಚದ ಹೊಣೆಯನ್ನು ಅವರಲ್ಲಿ ಒಬ್ಬರ ಮೇಲೆಯೇ ಹೇಗೆ ತಾನೆ ಹೊರಿಸಿದಂತಾಯಿತು! ಲಂಚಗುಳಿತನದಲ್ಲಿ ಜನತೆ ಮತ್ತು ಸರಕಾರಿ ನೌಕರರು ಕ್ರಮವಾಗಿ ಲಂಚವನ್ನು ಕೊಡುವವರೂ ಲಂಚವನ್ನು ತಗೊಳ್ಳುವವರೂ ಮತ್ತು ಸೇವೆಯನ್ನು ಸ್ವೀಕರಿಸುವವರೂ ಸೇವೆಯನ್ನು ಸಲ್ಲಿಸುವವರೂ ಎಂದರ್ಥ ಜನತೆಗೆ ಸೇವೆಯ ಅವಶ್ಯಕತೆ ಇದ್ದದರಿಂದಲೇ ಸರಕಾರದ ನಿರ್ಮಾಣ ಸರಕಾರಿ ನೌಕರನು ಲಂಚವನ್ನು ತಗೊಳ್ಳುವ ಲಕ್ಷಣದವನಿರದೆ ನಿಃಸ್ವಾರ್ಥ ಸೇವೆಯನ್ನು ಸಲ್ಲಿಸುತಿದ್ದರೆ ಸೇವೆಯ ಅವಶ್ಯಕತೆಯುಳ್ಳ ಜನತೆ ಎಂದೆಂದಿಗೂ ಲಂಚವನ್ನು ತೆರಲಾರದು. ಆದ್ದರಿಂದ ಲಂಚಗುಳಿತನದ ಮೂಲವು ಹೆಚ್ಚಾಗಿ ಲಂಚವನ್ನು ತಗೊಳ್ಳುವಿಕೆಯಲ್ಲಿದೆ ಎಂತಲೂ ಲಂಚವನ್ನು ತಗೊಳ್ಳುವಿಕೆಯು ನಿಂತೊಡನೆ ಲಂಚವನ್ನು ಕೊಡುವಿಕೆಯು ಸಹ ಖಂಡಿತವಾಗಿಯೂ ನಿಲ್ಲುವದೆಂತಲೂ ನನ್ನ ನಮ್ರ ಅಭಿಮತ. ಆದರೆ ಅದೇ ಲಂಚ ಕೊಡುವಿಕೆಯನ್ನು ನಿಲ್ಲಿಸುವಲ್ಲಿ ತನಗೆ ಅವಶ್ಯವುಳ್ಳ ಸೇವೆಯು ಸಾಧಿಸಲ್ಪಡಲಿಕ್ಕಿಲ್ಲೆಂಬ ಭೀತಿಯು ಜನತೆಯಲ್ಲಿ ಸಹಜವಾಗಿ ಅಡ್ಡಬರುವಂತಿದೆ.

ಕೆಳದರ್ಜೆಯ ನೌಕರರ ಲಂಚದ ವಿಷಯದಲ್ಲಿ ಮೂಲ ಮಾತೆಂದರೆ ಅವರಲ್ಲಿ ರಕ್ತಗತವಾದ ಹೀನಸ್ಥಿತಿಯೆಂಬುದೇನೋ ಒಪ್ಪುತ್ತೇನೆ. ಆದರೆ ಉಚ್ಚ ದರ್ಜೆಯ ನೌಕರರಲ್ಲದೇಕೆ ಲಂಚಗುಳಿತನವು ಬೇರುಬಿಟ್ಟದೆ? ಕೆಳದರ್ಜೆಯ ನೌಕರರಲ್ಲಿ ನಿಜವಾಗಿಯೂ ರಕ್ತಗತವಾದ ಹೀನ ಸ್ಥಿತಿ ಇದ್ದುದಾದರೆ ಅವರೆಲ್ಲರೂ ಶಿಸ್ತು ಪೂರ್ಣವಾದ ಸಂಘಟನೆಯಿಂದ ನ್ಯಾಯಬದ್ಧವಾದ ಬೇಡಿಕೆಯನ್ನು ಜನತಾ ಸರಕಾರದ ಮುಂದಿಟ್ಟು ಬಗೆಹರಿಸಿಕೊಳ್ಳಲಿ. ಕೆಳದರ್ಜೆಯವರು ಬೇಕಾದಷ್ಟು ಹೀನ ಸ್ಥಿತಿಗೊಳಪಟ್ಟಿರಲಿ, ಪಾಪಕರವಾದ ಆ ಲಂಚಗುಳಿತನವನ್ನು ಸಮೂಲ ಬಿಡುವದೇ ಶ್ರೇಯಸ್ಕರ.

ಜನತಾ ಸೇವೆಗೆ ಆರಿಸಿ ಬರುವ ಸರಕಾರಿ ನೌಕರರು ಸುಜ್ಞಾನಿಗಳ ತಂಡವೆಂದು ನಮ್ಮ ಮನೋರಾಜ್ಯದಲ್ಲಿ ನಾವು ಸಿದ್ಧಾಂತ ಮಾಡುವದು ಅವರ ಜ್ಞಾನಭರಿತವಾದ ಕೃತಿಯು ಕಾರ್ಯರಂಗಕ್ಕಿಳಿದ ಮೇಲೆ ಮಾತ್ರ. ಜನತೆಯು ಸರಕಾರವನ್ನು ಸುಜ್ಞಾನಿಗಳ ತಂಡವೆಂದೇ ನಿರ್ಮಿಸುತ್ತದೆ. ಆದರೆ ಕಾಲಾಂತರದಲ್ಲಿ ಆ ಸರಕಾರಿ ನೌಕರರು ಪ್ರಾಮಾಣಿಕ ಸೇವೆಯನ್ನು ಸಮರ್ಪಿಸುವದನ್ನು ಬಿಟ್ಟು ಅಜ್ಞಾನಪೂರ್ಣವಾದ ವೃತ್ತಿಯವರಾದಲ್ಲಿ ಅವರು ಖಂಡಿತವಾಗಿಯೂ ಒಂದಿಲ್ಲೊಂದು ದಿನ ಕ್ರಾಂತಿಯಿಂದ ಕೆಳಗುರುಳದಿರಲಾರರು.

ಸತ್ಯನಿಷ್ಠೆ, ಪ್ರಾಮಾಣಿಕತನ, ಸೇವಾತತ್ಪರತೆ ಇವುಗಳ ಥಳಕಿನಲ್ಲಿ ಎಲ್ಲ ವ್ಯವಹಾರಗಳ ಕೈಚಳಕ ನಡೆದಿರುವದು ದೇಶದ ದುರ್ಭಾಗ್ಯ. ಸತ್ಯನಿಷ್ಠೆ, ಪ್ರಾಮಾಣಿಕತನ, ಸೇವಾತತ್ಪರತೆ ಈ ಸದ್ಗುಣಗಳು ಥಳಕುಮಯವಾಗುಳ್ಳವರು ಈಶನ ದೃಷ್ಟಿಯಲ್ಲಿ ದೇಶದ್ರೋಹಿಗಳು ಮಾತ್ರವಲ್ಲ, ಅವರು ವಿಶ್ವದ್ರೋಹಿಗಳೂ ಅಹುದು.

ಅಪ್ರಾಮಾಣಿಕ ನಾಗರಿಕರ ಅಮಾನುಷ ವೃತ್ತಿಯೊಳಗಿಂದ ಪ್ರಾಮಾಣಿಕ ನಾಗರಿಕರನ್ನು ಸಂರಕ್ಷಿಸುವದೇ ಸರಕಾರ ರಚನೆಯ ಮೂಲೋದ್ದೇಶ. ಅದನ್ನು ಯಶಸ್ವಿಯಾಗಿ ಸಾಧಿಸುವದಿದ್ದಾಗ ಸರಕಾರಿ ನೌಕರರು ಸಂಪೂರ್ಣವಾಗಿ ಪ್ರಾಮಾಣಿಕರಿದ್ದ ವಿನಾ ಪ್ರಯೋಜನವಿಲ್ಲ. ಆದ್ದರಿಂದ ಸರಕಾರಿ ನೌಕರರ ಪ್ರಾಮಾಣಿಕತೆಯು ಅಖಂಡವಾಗಿ ಸಾಕ್ಷಾತ್ಕಾರ ಹೊಂದಬೇಕಾದರೆ ಅವರು ಮೊಟ್ಟಮೊದಲು ಲಂಚಗುಳಿತನವನ್ನು ಬಿಟ್ಟುಬಿಡುವದು ಅತ್ಯವಶ್ಯ.

— ಸೌ॥ ರಾಧಾಬಾಯಿ ಗಾಂಜೇಕರ

ಸಮಸ್ತ ಭಾರತ

ಮುಂಬಯಿ

ನಗರದಲ್ಲಿ ಆಗಾಗ ಉಂಟಾಗುತ್ತಿರುವ ನೀರಿನ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮೋಡಗಳ ಮೇಲೆ ಒಣ ಬರ್ಫನ್ನು ಹರಿಸಿ ಕೃತ್ರಿಮ ಮಳೆ ಸುರಿಸುವ ಯೋಜನೆಯ ಸಾಧ್ಯಾಸಾಧ್ಯತೆಗಳನ್ನು ಮುಂಬಯಿ ಕಾರ್ಪೋರೇಶನ್ನಿನವರು ಚರ್ಚಿಸಿದರು. ಮುಂಬಯಿ ನಗರಕ್ಕೆ ನೀರನ್ನು ಪೂರಯಿಸುತ್ತಿರುವ ಟಾಟಾ ಸರೋವರದ ಮೇಲೆಯೆ ಮಳೆ ಬೀಳುವಂತೆ ಯೋಜಿಸುವ ಸಾಧ್ಯಾಸಾಧ್ಯತೆಗಳನ್ನು ವರದಿ ಮಾಡಲು ಕಮೀಶನರರನ್ನು ಕೇಳಲಾಗಿದೆ.

ಜವಳಿ ಗಿರಣಿಗಳಲ್ಲಿಯ ಸಂಗ್ರಹವನ್ನು ಕರಗಿಸುವದಕ್ಕಾಗಿ ಸರಕಾರದವರು ನಿಯಮಗಳನ್ನು ಕೆಲಮಟ್ಟಿಗೆ ಸಡಿಲಿಸಿದ್ದರ ಪರಿಣಾಮವಾಗಿ ಮುಂಬಯಿ ನಗರದಲ್ಲಿ ಲೈಸೆನ್ಸಿಗಾಗಿ ವರ್ತಕರಿಂದ ೫೦೦ ಅರ್ಜಿಗಳು ೪೮ ಗಂಟೆಗಳಲ್ಲಿ ಬಂದಿವೆ. ಆದರೆ ಅಹಮದಾಬಾದದಲ್ಲಿ ಒಂದೂ ಅರ್ಜಿಯು ಬಂದಿರುವದಿಲ್ಲ. ಸರಕಾರವು ಬಟ್ಟೆ ನಿಯಂತ್ರಣವನ್ನು ಪೂರ್ಣವಾಗಿ ಬಿಟ್ಟುಕೊಡುವಂತೆ ಒತ್ತಾಯಪಡಿಸುವದಕ್ಕಾಗಿಯೆ ಅಹಮದಾಬಾದ ಬಟ್ಟೆ ವರ್ತಕರು ಈ ಆಟ ಹೂಡಿರುವರೆಂದು ಹೇಳಲಾಗುತ್ತದೆ.

ಪುಣೆಯ ಕೇಸರಿ ಪತ್ರದ ಸಂಪಾದಕ ಶ್ರೀ. ಕೇಳಕರರಿಗೆ ೫೦ ವರುಷ ತುಂಬಿದ್ದರಿಂದ ಅವರು ೨೫ ವರುಷ ಸಾರ್ವಜನಿಕ ಸೇವೆ ಸಲ್ಲಿಸಿದ್ದರಿಂದ ಡಾ. ಎನ್. ಬಿ. ಖರೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅವರನ್ನು ಅಭಿನಂದಿಸಲಾಯಿತು.

ಪುಣೆಯ ರಾಸ್ತೇವಾಡೆಯಲ್ಲಿ ಶ್ರೀ ಬಿದರಹಳ್ಳಿ ಕೃಷ್ಣಮೂರ್ತಿಯವರ ಮನೆಯಲ್ಲಿ ಭಕ್ತರು ಸೇರಿ ಕೃಷ್ಣಾಷ್ಟಮಿಯನ್ನು ಆಚರಿಸಿದರು. ಶ್ರೀ ಕನಕಗಿರಿ ಕೃಷ್ಣಾಚಾರ್ಯರು ಜನ್ಮಾಷ್ಟಮಿಯ ಮಹತ್ವವನ್ನು ಕುರಿತು ಮಾತಾಡಿದರು. ರಾತ್ರಿ ಜನ್ಮೋತ್ಸವ ಜರುಗಿತು.

ಪುಣೆಯಲ್ಲಿ ಪ್ರತಿ ಏಕಾದಶಿಗೊಮ್ಮೆ ಜಾಗರೋತ್ಸವ ನಡೆಸಿ ಭಗವದ್ಭಜನೆ ಮೊದಲಾದ್ದನ್ನು ಮಾಡುವದರ ಸಲುವಾಗಿ ಗುಂಪೊಂದು ಸಿದ್ಧವಾಗಿದ್ದು ಶ್ರೀ ಬಿದರಹಳ್ಳಿ ಕೃಷ್ಣಮೂರ್ತಿಯವರ ಮನೆಯಲ್ಲಿ ಕೂಡಬೇಕೆಂದು ಮಾಡಿದ್ದಾರೆ. ಇದಲ್ಲದೆ ಪುರಂದರದಾಸರು ಟೀಕಾಚಾರ್ಯರು ರಾಘವೇಂದ್ರಸ್ವಾಮಿಗಳು ಮೊದಲಾದವರ ಪುಣ್ಯತಿಥಿಗಳನ್ನು ಮಾಡಲು ನಿರ್ಧರಿಸಿರುವರು. ಆದುದರಿಂದ ಭಕ್ತರೆಲ್ಲ ಇದರಲ್ಲಿ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಕೇಳಿಕೊಳ್ಳುತ್ತಾರೆ.

ಗೋಹಿಲವಾಡಾ ಜಿಲ್ಹೆಯ ಒಂದು ಹಳ್ಳಿಯಲ್ಲಿ ಒಂದು ಪಂಗಡದವರ ಮೇಲೆ ಒರ್ವನ ಕೊಲೆಯ ಬಗ್ಗೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಸಶಸ್ತ್ರ ಗುಂಪೊಂದು ಹಳ್ಳಿಯ ಮೇಲೆ ದಾಳಿಮಾಡಿ ಹತ್ತು ಜನರನ್ನು ಕೊಂದು ಹಾಕಿದೆಯೆಂದು ತಿಳಿಯುತ್ತದೆ. ಗಾಯಾಳುಗಳಲ್ಲಿ ಮೂವರು ಹಿಂದುಗಡೆ ಸತ್ತರು. ಒಬ್ಬನನ್ನು ಸೆರೆಹಿಡಿದಿದ್ದಾರೆ.

ಪಶ್ಚಿಮ ಬಂಗಾಲ

ಬಂಗಾಲದ ಕಲಾ ಕುಶಲರಾದ ಶ್ರೀ ವಿಮಲ ರಾಯ ಇವರು ಜಾರ್ಜ ಬರ್ನಾರ್ಡ ಶಾ ಇವರಿಗೆ ತಾವು ತೆಗೆದ ಗಾಂಧೀಜಿ ಮೊದಲಾದವರ ಚಿತ್ರಗಳನ್ನು ಕಳಿಸಿದ್ದರು. ಶಾ ಇವರು ಅವನ್ನು ತುಂಬ ಮೆಚ್ಚಿ "ಮಹಾತ್ಮರು ಗುಂಡಿಗಾಹುತಿಯಾಗುವರು. ಇಲ್ಲವೆ ನೀವು ನನ್ನನ್ನು ಈ ಚಿತ್ರದಲ್ಲಿ ಕಾಣುವಂತೆ ಸಾವಕಾಶವಾಗಿ ನಶಿಸಿ ಬಿಡುವರು. ಆದರೆ ಅವರ ಜೀವನ ಪ್ರಭಾವ ಮಾತ್ರ ಎಲ್ಲೆಡೆ ಪಸರಿಸುವದು" ಎಂದು ತನ್ನ ಭಾವಚಿತ್ರದ ಬೆನ್ನಿನ ಮೇಲೆಯೇ ಬರೆದು ಕಳಿಸಿರುವನು.

ಕಲಕತ್ತೆಯಿಂದ ೧೪ ಮೈಲುಗಳ ಮೇಲಿರುವ ಭದ್ರೇಶ್ವರದಲ್ಲಿ ೩೧ ಕ್ಕೆ ಗಲಭೆ ಸಂಭವಿಸಿ ೨೧ ಜನರಿಗೆ ಗಾಯಗಳಾದ್ದರಿಂದ ಕರ್ಫ್ಯೂ ಜಾರಿ ಮಾಡಲಾಗಿತ್ತು. ಅದನ್ನು ಮುರಿದದ್ದಕ್ಕಾಗಿ ೨೭ ಕ್ಕೆ ೫೦ ಜನರನ್ನು ಬಂಧಿಸಲಾಗಿದೆ.

ಪಶ್ಚಿಮ ಬಂಗಾಲ ಶಾಸನ ಸಭೆಯ ಮುಂಬರುವ ಚುನಾವಣೆಗಳನ್ನು ಸ್ಪರ್ಧಿಸಬೇಕೆಂದು ಅಖಿಲ ಭಾರತ ಪುರೋಗಾಮೀ ಪಕ್ಷದ ಕೇಂದ್ರ ಸಮಿತಿಯು ನಿರ್ಣಯ ಸ್ವೀಕರಿಸಿದೆ.

ಹೊಸದಿಲ್ಲಿ

ಇದೇ ಸಪ್ಟಂಬರ ೭ ರಿಂದ ೧೬ ರ ವರೆಗೆ ಕಾನಡಾದಲ್ಲಿ ಸೇರಲಿರುವ ಕಾಮನವೆಲ್ಥ ಸಂಬಂಧದ ಪರಿಷತ್ತಿಗೆ ಹಿಂದುಸ್ತಾನದ ಪರವಾಗಿ ಹೋಗಲಿರುವ ಶಿಷ್ಟಮಂಡಲದಲ್ಲಿ ಸರ್ ಟಿ. ವಿಜಯರಾಘವಾಚಾರಿಯರ ಬಿ. ಶಿವರಾವ ಡಾ. ವಿಜಯೇಂದ್ರರಾವ ಮತ್ತು ಪ್ರೊ. ಮುಜೀಬ ಇವರು ಇರುವರು.

ದೇಶದಲ್ಲಿಯ ವಿವಿಧಶಕ್ತಿಗಳನ್ನು ಒಂದುಗೂಡಿಸಿ ಯಾವದೇ ವಿಶಿಷ್ಟವರ್ಗ ಇಲ್ಲವೆ ಜಾತಿಯ ಬಗ್ಗೆ ದ್ವೇಷಭಾವನೆಯನ್ನು ತಾಳದೆ ಜನತೆಯನ್ನು ಪ್ರಗತಿಪಥದಲ್ಲಿ ಸಂಘಟಿಸಿ ಮಾನವ ಜನಾಂಗದ ಸುಖವನ್ನು ಸಾಧಿಸುವದೇ ನಮ್ಮ ಸಂಘದ ಉದ್ದೇಶವಾಗಿದೆ. ಉಚ್ಚ ಚಾರಿತ್ರ್ಯ ಮತ್ತು ದೃಢ ನಿರ್ಧಾರದ ಮೇಲೆಯೇ ಸಂಘವು ಆಧರಿಸಿದೆ. ನಮ್ಮ ಸಂಘದಲ್ಲಿ ಮದ್ದು ಗುಂಡಿಗಾಗಲಿ ಹಣದಂಡೆಗಾಗಲಿ ಸ್ಥಾನವಿಲ್ಲ ಎಂದು ಮುಂತಾಗಿ ಆರ್. ಎಸ್. ಎಸ್. ದ ಸರ ಸಂಚಾಲಕರಾದ ಶ್ರೀ ಗೋಳವಲಕರರು ತಮಗೆ ದಿಲ್ಲಿಯಲ್ಲಿ ಕೊಟ್ಟ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೇಳಿದರು.

ಆಹಾರದ ಕೊರತೆಯನ್ನು ನೀಗಿಸಲು ಅಷ್ಟೇ ಏಕೆ ಅದರ ನಾಶವನ್ನು ಸಂಪೂರ್ಣವಾಗಿ ತಡೆಗಟ್ಟಲು ಸೈನಿಕರು ಪ್ರಕರಣಪೂರ್ವಕವಾಗಿ ದುಡಿಯುತ್ತಿರುವರು ನಮ್ಮ ಠಾಣ್ಯಗಳಲ್ಲಿ ನಾವೇ ಆರು ತಿಂಗಳುಗಳಲ್ಲಿ ೨೫ ಸಾವಿರ ಗಿಡಗಳನ್ನು ಹಚ್ಚಿದ್ದೇವೆ ಪ್ರತಿಯೊಬ್ಬ ಅಧಿಕಾರಿ ತನ್ನ ಬಂಗಲೆಯಲ್ಲಿ ಎರಡೆರಡು ಹಣ್ಣಿನ ಗಿಡ ಹಚ್ಚಲು ನಿರ್ಧರಿಸಿದ್ದಾನೆ. ಇನ್ನು ಕೆಲ ದಳಗಳು ಕಾಯಿಪಲ್ಲೆ ಬೆಳೆಸುವಲ್ಲಿ ತೊಡಗಿವೆ ಎಂದು ಹಿಂದುಸ್ತಾನದ ಸೇನಾಪತಿಗಳಾದ ಕಾರ್ಯಪ್ಪನವರು ಸೈನ್ಯಭರತಿ ಮೇಳದ ನಿಮಿತ್ತ ಜಯಪುರದಲ್ಲಿ ಕೂಡಿದ ೧।। ಲಕ್ಷ ಜನರ ಸಭೆಯಲ್ಲಿ ಹೇಳಿದರು.

ರಶಿಯದಲ್ಲಿ ಹಿಂದುಸ್ತಾನದ ರಾಯಭಾರಿಗಳಾಗಿ ನೇಮಕಹೊಂದಿದ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರು ಸಪ್ಟಂಬರ ೧೯ ಕ್ಕೆ ಪ್ಯಾರಿಸನಲ್ಲಿ ಸೇರಲಿರುವ ಸಂಯುಕ್ತರಾಷ್ಟ್ರ ಸಂಘದ ಶಿಕ್ಷಣ ವಿಜ್ಞಾನ ಸಾಂಸ್ಕೃತಿಕ ಸಂಘದ ಸಾಮಾನ್ಯ ಸಭೆಯ ನಾಲ್ಕನೇ ಅಧಿವೇಶನಕ್ಕೆ ಹಿಂದುಸ್ತಾನದ ಶಿಷ್ಟಮಂಡಲದ ಧುರೀಣರಾಗಿ ಹೋಗಲಿರುವರೆಂದು ಪ್ರಕಟನೆ ಹೊರಟಿದೆ.

ಇದೇ ಸಪ್ಟಂಬರ ೨೦ ಕ್ಕೆ ಲೇಕಸಕ್ಸೆಸ್ಸಿನಲ್ಲಿ ಸೇರಲಿರುವ ಯುಕ್ತರಾಷ್ಟ್ರ ಸಂಘದ ನಾಲ್ಕನೆಯ ಸರ್ವಸಾಧಾರಣ ಸಭೆಗೆ ಹೋಗಲಿರುವ ಹಿಂದೀ ಶಿಷ್ಟಮಂಡಲದ ಧುರೀಣತ್ವವನ್ನು ಶ್ರೀ ಬೆನಗಲ್ಲ ನರಸಿಂಗರಾಯರು ವಹಿಸುವರು. ನವಾನಗರದ ಜಾಮಸಾಹೇಬರು ಬಿ ಶಿವರಾವ ರೆವ ಜೆ. ಡಿಸೌಜಾ ಮತ್ತು ಶ್ರೀಮತಿ ಸುಚೇತಾ ಕೃಪಲಾನಿ ಇವರು ಸದಸ್ಯರು. ಬದಲಿ ಸದಸ್ಯರೆಂದು ಶ್ರೀ ಡಿ. ಪಿ. ಕರಮರಕರ, ಸಚಿನ ಚೌಧರಿ ಪ್ರೊ. ಮುಜೀಬ ಆರ್. ಆರ್. ಸಕ್ಸೇನಾ ಶ್ರೀ ಶ್ರೀ ಬಿ. ಕೆ. ನೆಹರು ಇವರು ಇರುವರು.

ನಾಗುವಳಿಗೆ ಖಂಡಿತವಾಗಿಯೂ ಅನರ್ಹವಾಗಿರುವ ಹೊಲಗಳನ್ನು ಬಿಟ್ಟು ಉಳಿದ ಭೂಮಿಯನ್ನೆಲ್ಲ ಅದರ ಒಡೆಯರು ನಾಗು ಮಾಡಲೇಬೇಕೆಂಬ ಕಾಯದೆಯನ್ನು ಪಾಸು ಮಾಡಬೇಕೆಂದು ಪ್ರಾಂತೀಯ ಸರಕಾರಗಳಿಗೆ ಕೇಂದ್ರ ಆಹಾರ ಉತ್ಪಾದನ ಮಂಡಲವು ಸೂಚಿಸಿದೆ.

● ನಾಗಪುರದಲ್ಲಿ "ಗಾಂಧೀ ಅಂಗಡಿ"ಯ ಒಡೆಯರಾದ ಆರ್. ಕೆ. ಧೋತೆ ಮತ್ತು ಡಬ್ಲ್ಯು. ಕೆ. ಧೋತೆ ಹಾಗು ವಾಸುದೇವನೆಂ ಅವರ ಕೆಲಸದವರನ್ನು ಲೈಸನ್ಸ್ ಇಲ್ಲದೆ ಅರಿವೆ ಮಾರಿದ್ದಕ್ಕಾಗಿ ೧೦೦ ಮತ್ತು ೨೦ ರೂ. ದಂಡ ವಿಧಿಸಲಾಯಿತು.

– ಹಿತವಾದ

ಈಚೆಗೆ ಬ್ರಿಟನ್ನಿನಲ್ಲಿ ಅರಸರ "ಕಪ್ಪ"ನ ವಿಮಾನ ಸ್ಪರ್ಧೆ ನಡೆದಾಗ ಪುರುಷರೊಡನೆ ಸ್ಪರ್ಧಿಸಿದ ಏಕಮಾತ್ರ ಸ್ತ್ರೀ ವೈಮಾನಿಕಳಾದ ಮಿಸ್. ಡಾಯರ್ ಮೇರಿ ವಾರ್ಡ. ಇವಳು ಯುದ್ಧಕಾಲದಲ್ಲಿ ಅಧಿಕಾರಿಗಳ ಮುಂದೆ ಹಟತೊಟ್ಟು ಹಾರಿಗೆ ವಿಮಾನಗಳನ್ನು ನಡೆಸಿದ್ದಳು.

ಯೂರೋಪ್ಯ ಪರಿಷತ್ತಿನ ರೂಪರೇಷೆ

ಪಶ್ಚಿಮ ಯುರೋಪಿನ ಒಕ್ಕೂಟಕ್ಕೆ ಸೋಪಾನಸ್ವರೂಪ

ಕಾಮನ್‌ವೆಲ್ತಿನ ಮತ್ತು ಪರಾಧೀನ ರಾಷ್ಟ್ರಗಳಿಗೆ ಭೀತಿ

ಮೊನ್ನೆ ಅಗಸ್ಟ ೧೦ ನೆ ದಿನ ಸ್ಟ್ರಾಸ್‌ಬರ್ಗಿನಲ್ಲಿ "ಯುರೋಪಿಯನ್ ಕೌನ್ಸಿಲ್" ಎಂಬೊಂದು ಸಂಸ್ಥೆ ಜನ್ಮವೆತ್ತಿತು. ಇದು ಇತಿಹಾಸದಲ್ಲಿಯೇ ಅಭೂತಪೂರ್ವವಾದ ಸಂಸ್ಥೆ. ಪಶ್ಚಿಮ ಯುರೋಪಿನ ಹನ್ನೆರಡು ಪ್ರಜಾತಂತ್ರಾತ್ಮಕ ರಾಷ್ಟ್ರಗಳು ಸೇರಿ ಪರಸ್ಪರ ಹಿತಸಂಬಂಧಗಳನ್ನು ಚರ್ಚಿಸುವ ಸಲುವಾಗಿ ಒಂದು ಬಗೆಯ ಪ್ರತಿನಿಧಿ ಸಭೆಯನ್ನು ಏರ್ಪಡಿಸಿಕೊಂಡವು. ಈ ಸಂಸ್ಥೆ ಕಾಲಾಂತರದಲ್ಲಿ ಯುರೋಪಿಯನ್ ಒಕ್ಕೂಟ ಸರಕಾರದ ರೂಪ ತಳೆಯಬಹುದೆಂದು ಕೆಲವರು ನಂಬಿದ್ದಾರೆ.

ಯೂರೋಪ್ಯ ಪರಿಷತ್ತೆಂದು ಅನುವಾದಿಸಬಹುದಾದ ಈ ಸಂಸ್ಥೆಯಲ್ಲಿ ಎರಡು ಪ್ರತ್ಯೇಕ ಅಂಗಗಳಿವೆ. ಒಂದು, ಮಂತ್ರಿಗಳ ಸಮಿತಿ ಮತ್ತು ಇನ್ನೊಂದು ಸಲಹೆಯ ಮಂಡಲ. ಮಂತ್ರಿಗಳ ಸಮಿತಿಯಲ್ಲಿ ಹನ್ನೆರಡೂ ರಾಷ್ಟ್ರಗಳ ವಿದೇಶಮಂತ್ರಿಗಳಿದ್ದರೆ, ಸಲಹೆ ಮಂಡಲದಲ್ಲಿ ಅವೆಲ್ಲ ರಾಷ್ಟ್ರಗಳ ಅಧಿಕಾರೇತರ ಸದಸ್ಯರಿದ್ದಾರೆ. ಉದಾಹರಣೆಗಾಗಿ ಮಂಡಲದ ೧೦೧ ಸದಸ್ಯರಲ್ಲಿ ಬ್ರಿಟಿಶ ಪ್ರತಿನಿಧಿಗಳ ಸಂಖ್ಯೆ ೧೭; ಅವರಲ್ಲಿ ಹನ್ನೊಂದು ಜನ ಸರಕಾರಿ (ಕೂಲಿಕಾರ) ಪಕ್ಷದವರು ಮತ್ತು ಆರು ಜನ ವಿರೋಧಿ ಪಕ್ಷದವರು.

ಶಾಸನಾಧಿಕಾರವಿಲ್ಲ

ಸದ್ಯಕ್ಕೆ ಈ ಪರಿಷತ್ತಿಗೆ ಯಾವ ಶಾಸನಿಕ ಅಧಿಕಾರವೂ ಇಲ್ಲ. ಅದು ಬರಿ ಚರ್ಚಾಕೂಟದಂತಿದೆ. ಸ್ವಾಭಾವಿಕವಾಗಿ, ಪ್ರಾರಂಭಾವಸ್ಥೆಯಲ್ಲಿಯ ಯಾವ ರಾಷ್ಟ್ರವೂ ತನ್ನ ಹಿತಸಂಬಂಧಗಳ ಬಗ್ಗೆ ನಿರ್ಣಯ ಕೈಕೊಳ್ಳುವ ಅಧಿಕಾರವನ್ನು ಈ ಹೊರಗಿನ ಸಂಸ್ಥೆಗೆ ಒಪ್ಪಿಸಲು ಸಿದ್ಧವಾಗಿಲ್ಲ. ಪರಿಷತ್ತಿನ ಸಲಹೆ ಮಂಡಲದ ಸದಸ್ಯರಲ್ಲೊಬ್ಬರಾದ ಚರ್ಚಿಲ್ಲರು ರಾಷ್ಟ್ರಗಳು ತಮ್ಮ ಸಾರ್ವಭೌಮಾಧಿಕಾರವನ್ನು ಈ ಸಂಸ್ಥೆಗೆ ಬಿಟ್ಟುಕೊಡುವ ಹವ್ಯಾಸಕ್ಕೆ ಈಗಾಗಲೆ ಹೋಗಬಾರದೆಂದು ಎಚ್ಚರಿಕೆಯಿತ್ತಿದ್ದಾರೆ. ಉಳಿದ ಸದಸ್ಯರಾಷ್ಟ್ರಗಳ ಭಾವನೆಯೂ ಹೀಗೆಯೇ ಇದೆಯೆಂದು ಬಗೆಯಲು ಅಡ್ಡಿಯಿಲ್ಲ.

ಆದರೂ ಈ ಪರಿಷತ್ತಿನ ಮಂತ್ರಿ ಸಭೆ ಯುರೋಪಿನ ರಾಜಕಾರಣದಲ್ಲಿ ಪ್ರಬಲವಾದ ಶಕ್ತಿಯಾಗುವಲ್ಲಿ ಸಂದೇಹವಿಲ್ಲ. ಅದಕ್ಕೆ ಸಂರಕ್ಷಣ ವಿಷಯವೊಂದನ್ನು ಬಿಟ್ಟು ಉಳಿದ ಎಲ್ಲ ವಿಷಯಗಳಲ್ಲಿಯೂ ವ್ಯಾಪಕವಾದ ಕ್ಷೇತ್ರವಿದೆ. ಪರಿಷತ್ತಿನಲ್ಲಿ ಸೇರಿದ ಎಲ್ಲ ರಾಷ್ಟ್ರಗಳ ಪಾರ್ಲಮೆಂಟುಗಳ ಒಪ್ಪಿಗೆ ಪಡೆದ ಸಂಗತಿಗಳನ್ನು ಮಾತ್ರ ಚರ್ಚೆ ನಡೆಸಿ ನಿರ್ಣಯಕ್ಕೆ ಬರುವ ಹೊಣೆ ಅದರ ಮೇಲಿದೆ. ನಿರ್ಣಯಗಳು ಯಾವ ರಾಷ್ಟ್ರಕ್ಕೂ ಬಂಧನಕಾರಿಯಾಗಿಲ್ಲೆಂಬ ಮಾತು ನಿಜ. ಆದರೆ ಎಲ್ಲ ರಾಷ್ಟ್ರಗಳ ಅಧಿಕೃತ ಪ್ರತಿನಿಧಿಗಳು ಸೇರಿ ಮಾಡಿದ ನಿರ್ಣಯಗಳು ಸಮರ್ಥ ಬೆಲೆಯಿಲ್ಲದೆ ಹೋಗಲಾರವು. ಅದರಲ್ಲಿ ಅಡಕವಾದ ನೈತಿಕ ಬಂಧನದ ಪರಿಣಾಮವೂ ಆಗಿಯೆ ಹೊರಗಿನ ಗಂಡಾಂತರದ ಎದುರಿನಲ್ಲಿ ಅವಷ್ಟು ಹೊಂದಿಕೊಂಡು ಹೋಗಬೇಕೆಂಬ ಎಲ್ಲ ರಾಷ್ಟ್ರಗಳ ಆತುರವೂ ಸೇರಿ ಈ ಸಮಿತಿಯನ್ನು ಪ್ರಬಲ ಸಂಸ್ಥೆಯಾಗಿ ಮಾಡದಿರಲಾರವು. ಆದ್ದರಿಂದಲೇ ಇದು ಮೊದಲನೆ ಯೂರೋಪ್ಯ ಮಹಾಮಂತ್ರಿಮಂಡಲವೆಂದು ಕೆಲವರು ಹೇಳುತ್ತಾರೆ.

ಸಲಹೆ ಮಂಡಲದ ಸ್ವರೂಪ


ಸಲಹೆ ಮಂಡಲದ ಸ್ಥಿತಿ ಬೇರೆಯೇ. ಅದಕ್ಕೆ ಯಾವ ಶಾಸನಿಕ ಅಧಿಕಾರವೂ ಇಲ್ಲ. ಅದು ಬರಿ ಸಲಹೆ ಕೊಡುವ ಒಂದು ಸಭೆ. ಮಂತ್ರಿ ಸಮಿತಿಗೂ ಅದಕ್ಕೂ ಇರುವ ಸಂಬಂಧವೆಂದರೆ ಇಂಗ್ಲಂಡದಲ್ಲಿ ಬ್ರಿಟಿಶ ಲೋಕಸಭೆಯ ಪ್ರಾರಂಭಕಾಲದಲ್ಲಿದ್ದ ಸಲಹೆ ಮಂಡಲಗಳದರಂತೆಯೆ ಇದೆ. ಇದರ ಸದಸ್ಯರು ಆಯಾ ಸರಕಾರಗಳ ಪ್ರತಿನಿಧಿಗಳೂ ಅಲ್ಲ, ಅವುಗಳ ಪಾರ್ಲಿಮೆಂಟುಗಳ ಪ್ರತಿನಿಧಿಗಳೂ ಅಲ್ಲ. ಆಯಾ ರಾಷ್ಟ್ರದ ರಾಜಕೀಯ ಜೀವನದಲ್ಲಿ ಹೆಸರಾಗಿರುವವರಿಂದ ಆರಿಸಿ ಅವರನ್ನು ಕಳಿಸಲಾಗುವದು. ಅವರನ್ನು ಶಾಸನ ಸಭೆಗಳಿಗೆ ಆರಿಸಿದಂತೆ ಜನತೆಯಾಗಲಿ ಪಾರ್ಲಮೆಂಟುಗಳಾಗಲಿ ಆರಿಸಿ ಕಳಿಸುವುದೂ ಇಲ್ಲ.

ಹೀಗೆ ಪ್ರತಿನಿಧಿ ಸಭೆಗಿರುವ ಯಾವ ಗುಣವಿಶೇಷವೂ ಅದಕ್ಕಿಲ್ಲ. ಅಂತೆಯೆ ಅಂಥ ಯಾವ ಅಧಿಕಾರವನ್ನೂ ಅದಕ್ಕೆ ಕೊಡಲಿಲ್ಲ. ಸೇರಿದ ಸದಸ್ಯರಲ್ಲಿ ಮೂರರಲ್ಲಿ ಎರಡಂಶ ಜನರು ಯಾವುದಾದರೊಂದು ವಿಷಯದಲ್ಲಿ ನಿರ್ಣಯಕ್ಕೆ ಬಂದರೆ ಅದನ್ನು ಮಂತ್ರಿ ಸಮಿತಿಗೆ ಸ್ವೀಕರಿಸಬೇಕೆಂಬ ಶಿಫಾರಸಿನೊಡನೆ ಕಳಿಸಬಹುದು. ಆದರೆ ಮಂತ್ರಿ ಸಮಿತಿ ಅದನ್ನು ಸ್ವೀಕರಿಸಲೇಬೇಕೆಂಬ ವಿಧಿ ಇಲ್ಲ. ಮಾತ್ರವಲ್ಲ, ಸಲಹೆ ಮಂಡಲ ಯಾವ ವಿಚಾರಗಳನ್ನು ಚರ್ಚಿಸಬೇಕು ಎಂಬದನ್ನು ಕೂಡ ಮೊದಲಾಗಿಯೆ ಮಂತ್ರಿಸಮಿತಿ ನಿರ್ಣಯಿಸಿಕೊಡುವದರಿಂದ ಮಂಡಲದ ಅಧಿಕಾರವ್ಯಾಪ್ತಿ ಇನ್ನಷ್ಟು ಕಡಿಮೆಯಾಗಿದೆ.

ಆ ಹಿತ ಸಂಬಂಧಗಳ ಐಕ್ಯದ ಅರಿವು ಒಮ್ಮೆ ಆದಮೇಲೆ, ಆ ವಿಷಯಗಳನ್ನೆಲ್ಲ ನೋಡಿಕೊಳ್ಳಲು ಒಂದು ಸರ್ವಪ್ರತಿನಿಧಿ ಸಂಸ್ಥೆಯನ್ನು ತಕ್ಕ ಅಧಿಕಾರಗಳೊಡನೆ ಸ್ಥಾಪಿಸಲು ಸಾಧ್ಯವಾದೀತು, ಆಗ ಜಾಗತಿಕ ಸರಕಾರದ ಕನಸು ತುಸುವೂ ನನಸಾಗದಿದ್ದರೂ ಪ್ರಾದೇಶಿಕ ಒಕ್ಕೂಟಗಳ ನಿರ್ಮಿತಿಯಾಗುವದರಿಂದ ಆ ಮಹಾಸದನ ಇತಿಹಾಸದಲ್ಲಿ ಒಂದು ಹೆಜ್ಜೆ ಮುಂದೆ ಹೋದಂತಾಗದೆ ಇರಲಾರದು.

ಇತರ ಕ್ಷೇತ್ರಗಳ ಮೇಲೆ ಪರಿಣಾಮ

ಆದರೆ ಇಷ್ಟು ಮಹತ್ವದ ಭವಿತವ್ಯತೆಯುಳ್ಳದ್ದಾಗಿರುವ ಸಂಸ್ಥೆಯ ಜನನದ ಪರಿಣಾಮ ಜಗತ್ತಿನ ಇತರ ಪ್ರದೇಶಗಳ ಮೇಲೆ ಹೇಗೆ ಆಗಬಹುದು? ಇದರ ಸ್ಥಾಪನೆಗೆ ಮುಖ್ಯವಾಗಿ ಪೂರ್ವ ಯುರೋಪು ಪಶ್ಚಿಮಕ್ಕೆ ಹಾಕಿದ ಬೆದರಿಕೆಯು ಫಲವೆಂದು ನಾವು ನೆನೆಸಿಕೊಳ್ಳಬೇಕು. ಪೂರ್ವ ಯುರೋಪಿನಲ್ಲಿ "ಕಾಮಿನ್‌ಫಾರ್ಮ" ಸಂಸ್ಥೆಯ ರೂಪದಲ್ಲಿ ಮಾಸ್ಕೋ ಪ್ರೇರಿತವಾದ ಇಂಥ ಒಂದು ಪ್ರಬಲ ಒಕ್ಕೂಟವಿದ್ದೇ ಇದೆ. ಯೂರೋಪ್ಯ ಪರಿಷತ್ತಿಗೆ ಉತ್ತರವಾಗಿ ಕಮ್ಯುನಿಸ್ಟ ರಾಷ್ಟ್ರಗಳು ಬಹಿರಂಗವಾಗಿಯೆ ಒಕ್ಕೂಟವನ್ನು ಸ್ಥಾಪಿಸಿಕೊಂಡರೂ ಸ್ಥಾಪಿಸಿಕೊಳ್ಳಬಹುದು. ಆ ಒಕ್ಕೂಟ ಸರ್ವಾಧಿಕಾರ ಪದ್ಧತಿಯನ್ನವಲಂಬಿಸುವ ಮೂಲಕ ಇದಕ್ಕಿಂತಲೂ ಪರಿಣಾಮಕರವಾಗಬಹುದು.



ಸ್ಟ್ರಾಸ್‌ಬರ್ಗ ವಿಶ್ವವಿದ್ಯಾಲಯದ ಮುಂದೆ ಯೂರೋಪ್ಯ ಪರಿಷತ್ತಿನ ಸದಸ್ಯ ರಾಷ್ಟ್ರಗಳ ಧ್ವಜ ಪ್ರದರ್ಶನ

ಒಕ್ಕೂಟದ ಹರಿಕಾರ

ಹೀಗಿದ್ದರೂ ಹೀಗಿರುವ ಕಾರಣದಿಂದಲೇ ಅದು ಪಶ್ಚಿಮ ಯುರೋಪಿನ ಜನಾಭಿಪ್ರಾಯವನ್ನು ರೂಪಿಸುವದರಲ್ಲಿ ತುಂಬ ಪ್ರಭಾವಶಾಲಿಯಾಗದಿರದು. ಅದರಲ್ಲಿ ಆಗುವ ಚರ್ಚೆಗಳ ಪರಿಣಾಮವಾಗಿ ಆಯಾ ಸರಕಾರಗಳು ಸ್ವಯಂಪ್ರೇರಣೆಯಿಂದ ಪರಿಹರಿಸಲು ಸಮರ್ಥವಾಗಬಹುದಾದ ಅನೇಕ ಸಮಸ್ಯೆಗಳಿಗೆ ಯುಕ್ತಿಗಳು ಹೊಳೆಯಬಹುದು. ಮೇಲಾಗಿ, ಅದರ ಕಾರ್ಯನಿಯಾಮಕ ಪಟ್ಟಿಯ ಮೇಲೆ ಮಂತ್ರಿಸಮಿತಿಯ ಹಿಡಿತವಿರುವದರಿಂದ ಒಡಕಿಗೆ ಕಾರಣವಾಗಬಹುದಾದ ವಿಷಯಗಳ ಚರ್ಚೆಗೆ ಅಸ್ಪದ ದೊರೆಯುವದು ಕಠಿನವಾಗುವದು.

ವಿವಿಧ ಇತಿಹಾಸ ಸಂಸ್ಕೃತಿಗಳ ನೆಳಲಿಗೆ ಸಿಲುಕಿ ಬೆಳೆದು ಬಂದಿರುವ ರಾಷ್ಟ್ರಗಳು ಒಮ್ಮಿಂದೊಮ್ಮೆಲೇ ತಮ್ಮ ಸಾರ್ವಭೌಮಾಧಿಕಾರದ ಅಂಶಗಳನ್ನು ಒಂದು ಕೇಂದ್ರ ಸಂಸ್ಥೆಗೆ ಬಿಟ್ಟುಕೊಟ್ಟು ಒಕ್ಕೂಟವಾಗಲು ಒಪ್ಪುವದು ಅಸಾಧ್ಯಪ್ರಾಯವಾದ ಮಾತು. ಯುದ್ಧದಿಂದ ಅಥವಾ ಇತರ ಉಪಾಯಗಳಿಂದ ಹೊರತು ಈ ಬಗೆಯ ಸ್ವಯಂಸ್ಫೂರ್ತ ಸಂಯುಕ್ತರಾಜ್ಯ ಸ್ಥಾಪನೆ ಶಕ್ಯವಿಲ್ಲ. ಅದೂ ಪಶ್ಚಿಮ ಯುರೋಪಿನ ರಾಷ್ಟ್ರಗಳಂತೆ ಪಾರ್ಲಮೆಂಟರಿ ಪ್ರಜಾತಂತ್ರದಲ್ಲಿ ಪಳಗಿದ ರಾಷ್ಟ್ರಗಳಿಗೆ ಇದು ಇನ್ನಷ್ಟು ಕಠಿನ. ಪಾರ್ಲಮೆಂಟರಿ ಪ್ರಜಾತಂತ್ರಕ್ಕೆ ಜನಾಭಿಪ್ರಾಯ ಮತ್ತು ಜನರ ಕರ್ತವ್ಯಜಾಗೃತಿಯೆ ಆಧಾರಸ್ತಂಭ. ಈ ಅಭಿಪ್ರಾಯವನ್ನೂ ಜಾಗೃತಿಯನ್ನೂ ಉಂಟುಮಾಡಿ, ಎಲ್ಲರಿಗೂ ಸಾಮಾನ್ಯವಾದ ಹಿತಸಂಬಂಧಗಳನ್ನು ಸರಿಯಾದ ಸ್ವರೂಪದಲ್ಲಿ ಕಾಣುವಂತೆ ಮಾಡಲು ಈ ಹೊಸ ಪರಿಷತ್ತು ದಾರಿ ಮಾಡಿಕೊಡಬಲ್ಲದು.

ಏಶಿಯದ ಜನರಿಗೂ ಬ್ರಿಟಿಶ ರಾಷ್ಟ್ರಕೂಟದಲ್ಲಿರುವ ರಾಷ್ಟ್ರಗಳಿಗೂ ಇದು ಇನ್ನೊಂದು ಬಗೆಯಲ್ಲಿ ಸಂಶಯಾಸ್ಪದವಾಗಿದೆ. ಮುಖ್ಯವಾಗಿ, ಆಗ್ನೇಯ ಏಶಿಯ ಮತ್ತು ಆಫ್ರಿಕಾ ಖಂಡಗಳಲ್ಲಿ ಇನ್ನೂ ಪರಾಧೀನವಾಗಿ ನಡೆಯುವ ರಾಷ್ಟ್ರಗಳಿಗೆ ಈ ಯೂರೋಪ್ಯ ಪರಿಷತ್ತಿನಲ್ಲಿ ಸೇರಿದ ರಾಷ್ಟ್ರಗಳಲ್ಲಿ ಪ್ರಬಲವಾದವುಗಳೆಲ್ಲವೂ ಇನ್ನೂ ಸಾಮ್ರಾಜ್ಯವಾದಿಗಳು, ಉಪನಿವೇಶಗಳನ್ನು ಶೋಷಿಸಿ ಸ್ವಲ್ಪವಲ್ಲ ಸ್ವಲ್ಪ ಲಾಭಮಾಡಿಕೊಳ್ಳುವವು. ಈ ವರೆಗೆ ಒಂದು ಸಮಾನವಾದ ಸಹಕಾರದ ಸಾಧನವಿದ್ದಿಲ್ಲವಾದ ಕಾರಣ ಈ ವಿಷಯದಲ್ಲಿ ಅವು ಭಿನ್ನಭಿನ್ನವಾದ ಮತ್ತು ಕೆಲವೇಳೆ ಪರಸ್ಪರ ವಿರುದ್ಧವಾದ ನೀತಿಯನ್ನು ಅನುಸರಿಸುತ್ತ ಬಂದಿವೆ. ಮುಂದೆ ಇಂಥೊಂದು ಸಾಧನ ದೊರೆತದ್ದರಿಂದ ಅವುಗಳ ಸ್ವಾರ್ಥಸಾಧನೆಯಲ್ಲೊಂದು ಸಹಕಾರಭಾವ ಮೂಡಿ ಪರಾಧೀನ ರಾಷ್ಟ್ರಗಳ ವಿಮೋಚನೆ ಇನ್ನಷ್ಟು ಕಠಿನವಾಗಬಹುದು. ಇನ್ನು ಬ್ರಿಟಿಶ ರಾಷ್ಟ್ರಕೂಟದ ರಾಷ್ಟ್ರಗಳಾದರೂ ಬ್ರಿಟನ್ನು ಯೂರೋಪ್ಯ ಕೂಟದಲ್ಲಿ ಸೇರಿದ ಕಾರಣ ತಮಗೆ ಇಂದಿನ ವರೆಗೆ ಮಾಡಿದಂತೆ ಹಿತ ಮಾಡಿಕೊಡಲು ಸಮರ್ಥವಾಗಲಾರದೆಂದು ಸಂದೇಹಗೊಳ್ಳಲು ಎಡೆಯಿದೆ. ರಾಷ್ಟ್ರಕೂಟದ ಹಿತ ಸಂಬಂಧಗಳೂ ಯುರೋಪಿನ ಒಕ್ಕೂಟದ ಹಿತಗಳೂ ಘರ್ಷಣೆಗೆ ಬರುವಲ್ಲಿ ಬ್ರಿಟನ್ನು ಏನು ಮಾಡಬೇಕು? ಅಥವಾ ಮಧ್ಯಪೂರ್ವ ದೂರ ಪೂರ್ವಗಳಲ್ಲಿ ಯುದ್ಧ ಪ್ರಾರಂಭವಾದರೆ, ಪಶ್ಚಿಮ ಯುರೋಪಿನ ರಕ್ಷಣೆಗೇ ಹೆಚ್ಚು ಮಹತ್ವ ದೊರೆತು ಬ್ರಿಟಿಶ್ ರಾಷ್ಟ್ರಕೂಟದ ರಕ್ಷಣೆ ಗೌಣವಾಗಿ ಎಣಿಸಲ್ಪಡಲಾರದೆ? ಹೀಗಾದರೆ ಅವು ಬ್ರಿಟನ್ನಿನ ಸಂಬಂಧ ಹರಿದುಕೊಂಡು ತಮ್ಮ ನೆರೆಹೊರೆಯವರೊಡನೆ ಬೇರೆಯೆ ಒಕ್ಕೂಟ ರಚಿಸಿಕೊಳ್ಳುವ ಪ್ರಸಂಗ ಬಾರದೆ? ಬ್ರಿಟನ್ನನ್ನು ರಾಷ್ಟ್ರಕೂಟದ ರಾಷ್ಟ್ರಗಳು ನಂಬಿ ಕುಳಿತುಕೊಳ್ಳಲು ಸಾಧ್ಯವಾದೀತೆ? ಇವೆಲ್ಲ ಪ್ರಶ್ನೆಗಳಿಗೆ ಯೂರೋಪ್ಯ ಪರಿಷತ್ತಿನ ನಿರ್ಣಯಗಳು ಬಂಧಕವಲ್ಲವೆಂದೂ ಬ್ರಿಟಿಶ ರಾಷ್ಟ್ರಕೂಟದ ಹಿತಗಳಿಗೆ ವ್ಯತಿರಿಕ್ತವಾಗಿ ಯುರೋಪಿನಲ್ಲಿ ಬ್ರಿಟನ್ನು ನಡೆದುಕೊಳ್ಳಲಾರದೆಂದೂ ಉತ್ತರ ಕೊಡಲಾಗುತ್ತದೆ. ಆದರೆ ಇವನ್ನು ಕೆಲವರು ನಂಬಬಹುದು, ಕೆಲವರು ಬಿಡಬಹುದು.

ಭಾರತಕ್ಕೆ ಡಾಲರ ಸಾಲ

ರೈಲ್ವೆಗಳ ಸುಧಾರಣೆಗಾಗಿ

ಭಾರತ ಸರಕಾರಕ್ಕೆ ಮೊನ್ನೆ ತಾ. ೧೮ ಕ್ಕೆ ಜಾಗತಿಕ ಬ್ಯಾಂಕು ೩೪೦ ಲಕ್ಷ ಡಾಲರು (ಸುಮಾರು ೧೬ ಕೋಟಿ ರೂಪಾಯಿ) ಸಾಲ ಕೊಡಲು ನಿರ್ಧರಿಸಿತು. ಸರಕಾರಿ ರೈಲುಗಳನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಇದನ್ನು ಕೊಡಲಾಗಿದೆ. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಭಾರತದ ಪರವಾಗಿ ಕಾಗದಪತ್ರಕ್ಕೆ ಸಹಿ ಹಾಕಿದರು.

ನೂರಕ್ಕೆ ಮೂರರಂತೆ ಬಡ್ಡಿ ಮತ್ತು ಒಂದರಂತೆ ದಲ್ಲಾಳಿ ಕೊಡಬೇಕಾದ ಈ ಸಾಲವನ್ನು ೧೯೫೦ ಅಗಸ್ಟದಿಂದ ಕಂತುಗಳಲ್ಲಿ ೧೫ ವರ್ಷದೊಳಗೆ ತೀರಿಸಬೇಕಾಗುವದು. ಹಣವನ್ನು ಎಂಜಿನ್ನು, ಬಾಯ್ಲರ ಮೊದಲಾದ ರೈಲ್ವೆ ಸಲಕರಣೆಗಳ ಆಯಾತಕ್ಕಾಗಿ ಉಪಯೋಗಿಸಲಾಗುವದು. ಬೇಗನೇ ಇನ್ನಷ್ಟು ಸಾಲವನ್ನು ಭಾರತಕ್ಕೆ ಕೊಟ್ಟು ೬೫೦ ಲಕ್ಷ ಡಾಲರುಗಳ ಪ್ರಕ್ಕೆ ಮುಟ್ಟಿಸುವ ಅಭಿಪ್ರಾಯವನ್ನು ಬ್ಯಾಂಕಿನ ಅಧ್ಯಕ್ಷ ಬ್ಲ್ಯಾಕರು ವ್ಯಕ್ತಗೊಳಿಸಿದರು.

ಏಶಿಯನ್ ರಾಷ್ಟ್ರಗಳಲ್ಲಿ ಈ ಬಗೆಯಾಗಿ ಸಾಲ ತೆಗೆದ ಪ್ರಥಮ ರಾಷ್ಟ್ರವೇ ಭಾರತವೆಂದೂ ಅದರಲ್ಲಿಯೂ ಒಬ್ಬ ಮಹಿಳೆ ಇದರ ಪತ್ರಗಳಿಗೆ ಸಹಿ ಮಾಡಿದ್ದು ಅಭೂತಪೂರ್ವವೆಂದೂ ಅಧ್ಯಕ್ಷರು ಹೇಳಿದರು. ರಾಷ್ಟ್ರದ ಆರ್ಥಿಕ ಜೀವನದ ತಳಹದಿಯಾದ ಸಾರಿಗೆ ಸೌಕರ್ಯವನ್ನು ಪುನರ್ಘಟಿಸಲು ಇದರ ವಿನಿಯೋಗವಾಗುವದು. ಭಾರತದ ಪ್ರಕೃತಿ ಸಂಪತ್ತಿನ ಸದ್ವಿನಿಯೋಗದ ಮಹಾಕಾರ್ಯ ಭಾರತ ಸರಕಾರದ ಮುಂದಿದೆ.

ಭಾರತವು ಯುದ್ಧಕಾಲದಲ್ಲಿ ತನ್ನ ೩೫೦೦ ಲಕ್ಷ ಪೌಂಡುಗಳ ವಿದೇಶೀ ಸಾಲವನ್ನೆಲ್ಲ ತೀರಿಸಿ ಬ್ರಿಟನ್ನಿಗೆ ಸಾಲ ಕೊಟ್ಟ ಸಾವುಕಾರ ರಾಷ್ಟ್ರವಾಗಿರುವುದೇ ಸಾಲ ಕೊಡುವಲ್ಲಿ ಮುಖ್ಯವಾಗಿ ಬ್ಯಾಂಕು ಗಮನಿಸಿದ ವಿದ್ಯಮಾನವಂತೆ. ಮೇಲಾಗಿ ಭಾರತ ಸರಕಾರ ಎಂದೂ ತನ್ನ ಒಳ ಅಥವಾ ಹೊರ ಸಾಲಗಳನ್ನು ಮುಟ್ಟಿಸುವಲ್ಲಿ ಅವಧಿ ತಪ್ಪಿಸಿಲ್ಲ.

ಕೆಡುತ್ತಿರುವ ಭಾರತದ ರೈಲ್ವೆಗಳನ್ನು ಸ್ಥಿತಿಗೆ ತರಲು ಹೊಸ ಎಂಜಿನ್ನು ಬಾಯ್ಲರು ಮೊದಲಾದವುಗಳನ್ನು ತರಿಸಿಕೊಳ್ಳುವದೊಂದೇ ಉಪಾಯ. ಈಗ ಅದು ಹೊರಗಿನಿಂದ ತರಿಸಲು ಆರ್ಡರು ಕೊಟ್ಟಿರುವ ೭೫೩ ಎಂಜಿನ್ನು ಮತ್ತು ೩೫೦ ಟ್ಯಾಂಕರ್ ಕಾರುಗಳಿಗೆ ೮೪೦ ಲಕ್ಷ ಡಾಲರುಗಳಷ್ಟು ಬೆಲೆಯಾಗುವದು. ಇವುಗಳಲ್ಲಿ ೫೦೦ ಲಕ್ಷ ಡಾಲರುಗಳನ್ನು ಭಾರತ ತಾನೇ ಸ್ವಂತ ಹಣದಿಂದ ಕೊಡುವದು. ಉಳಿದ ೩೪೦ ಲಕ್ಷಕ್ಕಷ್ಟೇ ಈ ಸಾಲ ತೆಗೆಯಲಾಗಿದೆ. ಇದರಲ್ಲಿ ೧ ಕೋಟಿ ಡಾಲರು ಸಂಯುಕ್ತ ಸಂಸ್ಥಾನ ಅಮೇರಿಕೆಯಲ್ಲಿಯೂ ೧೭೦ ಲಕ್ಷ ಡಾಲರು ಕ್ಯಾನಡಾದಲ್ಲಿಯೂ ವೆಚ್ಚವಾಗುವದು.

ದಾಮೋದರ ಕಣಿವೆಯ ವಿದ್ಯುದ್ಯೋಜನೆ ಮತ್ತು ಕೃಷಿಯ ಯಂತ್ರಗಳನ್ನು ಕೊಳ್ಳುವ ಯೋಜನೆಗಳನ್ನು ಬ್ಯಾಂಕು ಪರಿಶೀಲಿಸುತ್ತಿದೆ. ಅವು ಸಮರ್ಪಕವಾಗಿ ಕಂಡುಬಂದರೆ ಬ್ಯಾಂಕು ಇನ್ನಷ್ಟು ಸಾಲ ಕೊಡಬಹುದು.

● ನೇತಾಜಿ ಸುಭಾಸಚಂದ್ರ ಬೋಸರು ಜೀವಂತ ಇದ್ದಾರೆ ಜಪಾನ ಚೀನ ರಶಿಯಗಳಲ್ಲಿ ಇರಬಹುದು ಎಂದು ಪೂರ್ವ ಪಂಜಾಬ ದೇಶಸೇವಕ ಪಕ್ಷ ಸಂಸ್ಥಾಪಕ ಅಧ್ಯಕ್ಷ ಜ. ಮೋಹನಸಿಂಗರು ಒಂದು ಭಾಷಣದಲ್ಲಿ ಹೇಳಿದರು.

● ಕಲಕತ್ತಾ ನಗರದ ಮಧ್ಯದಲ್ಲಿ ೨೧ ಕ್ಕೆ ಪೋಲೀಸರು ಒಂದೇ ಕಾಲಕ್ಕೆ ಅನೇಕ ಸ್ಥಳಗಳನ್ನು ಝಡತಿ ಮಾಡಿ ಆರು ಕಮ್ಯುನಿಸ್ಟ ಕಾರ್ಯಕರ್ತರನ್ನು ಸೆರೆ ಹಿಡಿದರು. ಇವರಲ್ಲಿ ಅನೇಕರ ಮೇಲೆ ವಾರಂಟಿದ್ದು ಅವರು ತಲೆ ತಪ್ಪಿಸಿಕೊಂಡು ಇರುತ್ತಿದ್ದರಂತೆ.

ರೂಪರಂಗ

ಹುಬ್ಬಳ್ಳಿ "ಸುದರ್ಶನ"ದಲ್ಲಿ "ಸಾಜನ"

ಹುಬ್ಬಳ್ಳಿಯ "ಸುದರ್ಶನ"ದಲ್ಲಿ ಇದೀಗ ಜನಸಂದಣಿಯನ್ನು ಆಕರ್ಷಿಸುತ್ತಿರುವ "ಸಾಜನ"ದ ನಿರ್ಮಾಪಕರು "ಫಿಲ್ಮಿಸ್ತಾನ"ದ ಕಿಶೋರಸಾಹು. ಈ ಚಿತ್ರದ ಬಗ್ಗೆ ಒಂದೇ ಮಾತಿನಲ್ಲಿ ಅಭಿಪ್ರಾಯ ಹೇಳಬೇಕೆಂದರೆ "ಒಮ್ಮೆ ನೋಡಿ, ತುಂಬ ಮನೋರಂಜನೆ ಪಡೆದು, ಮನೆಗೆ ಹೋಗಿ ನಿಶ್ಚಿಂತೆಯಿಂದ ಮಲಗಿ ನೋಡಿದ್ದೆಲ್ಲವನ್ನೂ ಮರೆತುಬಿಡಬಹುದಾದ ಚಿತ್ರ" ಎಂದು ಹೇಳಿಬಿಡಬಹುದು.

ಹನ್ನೊಂದು ವರ್ಷ ಕಾಲ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಯಲ್ಲಿದ್ದು ಮರಳಿದ ಶ್ರೀಮಂತ ಕುಲದ ಪ್ರಕಾಶನು ತನ್ನ ಊರಾದ ದಿಲ್ಲಿಗೆ ರೇಲುಗಾಡಿಯಲ್ಲಿ ಹೊರಟಾಗ ಅವನ ಹೆಸರಿನವನೇ ಆದ ಒಬ್ಬ ಯುವಕ ಅವನ ಸಹಪ್ರವಾಸಿಯಾಗಿದ್ದು ಇಸ್ಪೇಟಾಟದ ನಡುವೆ ಅವನ ಹಿಂದುಮುಂದನ್ನು ಕೇಳಿಕೊಂಡಿರುತ್ತಾನೆ. ರೇಲ್ವೆ ಅನಾಹುತವೊಂದಕ್ಕೆ ಆ ಗಾಡಿ ಗುರಿಯಾಗಿ ಪ್ರಕಾಶ ತೀವ್ರಗಾಯಗೊಂಡು ಸತ್ತಹಾಗೆಯೆ ಆಗುತ್ತಾನೆ. ದೈವಯೋಗದಿಂದ ಯಾವ ಅಪಾಯಕ್ಕೂ ಒಳಗಾಗದ ಅವನ ನೂತನ ಗೆಳೆಯನು, ಪ್ರಕಾಶನು ಸತ್ತನೆಂದೇ ಬಗೆದು ಅವನ ಸಾಮಾನುಗಳನ್ನೆಲ್ಲ ತಾನೆ ಹೊರಿಸಿಕೊಂಡು ಅವನೇ ತಾನೆಂದು ನಟಿಸುತ್ತ ದಿಲ್ಲಿಗೆ ಬಂದಾಗ, ನಿಜ ಪ್ರಕಾಶನ ಪರಿವಾರದವರೆಲ್ಲ ಎಳವೆಯಲ್ಲೆ ಪ್ರಕಾಶನು ವಿಲಾಯತಿಗೆ ಹೋಗಿದ್ದುದರಿಂದ ಸುಳ್ಳು ಪ್ರಕಾಶನ ಸೋಗನ್ನು ಗುರುತಿಸಲಾರದೆ ಅವನೇ ಇವನೆಂದು ಭ್ರಮಿಸಿ ಮನೆಗೆ ಕರೆದುಕೊಂಡು ಹೋಗುವರು. ಧೂರ್ತನಾದ ಖೊಟ್ಟಿ ಪ್ರಕಾಶ ಚಾಣಾಕ್ಷತನದಿಂದ ನಟನೆಯನ್ನು ಮುಂದೆ ಸಾಗಿಸಿ ನಿಜ ಪ್ರಕಾಶನ ಸಮಸ್ತ ಸಂಪತ್ತಿಯ ಮೇಲೆ ಮಾತ್ರವಲ್ಲ, ಅವನ ಸುಂದರಿಯಾದ ಹೆಂಡತಿಯ ಮೇಲೂ ಪ್ರಭುತ್ವ ಸ್ಥಾಪಿಸುತ್ತಾನೆ. ಆದರೆ ಕಮಲೆಗೆ (ಹೆಂಡತಿ) ಮಾತ್ರ ಯಾಕೋ ಸಂಶಯ ಬರುತ್ತದೆ. ಮನೆಯ ನಾಯಿಗೂ ಹಾಗೆಯೆ. ಅವಳು ಆದಷ್ಟು ದೂರ ದೂರ ಉಳಿದು ಸತೀತ್ವವನ್ನು ಕಾಪಾಡಿಕೊಳ್ಳುವಳು. ಬಲಾತ್ಕಾರ ಹೆಚ್ಚಾಗಿ ಮನೆಬಿಟ್ಟು ಓಡಿಹೋಗಿ ಬನಜಾರರೆಂಬ ಲಂಬಾಣಿ ಜನರ ಒಂದು ಗುಂಪಿನಲ್ಲಿ ಆಶ್ರಯ ಪಡೆದು ವೇಷ ಮರೆಸಿ ಅವರೊಡನೆ ಊರಿಂದೂರಿಗೆ ಸಂಚರಿಸುತ್ತಿರುತ್ತಾಳೆ.

ಅತ್ತ ನಿಜ ಪ್ರಕಾಶನೋ ನಿಜವಾಗಿ ಸತ್ತಿರದೆ ಆಸ್ಪತ್ರೆಯಲ್ಲಿ ನೆಟ್ಟಗಾಗುತ್ತಾನೆ. ಆದರೆ ತಲೆಗಾದ ಆಘಾತದಿಂದ ಅವನಿಗೆ ಹಿಂದಿನದೆಲ್ಲವೂ ಮರೆತು ಹೋಗಿರುತ್ತದೆ. ತನ್ನ ಹೆಸರು ಕೂಡ ಅವನಿಗೆ ನೆನಪಾಗುವದಿಲ್ಲ. ಆಸ್ಪತ್ರೆಯಿಂದ ಹೊರಬಿದ್ದವನು ಯಾರೋ ಒಬ್ಬ ಡೊಂಬನೊಡನೆ ಸಂಚರಿಸುತ್ತ ತನ್ನ ಹೆಂಡತಿ ಕಮಲೆ (ಈಗ ರಧಿಯಾ) ಯ ಗುಂಪು ಬೀಡುಬಿಟ್ಟ ಊರಿಗೆ ಬರುತ್ತಾನೆ. ಬೀದಿಯಲ್ಲಿ ಕುಣಿಸರಕು ಮಾರುತಿದ್ದ ಅವಳ ಪರಿಚಯ ಅವನಿಗಾಗಿ, ತನ್ನ ಹೆಂಡತಿಯೆಂಬ ಅರಿವಾಗದಿದ್ದರೂ ಅವಳಲ್ಲಿ ಪ್ರೇಮ ನಡುತ್ತದೆ. ಅವಳಿಗೂ ಚಿಕ್ಕಂದಿನಲ್ಲೆ ಅಗಲಿದ್ದ ಅವನ ಗುರುತು ಹತ್ತದಿದ್ದರೂ ಅವನಲ್ಲಿ ಮನಸ್ಸು ನಡುತ್ತದೆ. ಅವಳ ಗುಂಪಿನವರೊಡನೆ ಸೇರಿ ಅಲೆಯುತ್ತ ಅಲೆಯುತ್ತ ಇರುವಾಗ ಇವರಿಬ್ಬರ ಪ್ರೇಮ ಬೆಳೆದರೂ ವಿವಾಹಿತಳಾದ ತಾನು ಪರಪುರುಷನಲ್ಲಿ ಮನವಿಡುವದೂ ತಪ್ಪೆಂದರಿತಿದ್ದ ಅವಳು ತುಂಬ ಅಂತಸ್ತುಮುಲಕ್ಕೊಳಗಾಗುವಳು. ಅವರು ಮಧ್ಯ ಒಮ್ಮೆ ಅಗಲಿ ಮತ್ತೆ ದಿಲ್ಲಿಯಲ್ಲಿ ಸಂಧಿಸುತ್ತಾರೆ. ಕಮಲೆ ತನ್ನ ಗಂಡನ ಮನೆಗೆ ಹೋಗಿ ಬನಜಾರ ವೇಷದಲ್ಲಿಯೇ ಕಣಿಹೇಳಿ ಅತ್ತೆಯ ಮನಸಿನಲ್ಲಿ ಪ್ರಕಾಶನ ನಿಜತ್ವದ ಬಗ್ಗೆ ಸಂಶಯಬಿತ್ತಿದರೂ ಸುಳ್ಳು ಪ್ರಕಾಶನಿಂದ ಗುರುತಿಸಲ್ಪಟ್ಟು ಬಂಧಿಸಲ್ಪಡುವಳು. ನಿಜ ಪ್ರಕಾಶನು ಅವಳು ತನ್ನ ಕೋಣೆಯಲ್ಲಿ ಹಾಡುತ್ತಿರುವಾಗ ಅವಳ ದನಿ ಕೇಳಿ ಅಲ್ಲಿಗೆ ಹೋಗಿ ತನ್ನ ಮನೆಯೆಂದು ಗುರುತಿಸಿ ಸಹಸಾ ಎಲ್ಲವನ್ನೂ ನೆನೆದುಕೊಂಡು ಅವಳನ್ನು ಮೋಸಗಾರ ಪ್ರಕಾಶನಿಂದ ರಕ್ಷಿಸುತ್ತಾನೆ.

ಇದೀಗ ಕಥೆ. ಕತೆ ಹೆಣೆದ ಕಿಶೋರ ಸಾಹು ನಾವೀನ್ಯವನ್ನೂ ತೋರಿಸಲು ಸಮರ್ಥರಾಗಿಲ್ಲ. ಸನ್ನಿವೇಶಗಳೂ ಗಳಿಗೆಗಳಿಗೆ ಬೇರೆ ಚಿತ್ರಗಳನ್ನು ನೆನಪಿಗೆ ತರುತ್ತವೆ. ಅದರಲ್ಲಿರುವ ಅನೇಕ ಸಂದಿಗ್ಧಾಂಶಗಳಲ್ಲಿ ಕಮಲೆ ತನ್ನ ಸಂಶಯವನ್ನು ಮೊದಲೇ ಅತ್ತೆಗೆ ಅರುಹದ್ದು ವಿಚಿತ್ರವೇ ಸರಿ. ಬನಜಾರರು ತುಂಬ ಮಾನವಂತ ಜನರಾದರೂ ಪ್ರಕಾಶನಿಗೂ ತಮ್ಮವರಲ್ಲಿ ಒಬ್ಬಳಾಗಿದ್ದ ರಧಿಯಳಿಗೂ ಅಷ್ಟು ಸಲುಗೆ ಬೆಳೆಯಗೊಟ್ಟದ್ದೂ ಅಸಂಭವವಾಗಿದೆ. ಸಂವಾದಗಳಲ್ಲಿ ವಿಶೇಷ ರಸವತ್ತಾದುದೇನೂ ಇಲ್ಲ. ಹಾಡುಗಳಲ್ಲಿ ಹೊಸರಾಗವೇನೂ ಕೇಳುವುದಿಲ್ಲ. ಬನಜಾರರ ನಾಟ್ಯ ಸಾಧಾರಣವಾಗಿದೆ. ಚಿತ್ರಗ್ರಹಣ ಉತ್ತಮವಾಗಿದ್ದು ರಾತ್ರಿಯಲ್ಲಿ ನಾಯಕ ನಾಯಿಕೆಯರ ಸಂವಾದದ ಚಿತ್ರ ತುಂಬ ಕೌಶಲದಿಂದ ತೆಗೆಯಲ್ಪಟ್ಟಿದೆ.

ನಾಯಕ ಪಾತ್ರ ವಹಿಸಿದ ಅಶೋಕ ಕುಮಾರ ಎಂದಿನಂತೆ ಸರಳನಿರಾಡಂಬರ ನಟನಾ ಕೌಶಲವನ್ನು ತೋರಿದ್ದಾನೆ. ನಾಯಿಕೆಯಾದ ರೆಹಾನಳ ಮುಖ ಮತ್ತು ಯೌವನವೇ ಅವಳ ಸಂಪತ್ತು. ಪ್ರತಿನಾಯಕ (ರಮೇಶ ಗುಪ್ತ) ಚನ್ನಾಗಿ ಅಭಿನಯಿಸಿದ್ದಾನೆ.

ಒಟ್ಟಿನ ಮೇಲೆ ಅಷ್ಟು ಸವಾಲು ಹಾಕದ ಸಾಮಾನ್ಯ ಜನರಿಗೆ ಇದು ತುಂಬ ಮನೋರಂಜಕವಾಗಿದೆ. ಬುದ್ಧಿಗೆ ಆಹಾರವನ್ನು ಮತ್ತು ಕಲಾಕೌಶಲವನ್ನು ಬೇಡುವ ದುರಾರಾಧ್ಯರಿಗೆ ಅಸಂತೃಪ್ತಿಯನ್ನುಂಟುಮಾಡುವ ಚಿತ್ರಗಳೇ ಹೆಚ್ಚಾಗಿರುವ ಈ ಕಾಲದಲ್ಲಿ ಆ ದೃಷ್ಟಿಯಿಂದ ಇದನ್ನು ನಿಂದಿಸುವುದು ವ್ಯರ್ಥ.

—ಪಾ.



ವರುಣ ಕಂಪನಿಯ "ರೂಮಲ" ಚಿತ್ರದಲ್ಲಿ ಹಳ್ಳಿಯ ಅವರಣದ ಒಂದು ದೃಶ್ಯ. ನರಗೀಸ, ಜೈರಾಜ, ಬದರಿಪ್ರಸಾದರು ಮುಖ್ಯ ಅಭಿನೇತರು.

ಮೂಲೆ ಮೂಲೆಗಳಿಂದ

ಸಂಯುಕ್ತ ರಾಷ್ಟ್ರಸಂಘದ ಅರ್ಥಿಕ ಮತ್ತು ಸಾಮಾಜಿಕ ಸಮಿತಿಯವರು ಹಿಂದುಳಿದ **ರಾಷ್ಟ್ರಗಳ ಅಭಿವೃದ್ಧಿಗಾಗಿ** ಒಂದು ಯೋಜನೆಗೆ ಮನ್ನಣೆಕೊಟ್ಟಿದ್ದಾರೆ. ಅದಕ್ಕೆ ಸಂಘದ ಮಹಾಸಭೆಯ ಒಪ್ಪಿಗೆ ದೊರೆತರೆ ಅಂತಾರಾಷ್ಟ್ರೀಯ ಕೂಲಿಕಾರ ಸಂಸ್ಥೆ ಮತ್ತು ಅಂತಾರಾಷ್ಟ್ರೀಯ ಆಹಾರ ಮತ್ತು ಕೃಷಿ ಸಂಸ್ಥೆ ಮೊದಲಾದ ಸಂಸ್ಥೆಗಳ ಮೂಲಕ ಸುಮಾರು ೩ ಕೋಟಿ ಡಾಲರುಗಳಷ್ಟು ಹಣವನ್ನು (೭ ಕೋಟಿ ರೂಪಾಯಿ) ವೆಚ್ಚ ಮಾಡಬಹುದು. ಈ ಯೋಜನೆಯ ವಿಷಯದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಿತ್ತು.

ಪಶ್ಚಿಮ ಜರ್ಮನಿಯಲ್ಲಿ ಈಚೆಗೆ ಆದ ಮಹಾ ಚುನಾವಣೆಗಳಲ್ಲಿ ಕ್ರಿಶ್ಚನ್ ಡೆಮಾಕ್ರೆಟ್ಸ ಎಂಬ ಸಂಪ್ರದಾಯವಾದಿ ಪಕ್ಷಕ್ಕೆ (೪೦೨ ಸ್ಥಾನಗಳಲ್ಲಿ) ೧೩೯ ಮತ್ತು ಸಾಮ್ಯವಾದಿ ಡೆಮಾಕ್ರೆಟ್ಸ ಪಕ್ಷಕ್ಕೆ ೧೩೧ ಸ್ಥಾನಗಳು ದೊರಕಿವೆ. ಕಮ್ಯುನಿಸ್ಟರು ಹಿಂದೆ ಬಿದ್ದಿದ್ದಾರಲ್ಲದೆ ಹಳೇ ನಾಜೀ ಪಕ್ಷದ ಹೊಸ ಅವತಾರಗಳಾದ ಚಿಕ್ಕ ಪುಟ್ಟ ಪಕ್ಷಗಳಿಗೂ ಕೆಲ ಸ್ಥಾನಗಳು ದೊರೆತಿವೆ. ಒಟ್ಟಿಗೆ ಇದು ಸಾಮ್ಯವಾದಿಗಳ ಅಪಜಯವೆಂದೂ ನಾಜೀವಾದಿಗಳ ಪುನರುತ್ಥಾನದ ದ್ಯೋತಕವೆಂದೂ ತರ್ಕಿಸಲಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವಕ್ಕಾಗಿ **ನೇಪಾಳವು** ಮಾಡಿದ ಅರ್ಜಿಯ ತೀರ್ಮಾನವನ್ನು ಯುಕ್ರೇನಿನ ಅಭಿಪ್ರಾಯದ ಮೇರೆಗೆ ಭದ್ರತಾಮಂಡಲದ ಸದಸ್ಯತ್ವ ಸಮಿತಿ ಮುಂದೆ ಹಾಕಿದೆ.

ಚೀನಿ ಕಮ್ಯುನಿಸ್ಟರು **ಈಶಾನ್ಯ ಇಂಡೋಚೀನದ ಟೊಂಗ್‌ಕಿಂಗ್ ಪ್ರದೇಶವನ್ನು** ಮುಟ್ಟುವ ಮೊದಲೆ ಆ ಆಯಕಟ್ಟಿನ ಪ್ರದೇಶದಿಂದ ಇಂಡೋಚೀನ ಸ್ವಾತಂತ್ರ್ಯವಾದಿಗಳ ಸೈನ್ಯವನ್ನೋಡಿಸಿಬಿಡುವ ಉದ್ದೇಶದಿಂದ ಫ್ರೆಂಚ ಸೈನಿಕರು ದೊಡ್ಡ ಅಭಿಯೋಗ ಪ್ರಾರಂಭಿಸಿದ್ದಾರೆ.

ಭಾರತದ ಆಹಾರ ಸಮಸ್ಯೆಯ ಮೊದಲಾದವುಗಳನ್ನು ಬಿಡಿಸುವಲ್ಲಿ **ಹಿಂದೀ ವೈಜ್ಞಾನಿಕರು** ಈಗಾಗಲೆ ಸಹಾಯಮಾಡುತ್ತಿರುವದನ್ನು ಹಿಂದೀ ವಿಜ್ಞಾನ ಸಂಸ್ಥೆಯ ಡಾ। ಭಾಟನಗರರು ಲೇಕ್ ಸಕ್ಸೆಸ್ಸಿನಲ್ಲಿ (ನ್ಯೂಯಾರ್ಕ) ವಿವರಿಸಿದರು.

ಆಲ್ಬೇನಿಯದ ಗಡಿಯೊಳಗೆ ಗ್ರೀಕ್ ರಾಜಸತ್ತಾವಾದಿ ಸೈನಿಕರು ದಾಳಿಮಾಡಿ ಅಕ್ರಮ ಪ್ರವೇಶಮಾಡುತ್ತಿದ್ದಾರೆಂದು ಆಲ್ಬೇನಿಯವು ಸಂ. ರಾ. ಸಂಘಕ್ಕೆ ದೂರುಕೊಟ್ಟಿದೆ.

ರಶಿಯಾ-ಯುಗೋಸ್ಲಾವ ಸಂಬಂಧ ದಿನದಿನಕ್ಕೆ ಕೆಡುತ್ತಿದೆ. ಯುಗೋಸ್ಲಾವಿಯದ ಮಾರ್ಶಲ್ ಟಿಟೋನ ಆಳಿಕೆಯನ್ನು ಒಳಸಂಚಿನಿಂದ ಮುಂದಿನ ಚಳಿಗಾಲದೊಳಗೆ ಕೊನೆಗೊಳಿಸಲು ರಶಿಯ ಹೊಂಚು ಹಾಕಿದೆಯೆಂದು ಹೇಳಲಾಗಿದೆ. ಯುಗೊಸ್ಲಾವಿಯದಲ್ಲಿದ್ದ ರಶಿಯನ್ ರಾಯಭಾರಿಯನ್ನು ಮಾಸ್ಕೋಕ್ಕೆ ಹಿಂಕರೆಸಿಕೊಳ್ಳಲಾಗಿದೆಯಲ್ಲದೆ ರಶಿಯನ್ ನಾಗರಿಕರನ್ನು ಯುಗೋಸ್ಲಾವಿಯದಲ್ಲಿ ಹಿಂಸಿಸಲಾಗುತ್ತಿದೆಯೆಂದು ಆರೋಪ ಪತ್ರವನ್ನೂ ಕಳಿಸಿ, ಇದನ್ನು ನಿಲ್ಲಿಸದಿದ್ದರೆ ಪ್ರತೀಕಾರೋಪಾಯ ಕೈಕೊಳ್ಳುವ ಬೆದರಿಕೆ ಹಾಕಲಾಗಿದೆ.

ಇಂಡೊನೇಶಿಯದ ಪ್ರಜಾರಾಜ್ಯದ ೪ ನೆ ವರ್ಧಂತಿಯ ನಿಮಿತ್ತ ತಾ. ೧೭ ಕ್ಕೆ ಬಟೇವಿಯದಲ್ಲಿ ಪ್ರಚಂಡ ಜನಸಮೂಹ ನೆರೆದು ಜಯಜಯಕಾರ ಮಾಡಿತು.

ಜರ್ಮನ್ ಸೇನೆಯಲ್ಲಿ ಹಿಂದೆ ಕೆಲಸ ಮಾಡುತ್ತ ಈ ಮೂರು ವರ್ಷಗಳಿಂದ ರಶಿಯ [illegible] **ಬಿ ಜಾತಿಯ** [illegible] ದ್ದಾರೆ.

ಆಹಾರ ತಜ್ಞ ಬಾಯ್ಡ ಆರ್ [illegible] ಆಹಾರದ ಬೆಳೆಗಳನ್ನು [illegible] ವಾಗಿ ಮತ್ತು ಆಹಾರ ಸಾಲ ಕೊಡುವದಕ್ಕಾಗಿ **ಜಾಗತಿಕ ಆಹಾರ ಬ್ಯಾಂಕ್** ಒಂದನ್ನು ಸ್ಥಾಪಿಸಬೇಕೆಂದು ಸೂಚಿಸಿದ್ದಾರೆ.

ಸಂಯುಕ್ತ ರಾಷ್ಟ್ರದ **ಭದ್ರತಾ ಮಂಡಲದ** ಸದಸ್ಯತ್ವವನ್ನು ಸಂಪಾದಿಸಲು ಈ ಸಾರಿ **ಭಾರತಕ್ಕೆ** ವಿಶೇಷ ಅವಕಾಶವೊಂದೊದಗಿದೆ. ಬರುವ ಸೆಪ್ಟೆಂಬರದಲ್ಲಿ ಅರ್ಜೆಂಟಿನಾ, ಕೆನಡಾ ಮತ್ತು ಯುಕ್ರೇನ ರಾಷ್ಟ್ರಗಳು ಸದಸ್ಯತ್ವದಿಂದ ನಿವೃತ್ತಿ ಹೊಂದುವವು. ಇವುಗಳಲ್ಲಿ ಒಂದು ಸ್ಥಾನವನ್ನು ಭಾರತಕ್ಕೆ ಕೊಡಬೇಕೆಂದು ಬ್ರಿಟಿಶ್ ಫ್ರಾನ್ಸ್ ಮತ್ತು ಅಮೇರಿಕೆಗಳು ಒಪ್ಪಿವೆಯಂತೆ. ದ. ಅಮೇರಿಕೆಯ ಮತ್ತು ಅರಬ ರಾಷ್ಟ್ರಗಳು ಬೆಂಬಲ ಕೊಡಲಿವೆ. ಕಳೆದ ಬಾರಿ ಯುಕ್ರೇನಿಗೂ ಭಾರತಕ್ಕೂ ಸ್ಪರ್ಧೆ ಬಿದ್ದು ಕೊನೆಗೆ ಭಾರತ ಹಿಂತೆಗೆದುಕೊಂಡಿತ್ತು.

ಪಾಕಿಸ್ತಾನ ಮುಸ್ಲಿಂ ಲೀಗ್ ಅಧ್ಯಕ್ಷ ಚೌಧರಿ ಖಲೀಕುಜ್ಜಮಾನರು "ಇಸ್ಲಾಮಿಸ್ತಾನ" (ಎಲ್ಲ ಮುಸ್ಲಿಂ ರಾಷ್ಟ್ರಗಳ ಒಕ್ಕೂಟ) ಸ್ಥಾಪನೆ ಮಾಡಬೇಕೆಂದು ಮಾಡಿದ ಸೂಚನೆಯನ್ನು ಕುರಿತು ಇಜಿಪ್ತದ ಮುಂದಾಳುಗಳು ಅದರ ವಿಚಾರವನ್ನು ಮುಂದೆ ಹಾಕಬೇಕೆಂದೂ ಇರಾಣ ಮುಂದಾಳುಗಳು ಅದಕ್ಕೆ ತಮ್ಮ ಒಪ್ಪಿಗೆಯಿಲ್ಲೆಂದೂ ಉತ್ತರ ಕೊಟ್ಟಿದ್ದಾರೆ. ಇರಾಕದ ರಾಷ್ಟ್ರೀಯ ಪಕ್ಷದ ಮುಂದಾಳುಗಳೂ ಲೆಬನಾನದ ಮುಖ್ಯ ಮಂತ್ರಿಗಳೂ "ಇಸ್ಲಾಮಿಸ್ತಾನ"ದ ಕಲ್ಪನೆಗೆ ವಿರೋಧಿಗಳಾಗಿದ್ದು ಭಾರತವನ್ನೂ ಸೇರಿಸಿಕೊಂಡು "ಪೌರಸ್ತ್ಯ ಗುಂಪನ್ನು" ರಚಿಸಬೇಕೆನ್ನುತ್ತಾರೆ.

ತುರ್ಕಿಯಲ್ಲಿ ಭೂಕಂಪವಾಗಿ ಅನಟೋಲಿಯದ ಒಂದು ಹಳ್ಳಿಯಲ್ಲಿ ೩೦ ಜನ ಸತ್ತರು ಮತ್ತು ೧೨೦೦ ಜನ ನಿರಾಶ್ರಿತರಾದರು.

ರಾಷ್ಟ್ರೀಯ ಚೀನಿ ಸರಕಾರದ ಸಧ್ಯದ ರಾಜಧಾನಿಯಾದ **ಕ್ಯಾಂಟನ್ನಿನಿಂದ** ವಿದೇಶೀಯರೂ ಧನಿಕ ಚೀನೀಯರೂ ಬಿಟ್ಟು ಹೋಗತೊಡಗಿದ್ದಾರೆ. ಅಮೇರಿಕೆಯ ರಾಯಭಾರ ಗೃಹವನ್ನು ಮುಚ್ಚಿದ್ದಾರೆ. ಕಮ್ಯುನಿಸ್ಟ ಸೇನೆಗಳು ನಗರದ ೧೫೦ ಮೈಲಿನೊಳಗೆ ಬಂದಿರುವದೇ ಇದಕ್ಕೆ ಕಾರಣ.

ಭಾರತಕ್ಕೆ ಶಕ್ತಿ ಮೀರಿ ಸಹಾಯ ಮಾಡುವದೊಂದೇ ಏಶಿಯವನ್ನು ಕಮ್ಯುನಿಜ್ಮಿನಿಂದ ಉಳಿಸುವ ಉಪಾಯವೆಂದು ಅಮೇರಿಕೆಯ "ಲೈಫ್" ವಾರಪತ್ರಿಕೆ ಒಂದು ಅಗ್ರಲೇಖ ಬರೆದಿದೆ. ಪಂ. ನೆಹರು ಅವರು ಆಕ್ಟೋಬರದಲ್ಲಿ ಅಮೇರಿಕೆಗೆ ಬರಲಿರುವ ಸಂದರ್ಭವನ್ನು ಇದಕ್ಕೆ ಉಪಯೋಗಿಸಿಕೊಳ್ಳಬೇಕೆಂದೂ ನೆಹರು ಅವರು ಇಂದು ಏಶಿಯದ ಅತ್ಯಂತ ಶ್ರೇಷ್ಠ ಮುತ್ಸದ್ದಿಯಾಗಿರುವರೆಂದೂ ಅದರ ಅಭಿಪ್ರಾಯ.

ಕರ್ನಾಟಕದಲ್ಲಿ

ಧಾರವಾಡ

ಶಿರಕೋಳದಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಜೊತೆ ಕೂಡಿಕೊಂಡು ಸ್ವಾತಂತ್ರ್ಯೋತ್ಸವವನ್ನು ಜರುಗಿಸಿದರು. ರಾಷ್ಟ್ರಧ್ವಜವಂದನೆ, ಮೆರವಣಿಗೆಯಾಗಿ ಎಲ್ಲರಿಗೂ ಉಪಹಾರ ಕೊಡಲಾಯಿತು.

ತಲವಡಿಯಲ್ಲಿ ಕಳೆದ ೮ ನೇ ತಾರೀಕು ಭಜನಾ ಸಪ್ತಾಹ ಪ್ರಾರಂಭವಾಗಿ ೧೫ ಕ್ಕೆ ಮುಗಿಯಿತು. ಅನಂತರ ಎಲ್ಲ ದೇವರ ಪಲ್ಲಕ್ಕಿಯನ್ನು ಹೊರಡಿಸಿ ಭಜನಾಮೇಳ ಲೇಜಿಮೇಳದವರೊಡನೆ ಉತ್ಸವದೊಂದಿಗೆ ಅಸ್ಪ್ಯಶ್ಯ ಶಾಲೆಯ ಬೈಲಿನಲ್ಲಿ ಧ್ವಜವಂದನೆ ಮಾಡಲಾಯಿತು. ಭೀಮನಗೌಡರು ಭಜನೆ ಮೇಳ್ದವರಿಗೆ ಅನ್ನಸಂತರ್ಪಣೆ ಮಾಡಿದರು.

ಅರಿಶಿನಗೋಡಿಯಲ್ಲಿ ಗ್ರಾಮ ಸೇವಾ ಸಪ್ತಾಹ ವಿಜೃಂಭಣೆಯಿಂದ ಜರುಗಿತು. ತಿಮ್ಮಾಪುರದಲ್ಲಿ ಜಾಹೀರ ಸಭೆಯನ್ನು ಕರೆಯಲಾಗಿತ್ತು. ಶಿವಲಿಂಗ ಕವಿ ಹುಲಕುಂದ ಇವರು ಕಾಂಗ್ರೆಸ್ಸು ಈ ವರೆಗೆ ಸಾಧಿಸಿದ್ದನ್ನು ವಿವರಿಸಿದರು.

ಹೂವಿನಹಡಗಲಿ ರೈತರು ನಗರ ಸಂಕೀರ್ತನೆಯೊಂದಿಗೆ ಸ್ವಾತಂತ್ರ್ಯೋತ್ಸವವನ್ನು ಪ್ರಾರಂಭಿಸಿದರು. ತಿಮ್ಮಪ್ಪಯ್ಯನವರು ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಶಾಲೆಯಲ್ಲಿ ಸಭೆ ಸೇರಿ ಪ್ರಮುಖರ ಭಾಷಣಗಳಾದವು. ವಾಸಕೂರ ಕಿರ್ದಿ ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಗದುಗಿನಲ್ಲಿ ಬೆಟಗೇರಿ ಪೇಟೆಯಲ್ಲಿ ಶ್ರೀ ಗುರುಶಿದ್ದಪ್ಪ ಹುಣಸೀಮರದ ಇವರ ಮನೆಯಲ್ಲಿ ಕಳವಾಗಿದ್ದು ಕಳ್ಳರು ಟ್ರೇಜರಿ ಕೀಲಿಕೈ ತೆಗೆದುಕೊಂಡು ಅದನ್ನು ತೆರೆದು ಅದರಲ್ಲಿದ್ದ ಸುಮಾರು ೬೦ ತೊಲಿ ಬಂಗಾರದ ಸಾಮಾನು ಗಳನ್ನು ಮತ್ತು ೧೦೦೦ ರೂಪಾಯಿ ರೋಖ ಹಣವನ್ನು ತೆಗೆದುಕೊಂಡು ಹೋಗಿರುವರು. ಕಳ್ಳರ ಪತ್ತೆ ಇನ್ನೂ ಹತ್ತಿಲ್ಲ.

ಕಲ್ಲಪ್ಪ ಬಸಪ್ಪ ಬೆಂಗೇರಿ ಇವರು ಹುಬ್ಬಳ್ಳಿಯ ಜಗದ್ಗುರು ಗಂಗಾಧರ ಹೈಸ್ಕೂಲಿನಲ್ಲಿ ಈ ವರುಷದ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಲಿಂಗಾಯತ ವಿದ್ಯಾರ್ಥಿಗಳಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾದವರಿಗೆ ಪ್ರತಿ ವರುಷ ೨೫೦ ರೂ. ಗಳಂತೆ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಧನಸಹಾಯ ಮಾಡುವ ಬಗ್ಗೆ ಸಾರಿದ್ದಾರೆ.

ಅಮರಗೋಳದಲ್ಲಿ ಸರಕಾರೀ ಉದ್ಯೋಗಿ ಕರಣ ಯೋಜನೆಯಂತೆ ಚಳ್ಳ ಘಟ್ಟ ಉದ್ಯೋಗಗಳನ್ನು ಬೆಳೆಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವದಕ್ಕಾಗಿ ಮುಂಬಯಿ ಸರಕಾರದ ಪ್ರೀಡಿಂಗ ಎಕ್ಸ್ಪೆರ್ಟ ಅಧಿಕಾರಿಗಳಾದ ಶ್ರೀ ಕಾಮತ ಇವರು ೨೩ ಕ್ಕೆ ಶ್ರೀ ಶಿರೂರ, ಸಾಲಿಮಠ ಇವರೊಂದಿಗೆ ಹೋಗಿ ಎಲ್ಲವನ್ನು ನೋಡಿಕೊಂಡು ಬಂದು ಅಮರಗೋಳವು ಎಲ್ಲ ದೃಷ್ಟಿಯಿಂದ ಉದ್ಯೋಗಾಭಿವೃದ್ಧಿಗೆ ಅನುಕೂಲವಾಗಿರುವುದರಿಂದ ಹೆಚ್ಚಿನ ವಿವರಗಳನ್ನು ತಿಳಿಸಬೇಕೆಂದು ಹೇಳಿದರು.

ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿಯ ತೋಟಗಾರಿಕೆಯನ್ನು ಈ ವರ್ಷ ಸಂಶೋಧನೆಗಾಗಿ ಪರಿಶೀಲಿಸಲು ಮುಂಬಯಿ ಸರಕಾರ ನಿರ್ಧರಿಸಿದೆಯೆಂದು ತಿಳಿಯುತ್ತದೆ.

ಬಳ್ಳಾರಿ

ಹರಪನಹಳ್ಳಿ ತಾಲೂಕು ಅರಸೀಕೆರೆ ಗ್ರಾಮದ ಸೇವಾ ಸಂಘದವರು ನಗರ ಸಂಕೀರ್ತನೆಯೊಂದಿಗೆ ಸ್ವಾತಂತ್ರ್ಯೋತ್ಸವ ಪ್ರಾರಂಭಿಸಿ ಧ್ವಜವಂದನೆ ಮಾಡಿದರು. ಸಾಯಂಕಾಲ ಶಾಲಾ ಭವನದಲ್ಲಿ ಶ್ರೀ ಕೆ. ಜೀರ್ಣವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಪಿ. ಎಂ. ಸಿದ್ಧಲಿಂಗಯ್ಯ, ಶಶಿಕಲ್ಲ ಚನ್ನಬಸಪ್ಪ, ಸಿ ಶಿವಲಿಂಗಪ್ಪ ಮೊದಲಾದವರು ಭಾಷಣ ಮಾಡಿದರು.

ಹೊಸಪ್ಪೇಟೆ

[illegible] ಅಧ್ಯಕ್ಷತೆ ವಹಿಸಿದ್ದರು.

ವಿಜಾಪುರ

ಮುದ್ದೇಬಿಹಾಳ ತಾಲೂಕಿನ ಬಸ್ವಾಳದಲ್ಲಿ ಸ್ವಾತಂತ್ರ್ಯೋತ್ಸವಕ್ಕಾಗಿ ನಗರ ಸಂಕೀರ್ತನ ಧ್ವಜವಂದನಗಳಾಗಿ ಸಾಯಂಕಾಲ ಶ್ರೀ ರಾಮಪ್ಪಾ ಅಸ್ಕೀ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೃಷ್ಣಾಚಾರ್ಯ, ನೀಲಕಂಠರಾವ, ಭೀಮಪ್ಪಾ, ಪುರೋಹಿತ ಮೊದಲಾದವರ ಭಾಷಣಗಳಾದುವು. ವಂದೇ ಮಾತರಂ ಗೀತೆಯೊಡನೆ ಸಭಾ ಕಾರ್ಯ ಕೊನೆಗೊಂಡಿತು.

ಹೊಸವಾಡದಲ್ಲಿ ಎಲ್ಲರೂ ಕೂಡಿಕೊಂಡು ನಗರ ಸಂಕೀರ್ತನ ಮಾಡಿ ಜನವಾಡಕರ ಸರಪಂಚರ ಹಸ್ತದಿಂದ ಧ್ವಜವಂದನ ನಡೆಯಿತು. ಅನಂತರ ಅಲ್ಲಿಯೆ ಸಭೆ ಜರುಗಿ ಕೃಷ್ಣರಾವ ಗಾದಿಗೇನವರ, ದಿವಾಣಜಿ ಕುಲಕರ್ಣಿ ಇವರು ಸ್ವಾತಂತ್ರ್ಯದ ಪ್ರಗತಿಯನ್ನು ವಿವರಿಸಿದರು. ಹೆಡಮಾಸ್ತರ ಶಿರೂರ ಇವರು ಸಂಸ್ಕೃತ ಪದ್ಯಗಳನ್ನು ಅಂದರು. ಮಧ್ಯಾನ್ಹ ನೂಲುವ ಸ್ಪರ್ಧೆ ಆಟಪಾಟಗಳು ನಡೆದು ಪಾರಿತೋಷಕಗಳು ಕೊಡಲ್ಪಟ್ಟವು.

ಜಮಖಂಡಿ ತಾಲೂಕು ಹಿಪ್ಪರಗಿಯಲ್ಲಿ ಸ್ವಾತಂತ್ರ್ಯೋತ್ಸವ, ನಗರ ಸಂಕೀರ್ತನ, ವಿವಿಧ ರಾಷ್ಟ್ರಗೀತೆ, ಧ್ವಜಾರೋಹಣ, ಬಾಲಕರ ಶಾರೀರಿಕ ಚಟುವಟಿಕೆಗಳು, ರಾತ್ರಿ ನಾಟಕ ಮೊದಲಾದವುಗಳು ನಡೆದುವು.

ವೀರಾಪುರದಲ್ಲಿ ಶಾಲೆಯ ಚೇರಮನ್ರಾದ ಚನ್ನಪ್ಪಗೌಡರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಜರುಗಿತು. ಎಂ. ಆರ್. ಮಠ ಇವರು ಉತ್ಸವದ ಬಗ್ಗೆ ಭಾಷಣ ಮಾಡಿ ಗೃಹರಕ್ಷಕ ದಳದವರು ತಮ್ಮ ಕವಾಯತನ್ನು ಎಲ್ಲರೆದುರಿಗೆ ತೋರಿಸಿದರು.

ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೆಹತಾ ಇವರು ೨೧ ಮುಂಜಾನೆ ಬಾಗಲಕೋಟೆಗೆ ಬಂದು ಶಿರೂರ ಕಮತಗಿಗಳಿಗೆ ಹೋಗಿ ನೇಕಾರರ ಸ್ಥಿತಿಗತಿ ಪರಿಸ್ಥಿತಿಯನ್ನು ಅವರ ಬಾಯಿಂದಲೇ ಕೇಳಿ ತಿಳಿದುಕೊಂಡರು. ಬಾಗಲಕೋಟೆ ಬಸವೇಶ್ವರ ಕಾಲೇಜಿನಲ್ಲಿ ಇತಿಹಾಸ ಮತ್ತು ಅರ್ಥಶಾಸ್ತ್ರ ಮಂಡಲದ ಪ್ರಾರಂಭೋತ್ಸವ ಜರುಗಿಸಿದರು. ಜಿಲ್ಲಾ ಉದ್ಯೋಗಿಕ ಬ್ಯಾಂಕಿನ ಉದ್ಘಾಟನ ಮಾಡಿ ಅನಂತರ ಅವರು ಮುಂಜಾನೆ ವಿಜಾಪುರಕ್ಕೆ ಭೆಟ್ಟಿ ಕೊಟ್ಟರು.

ಅರ್ಥಸಚಿವರಾದ ಶ್ರೀ. ವೈಕುಂಠಲಾಲರು ೨೨ ಕ್ಕೆ ಮುಂಜಾನೆ ಕಲಾದಗಿಯಲ್ಲಿ ಸರ್ವೋದಯ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುತ್ತ ಎಲ್ಲರ ಆರ್ಥಿಕ ನೈತಿಕ ಮತ್ತು ಸಾಮಾಜಿಕ ಪ್ರಗತಿಯಾಗುವಂತೆಯೂ ಅವರ ಉತ್ಪಾದನ ಶಕ್ತಿಯು ಹೆಚ್ಚಿ ದಾರಿದ್ರ್ಯವು ನಷ್ಟವಾಗುವಂತೆಯೂ ಕಾರ್ಯಕರ್ತರು ಪ್ರಯತ್ನಿಸಿ ಸಮಾಜದಲ್ಲಿಯ ಶೋಷಣೆ ಇಲ್ಲದಂತೆ ಮಾಡುವದು ಅವಶ್ಯವೆಂದು ಹೇಳಿದರು.

ಲೋಣಿಯಲ್ಲಿ ಪೋಲೀಸ ಪಾಟೀಲರ ಹಸ್ತದಿಂದ ಧ್ವಜವಂದನವಾಗಿ ಸಾಯಂಕಾಲ ಶಿವಯೋಗಿ ಕಲ್ಯಾಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗೊಟ್ಯಾಳ ಮಾಸ್ತರರು ರಾಷ್ಟ್ರಸಂಪತ್ತು ಕೃಷಿಯಿಂದ ಎಂಬ ವಿಷಯದ ಮೇಲೆ ಮಾತಾಡಿದರು.

ಯರಝರಿಯಲ್ಲಿ ಸ್ವಾತಂತ್ರ್ಯೋತ್ಸವ ಒಳ್ಳೆ ವಿಜೃಂಭಣೆಯಿಂದ ನಗರ ಸಂಕೀರ್ತನೆ ಧ್ವಜವಂದನೆಯಿಂದ ಪ್ರಾರಂಭವಾಗಿ ಸಾಯಂಕಾಲ ಶ್ರೀ ದೊಡ್ಡಪ್ಪನವರು ದೇಶಮುಖ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಎಸ್. ಬಿ. ಪಟ್ಟಣದ ಇವರು ಪ್ರೌಢ ಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾರ್ಮಿಕವಾಗಿ ಮಾತಾಡಿದರು. ರಾತ್ರಿ ಶಿವಯ್ಯ ಮಠ ಇವರು ಬರೆದ ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದರು.

ಮಂಗಳೂರಿನಲ್ಲಿ ಪೋಲೀಸ ಪಾಟೀಲರಾದ ಬಿ. ಆರ್. ಪಾಟೀಲ ಇವರ ಹಸ್ತದಿಂದ ಧ್ವಜವಂದನವಾಯಿತು. ಅಣ್ಣಪ್ಪ ಎಂಬ ವಿದ್ಯಾರ್ಥಿಯು ಧ್ವಜದ ಮಹತ್ವವನ್ನು ತಿಳಿಸಿದರು. ವಿವಿಧ ವಿನೋದಗಳು ನಡೆದವು.

ಕೊಲ್ಹಾರದಲ್ಲಿ ಧ್ವಜವಂದನವಾಗಿ ಸರಕಾರದ ಹಸ್ತದಿಂದ ಗಿಡಗಳನ್ನು ಹಚ್ಚಲಾಯಿತು. ಅವರ ಅಧ್ಯಕ್ಷತೆಯಲ್ಲಿಯೆ ಸಭೆ ಸೇರಿ ಮುಲ್ಲಪ್ಪ ಕಣಿ, ಬಿಂದುಪ್ಪ ಮಾಸ್ತರ, ನಂದವಾಡಗಿ, ಗ. ಭ. ಕಣಿ ಮೊದಲಾದವರು ಭಾಷಣ ಮಾಡಿದರು. ಪುಲ್ಲೇಶಪ್ಪ ಯಡಹಳ್ಳಿ ಇವರು ಹಿಂದಿಯಲ್ಲಿ ಭಾಷಣಮಾಡಿದರು.

ಬೆಳಗಾವಿ

ಬೆಳಗಾವಿ ಲಿಂಗರಾಜ ಕಾಲೇಜಿನ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಶ್ರೀ ಬಿ. ಎಂ. ರಾಮಲಿಂಗಯ್ಯನವರು ಹುಬ್ಬಳ್ಳಿಯ ವಾಣಿಜ್ಯ ಕಾಲೇಜಿನ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟದ್ದರಿಂದ ಕಾಲೇಜಿನ ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ಅವರನ್ನು ಬೀಳ್ಕೊಟ್ಟರು.

ಈಗ ನಿರ್ದಿಷ್ಟಗೊಳಿಸಿದ ಅವಧಿಯಲ್ಲಿ ಅಹಾರ ಸ್ವಾವಲಂಬನವನ್ನು ಸಾಧಿಸಬೇಕಾದರೆ ಮಧ್ಯಮ ವರ್ಗದ ಜನರು ಕೂಲಿಯ ಸ್ಥಾನಮಾನಗಳನ್ನರಿತುಕೊಂಡು ಒಕ್ಕಲತನದಲ್ಲಿ ತೊಡಗಬೇಕು ಎಂದು ಮಾನ್ಯ ಪಾಟೀಲ ಮಲ್ಲನಗೌಡರು ಬೆಳಗಾವಿಯಲ್ಲಿ ಅಹಾರೋತ್ಪಾದನ ದ್ವಿತೀಯ ಮಾಲೆಯ ತೃತೀಯ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತ ಹೇಳಿದರು.

ಹಳ್ಳಿಗಳ ಉದ್ಯೋಗ ಆದಾಯ ಹಾಗು ವೆಚ್ಚಗಳ ಪರಿಶೀಲನೆ ಕಾರ್ಯವನ್ನು ಕೈಗೊಳ್ಳಬೇಕೆಂಬ ಸರಕಾರದ ಧೋರಣೆಕ್ಕನುಸಾರವಾಗಿ ಬೆಳಗಾವಿ ಜಿಲ್ಹೆಯಲ್ಲಿ ಈ ಕಾರ್ಯವು ಪ್ರಾರಂಭವಾಗಿದೆ. ಪರಿಶೋಧಕರು ಈ ಕಾರ್ಯಕ್ಕಾಗಿ ಹಳ್ಳಿಗಳಿಗೆ ಬಂದಾಗ ಎಲ್ಲ ಬಗೆಯ ವಿವರಗಳನ್ನು ತಿಳಿಸಬೇಕೆಂದು ಮುಂಬಾಗಿ ಬೈಲಹೊಂಗಲ ಸರಕಾರೀ ಸಂಶೋಧನ ಕೇಂದ್ರದ ಒಕ್ಕಲತನ ಅಧಿಕಾರಿಗಳಾದ ಶ್ರೀ ಸಿ ಬಿ ಹಿರೇಮಠರು ಪ್ರಕಟಿಸಿದ್ದಾರೆ.

ಬೆಳಗಾವಿ ವಿಲಿಂಗ್ಡನ್ ಕಾಲೇಜಿನ ಕರ್ನಾಟಕ ಸಂಘದಪ್ರಾರಂಭೋತ್ಸವ ಶ್ರೀ ನಾಯಕ ವೆಂಕಟರಾಯರಿಂದ ೧೯ ರಂದು ಜರುಗಿತು. ಪ್ರೊಫೆಸರ ಜತ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸಂಘಗಳ ಪಾತ್ರದ ವಿಷಯವಾಗಿ ನಾಯಕರು ಮಾತಾಡಿದರು.

ಮುಗಳಿಯಲ್ಲಿ ಸ್ವಾತಂತ್ರ್ಯೋತ್ಸವದ ನಿಮಿತ್ತ ಶಾಲೆಯ ಮಕ್ಕಳೂ ಶಿಕ್ಷಕರೂ ಗೃಹರಕ್ಷಕರೂ ನಾಗರಿಕರೂ ಕೂಡಿಕೊಂಡು ನಗರ ಸಂಕೀರ್ತನ ಮಾಡಿ ಧ್ವಜವಂದನೆಯಾದ ನಂತರ ಸಾಯಂಕಾಲ ೫ ಕ್ಕೆ ಜಾಹೀರ ಸಭೆಯಲ್ಲಿ ಭಾಷಣಗಳಾದವು. ರಾತ್ರಿ ಅಸ್ಪೃಶ್ಯೋದ್ಧಾರ ಎಂಬ ನಾಟಕವಾಯಿತು.

ತೆಲ್ಸಂಗ ವಿದ್ಯಾರ್ಥಿ ಸಂಘದ ವತಿಯಿಂದ ಸ್ವಾತಂತ್ರ್ಯೋತ್ಸವ ನಿಮಿತ್ತವಾಗಿ ನಗರ ಸಂಕೀರ್ತನೆ, ಧ್ವಜವಂದನೆ, ಆಟಪಾಟ, ಜಾಹೀರ ಸಭೆ ಮೊದಲಾದವುಗಳು ನಡೆದು ಹಲವರ ಭಾಷಣಗಳು ಆದವು. ರಾಷ್ಟ್ರಗೀತೆಯೊಡನೆ ಸಭಾ ಕಾರ್ಯ ಕೊನೆಗೊಂಡಿತು.

ಬೆಳಗಾವಿಯ ಕನ್ನಡ ಕಾರ್ಯಕರ್ತರಾಗಿರುವ ಶ್ರೀ ಪ್ಯಾಟಿ ಶ್ಯಾಮರಾಯರಿಗೆ ೫೫ ವರುಷ ತುಂಬಿದ್ದರಿಂದ ಅವರ ಗೆಳೆಯರು ಶ್ರೀ ಎಂ. ಪಿ. ಪಾಲಿಯವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ಅನಂತ ಚಿಕ್ಕೋಡಿ, ಪ್ರೊ. ಗೋ ಕುಲಕರ್ಣಿ ಮುಂತಾದವರು ಮಾತಾಡಿ ಶ್ಯಾಮರಾಯರ ಗುಣಗಾನ ಮಾಡಿದರು.

ಬೆಳಗಾವಿ ಸಿವಿಲ್ ಆಸ್ಪತ್ರೆಯಲ್ಲಿ ೧೯ ನೇ ತಾರೀಕು ರಾತ್ರಿ ಶಸ್ತ್ರಕ್ರಿಯೆಯಲ್ಲಿ ಗುಣಮುಖವಾಗುತ್ತಿದ್ದ ಒರ್ವ ರೋಗಿಯ ಕೋಣೆಯನ್ನು ಡಾಕ್ಟರ ಎಂದು ಹೊಕ್ಕು ಕೈಯೊಳಗಿನ ಬಂಗಾರದ ಬಳೆಗಳನ್ನು ತೆಗೆದುಕೊಳ್ಳಲಾರದೆ ಕೊರಳೊಳಗಿನ ಮಂಗಳಸೂತ್ರವನ್ನು ದೋಚಿಕೊಂಡು ಹೋದ ಸುದ್ದಿಯೊಂದು ಪ್ರಸಿದ್ಧವಾಗಿದೆ. ಆಸ್ಪತ್ರೆಯಲ್ಲಿ ಕಳ್ಳ ಹೊಕ್ಕು ದೋಚಿಕೋ ರೋಗಿ ಮತ್ತು ಅವನಲ್ಲಿ ಚಿಕಿತ್ಸೆ ಪಡೆಯುವವರಿಗೆ ದಾದಿಗಳು ಮತ್ತು ಕಾವಲುಗಾರರು ಏನು ಮಾಡುತ್ತಿದ್ದರೋ ತಿಳಿಯದಾಗಿದೆ.

ಕನ್ನಡ ಸಂಸ್ಥಾನ

ಶಿವಮೊಗ್ಗೆಯ ಡೆಪ್ಯುಟಿ ಕಮೀಶನರರಾದ ಶ್ರೀ ಬಿ. ಕೆ. ಶ್ರೀನಿವಾಸಾಚಾರ್ಯರು ಜಿಲ್ಲಾ ಆಹಾರ ಸಮಿತಿ ಸಭೆಯಲ್ಲಿ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಮಳೆಯಿಲ್ಲದ್ದರಿಂದ ಸ್ಥಳೀಕ ಆಹಾರ ಪರಿಸ್ಥಿತಿ ವಿಷಮಿಸುತ್ತಿದೆಯೆಂದು ನುಡಿದರು. ಇನ್ನು ಕೆಲ ದಿನಗಳಲ್ಲಿ ಮಳೆಯಾಗದಿದ್ದರೆ ಪರಿಸ್ಥಿತಿ ಘೋರ ಆಗುವದು. ಸಂಸ್ಥಾನದ ಧಾನ್ಯದ ಕಣಜವಾಗಿದ್ದ ಈ ಜಿಲ್ಲೆಗೇ ಧಾನ್ಯವನ್ನು ಒದಗಿಸಬೇಕಾಗುವದು ಎಂದು ಮುಂತಾಗಿ ಹೇಳಿದರು.

ಕಪ್ಪನಹಳ್ಳಿಯಲ್ಲಿ ಸ್ವಾತಂತ್ರ್ಯೋತ್ಸವ ಶ್ರೀ ಅರಳಿಪ್ಪನವರ ಹಸ್ತದಿಂದ ಧ್ವಜವಂದನದೊಡನೆ ಪ್ರಾರಂಭವಾಯಿತು. ಶ್ರೀ ಅಬ್ದುಲ್ ಗಫೂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಲವರ ಭಾಷಣಗಳಾದವು. ೩೦೦ ಜನರು ಸಭೆಯಲ್ಲಿ ಸಮ್ಮಿಲಿತರಾಗಿದ್ದರು.

ಉತ್ತರ ಕನ್ನಡ

ಸಂಕೊಳ್ಳಿಯಲ್ಲಿ ಶಾಲಾ ವಿದ್ಯಾರ್ಥಿಗಳು ಶಿಕ್ಷಕರು ಮೆರವಣಿಗೆಯಿಂದ ದೇವಸ್ಥಾನಕ್ಕೆ ಬಂದು ಚೇರಮನ್ ಪೋಲೀಸ ಪಾಟೀಲ್ಲರ ಹಸ್ತದಿಂದ ಧ್ವಜವಂದನವಾಯಿತು. ಅನಂತರ ಫಲಾಹಾರವಾದ ನಂತರ ಆಟಪಾಟಾದಿಗಳು ನಡೆದವು. ಸಾಯಂಕಾಲ ಗದಿಗೆಪ್ಪಾ ಶೆಟ್ಟರು ಮೊದಲಾದವರು ಮಾತಾಡಿದರು.

ಕಿಬ್ಬಳ್ಳಿ, ಹೆಗನೂರು, ಕಣಗಲಕೋಣೆ, ಶಿರಗೋಡ ಬೈಲು ಗ್ರಾಮಗಳ ಜನರು ಕಿಬ್ಬಳ್ಳಿ ಶಾಲೆಯಲ್ಲಿ ಶ್ರೀ. ಗೋವಿಂದರಾಮಪ್ಪ ಕೊಂಡಿಳ ಇವರ ಅಧ್ಯಕ್ಷತೆಯಲ್ಲಿ ಸೇರಿ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ನಗರ ಸಂಕೀರ್ತನ ಧ್ವಜವಂದನಗಳಾದ ನಂತರ ಶ್ರೀ ಮಹಾಬಳೇಶ್ವರ ಹೆಗ್ಗಡೆ ಇವರ ಹಸ್ತದಿಂದ ಮಾವು ಅಡಿಕೆ ಗಿಡಗಳನ್ನು ಹಚ್ಚಲಾಯಿತು. ಶಾಲೆಯ ಶಿಕ್ಷಕರು ಮತ್ತು ಗಣಪತಿ ಶಾಸ್ತ್ರಿ ಇವರು ಭಾಷಣ ಮಾಡಿದರು. ವಂದೇ ಮಾತರಂ ಗೀತದೊಡನೆ ಉತ್ಸವ ಕೊನೆಗಂಡಿತು.

ನವಲಕೊಪ್ಪ ಗ್ರಾಮದ ಶ್ರೀ ಗಜಾನನ ನಾಟಕ ಮಂದಿರವು ಕಳೆದ ಏಳು ವರುಷಗಳಿಂದ ಜನತೆಯಲ್ಲಿ ನಾಟಕಾಭಿರುಚಿಯನ್ನು ಹುಟ್ಟಿಸಲು ಪ್ರಯತ್ನಿಸುತ್ತಿದ್ದು ಆ ದಿಸೆಯಲ್ಲಿ ಬಹಳ ಮಟ್ಟಿಗೆ ಯಶಸ್ಸನ್ನು ಪಡೆಯುತ್ತಿದೆ.

ಸಿರಸಿ ರೆಸಿಡೆಂಟ ಕೋರ್ಟಿನಲ್ಲಿ ಕಳೆದ ೧೯ ಕ್ಕೆ ರಾತ್ರಿ ಕಳವು ಆಗಿ ಕೆಲವು ಕಾಗದ ಪತ್ರಗಳು ಕರೆನ್ಸಿ ನೋಟುಗಳು ಕಾಣೆಯಾಗಿದ್ದು ಕಂಡು ಬಂದದ್ದರಿಂದ ಪೋಲೀಸರು ರೀತಿ ಪ್ರಕಾರ ಪಂಚನಾಮೆ ಮಾಡಿದರು. ಕಾಣೆಯಾದ ಕರೆನ್ಸಿ ನೋಟುಗಳ ನಂಬರಗಳನ್ನು ಪ್ರಸಿದ್ಧಿಸಿ ಅವು ಬಂದಲ್ಲಿ ಪೋಲೀಸರಿಗೆ ತಿಳಿಸಬೇಕೆಂದು ಸಾರಲಾಗಿದೆ.

ಅಹಾರ ಬೆಳೆಯ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಕೂಡಿಸಲಾದ ಉತ್ತರ ಕನ್ನಡ ಜಿಲ್ಹಾ ಗ್ರಾಮೋದ್ಧಾರ ಮಂಡಲದ ಸಭೆಯಲ್ಲಿ ಭಾಷಣ ಮಾಡುತ್ತ ಮಾನ್ಯ ಮಂತ್ರಿ ಪಾಟೀಲ ಮಲ್ಲನಗೌಡರು ಆದ ಪ್ರಗತಿಗಾಗಿ ಸಂತೋಷಪಟ್ಟರು. ಎಲ್ಲರೂ ಅಧಿಕಾರಿಗಳೂ ಜನರೂ ಸಹಕರಿಸಿ ಕೆಲಸ ಮಾಡುತ್ತ ಹೋದರೆ ಯಶಸ್ಸು ಖಂಡಿತವೆಂದು ಅವರು ಅಭಿಪ್ರಾಯಪಟ್ಟರು.

ಹರಿಜನ ಲೇಖ

ಅಗ್ರಲೇಖ

ನಗರ ಸಭೆಗಳಿಂದ ಪ್ರಾಣಿ ವಾಹನಗಳ ಉಪಯೋಗ

ಕೇಂದ್ರ ಶಾಸನ ಸಭೆಯ ಸಭಾಪತಿಗಳಾದ ಶ್ರೀ ಜಿ. ವಿ. ಮಾವಳಣಕರರಿಂದ ಬಂದ ಈ ಕೆಳಗಿನ ಪತ್ರವನ್ನು ಓದುಗರ ಅವಗಾಹನೆಗೆ ತರಲು ಸಂತೋಷವಾಗುತ್ತದೆ:

“ಹರಿಜನದ ಈಚೆಗಿನ ಸಂಚಿಕೆಯಲ್ಲಿ ನೀವು ಪ್ರಾಣಿಮೂಲಕವಾಗಿ ಸಾಗಿಗೆ ನಡೆಸುವದನ್ನು ಕುರಿತು ಬರೆದ ಲೇಖವನ್ನೋದಿದಾಗ ನಿಮಗೆ ಬರೆಯಬೇಕೆಂದು ಮನಸಾಯಿತು. ಇನ್ನೂ ಅನೇಕ ವಿಷಯಗಳಲ್ಲಿ ಹರಿಜನದಲ್ಲಿ ಬರೆದ ಲೇಖಗಳು ನನ್ನ ಅಭಿಪ್ರಾಯವನ್ನು ಪ್ರತಿಧ್ವನಿಸಿದಾಗಲೂ ಆಗಾಗ್ಗೆ ನಿಮಗೆ ಬರೆಯಬೇಕೆನಿಸುತ್ತದುಂಟು. ಸಮಯ ಉಳಿಸುವ ಸಲುವಾಗಿ ಇಂಗ್ಲೀಷಿನಲ್ಲಿ ಬರೆಯುತ್ತೇನೆ, ಕ್ಷಮಿಸಿರಿ.

“೧೯೩೦ ರಷ್ಟು ಹಿಂದೆಯೆ ನಾನು ಅಹಮದಾಬಾದ ನಗರಸಭೆಯ ಅಧ್ಯಕ್ಷನಾಗಿ ಆರಿಸಿಬಂದಾಗಲೆ ಪ್ರಾಣಿಮೂಲಕ ಸಾಗಿಗೆಯ ವಿಚಾರ ನನಗೆ ಹೊಳೆದಿತ್ತು. ಆಗ ನನಗೆ ಅದು ಮೂರು ಮುಖ್ಯ ದೃಷ್ಟಿಕೋನಗಳಿಂದ ಅತ್ಯಂತ ಮಹತ್ವದ್ದಾಗಿ ತೋರಿತ್ತು: (೧) ಗ್ರಾಮೋದ್ಧಾರ, (೨) ಸಾರ್ವಜನಿಕ ಆರೋಗ್ಯ ಮತ್ತು (೩) ವಿಕೇಂದ್ರಿತ ಉದ್ಯೋಗಗಳು. ನನ್ನ ಮನಸಿನಲ್ಲಿ ಈ ಪ್ರಶ್ನೆ ಮೂಡಲು ಪ್ರತ್ಯಕ್ಷ ಕಾರಣವೆಂದರೆ ಹರಿಜನ ಆಶ್ರಮದ ಗೋಶಾಲೆಗಳನ್ನು ಸ್ವಾವಲಂಬಿಯಾಗಿ ಮಾಡುವ ಅವಶ್ಯಕತೆಯುಂಟಾದದ್ದು. ಆ ವರೆಗೆ, ನನ್ನ ಅಭಿಪ್ರಾಯದಲ್ಲಿ, ಗೋಶಾಲೆಗಳು ಪ್ರಾಯಕವಾಗಿ ಸಾರ್ವಜನಿಕರ ಧಾರ್ಮಿಕ ಭಾವನೆಯನ್ನೆ ಅಧರಿಸಿದ್ದವು. ಆಶ್ರಮದ ಗೋಶಾಲೆಗಾಗುತಿದ್ದ ಹಾನಿಯನ್ನು (೧೯೩೪ ರಿಂದೀಚೆಗೆ) ಬಾಯಿಗೂಡಿಸುವ ಭಾರ ನನ್ನ ಮೇಲೆ ಬಿದ್ದಾಗಲೆ ನಾನೀ ಪ್ರಶ್ನೆಯನ್ನು ಚಿಂತಿಸತೊಡಗಿದೆ. ಅಮೇಲೆ ನಾವು ಹಸುವನ್ನು ರಕ್ಷಿಸಬೇಕಾದದ್ದು ಅದು ಕೊಡುವ ಹಾಲಿಗೋಸ್ಕರವಾಗಿ ಮಾತ್ರವಲ್ಲ, ಕೃಷಿಗೆ ತೀರ ಅವಶ್ಯವಾದ ಉತ್ತಮ ಹೋರಿಗಳ ತಾಯಿಯಾಗಿ ಅದು ನಮಗೆ ಉಪಯುಕ್ತವಾಗಿರುವದರಿಂದಲೂ ಅದನ್ನು ಸಾಕಬೇಕಾಗಿದೆಯೆಂದು ನನಗೆ ಮನವರಿಕೆಯಾಗಲು ಬಹಳ ಕಾಲ ಹಿಡಿಯಲಿಲ್ಲ, ಅದುಕಾರಣ, ನಾವು ಹಸುವನ್ನು, ಅದು ಕೊಡುವ ಹಾಲು, ಹೋರಿ, ತೊಗಲು ಮತ್ತು ಎಲಬು ಇವೆಲ್ಲವುಗಳ ಪೂರ್ಣ ಉಪಯೋಗದಿಂದ ಲಾಭದಾಯಕವಾಗಿ ಮಾಡಬೇಕೆಂದು ತೀರ್ಮಾನಿಸಿದೆವು. ಕೊಗಲಿನ ವಿಚಾರದಲ್ಲಿ ಅಂತೆಯೆ ಕರಡು ಬಡಿಯುವ ವಿಚಾರದಲ್ಲಿ ನಮ್ಮಲ್ಲಿರುವ ಪ್ರತಿಕೂಲ ಭಾವನೆಗಳನ್ನು ಬದಿಗಿರಿಸಿದಲ್ಲದೆ ಹಸುವನ್ನು ಲಾಭದಾಯಕವಾಗಿ ಸಾಕುವುದು ಸಾಧ್ಯವೇ ಇಲ್ಲ.

“ಅದುದರಿಂದ ನಾನು ಹಸುವಿನ ಹಾಲನ್ನು ನಗರ ಸಭೆಯ ಆಸ್ಪತ್ರೆಗಳಲ್ಲಿಯೂ ಶಾಲಾ ವಸತಿ ಗೃಹಗಳಲ್ಲಿಯೂ ಉಪಯೋಗಕ್ಕೆ ತರಲು ಪ್ರಯತ್ನಮಾಡಿದೆ. ಇದಕ್ಕೆ ವೈದ್ಯಜನರು ಅದರಲ್ಲಿರುವ ಕೊಬ್ಬಿನ ಅಂಶದ ದೃಷ್ಟಿಯಿಂದ ಆಕ್ಷೇಪವೆತ್ತಿದರೂ ಸ್ವರಾಜ್ಯಕ್ಕೆ ಅತ್ಯವಶ್ಯವೆಂಬ ದೃಷ್ಟಿಯಿಂದ ಅದನ್ನು ಸ್ವೀಕರಿಸಲಾಯಿತೆಂದು ಹೇಳಲು ಸಂತೋಷವಾಗುತ್ತದೆ.

“ನಗರ ಸಭೆಯ ಅಧ್ಯಕ್ಷತೆಯ ಹಕ್ಕಿನಿಂದ ನಾನು ವಿಕೇಂದ್ರಿತ ಕೆಲಸದಲ್ಲಿಯೂ ನಗರ ಸಭೆಯ ಮಲಾದಿಗಳಿಂದ ಮಾಡಿದ ಗೊಬ್ಬರವನ್ನು ಹಂಚೈಹಳ್ಳಿಗಾಡಿನ ಪ್ರದೇಶಗಳಿಗೆ ನೆರವಾಗುವ ವಿಚಾರದಲ್ಲಿಯೂ ಅನೇಕ ಪ್ರಯೋಗಗಳನ್ನು ಕೈಕೊಂಡೆ. ಗೋಶಾಲೆಯ ಸಂಪತ್ತಿಗೆ ಪೂರಕಸಾಧನವೆಂತೂ ನಗಡಲೇ ವಿಕೇಂದ್ರಿತ ಕೆಲಸಕ್ಕೆ ಆಧಾರವೆಂದೂ ಎತ್ತುಗಳನ್ನು ಉಪಯೋಗಿಸುವ ಮಾತು ಯಾವಾಗಲೂ ನನ್ನ ಮನಸ್ಸಿನಲ್ಲಿ ಇದ್ದೇ ಇತ್ತು. ಅದನ್ನು ಸಾಧ್ಯವಿದ್ದಷ್ಟು ಮುಂದೊತ್ತಲು ಪ್ರಯತ್ನವನ್ನೂ ಮಾಡಿದೆ. ಆದರೆ ನಾನು ನಗರ ಸಭೆಯನ್ನು ಬಿಟ್ಟು ಪ್ರಾಂತಿಕ ಶಾಸನ ಸಭೆಯಲ್ಲಿ ಕಾರ್ಯ ಮಾಡಬೇಕಾಗಿ ಬಂದುದರಿಂದ ನನ್ನ ಯೋಜನೆಗಳು ಪೂರ್ಣವಾಗಲಿಲ್ಲ. ಇದು ದುರ್ದೈವದ ಸಂಗತಿ.

“ಒಂದು ಕುತೂಹಲ ಜನಕವಾದ ಪ್ರಯೋಗವನ್ನು ಉಲ್ಲೇಖಿಸುವೆ. ನಮ್ಮ ಕೆಲವು ಮುಖ್ಯ ರಸ್ತೆಗಳನ್ನು ದೊಡ್ಡ ಗುತ್ತಿಗೆಗಾರರಿಗೆ ವಹಿಸಿಕೊಟ್ಟು ಡಾಂಬರ ರಸ್ತೆಗಳಾಗಿ ಮಾರ್ಪಡಿಸಲಾಯಿತು. ಅವರು ಯಂತ್ರಗಳನ್ನು ಬಹಳವಾಗಿ ಉಪಯೋಗಿಸುತಿದ್ದರು. ಇದು ಹೆಚ್ಚಾಗಿ ನಾನು ಅಧ್ಯಕ್ಷನಾಗಿ ಆರಿಸಲ್ಪಟ್ಟಾಗಲೆ ಆಗಿತ್ತು, ಆ ವೇಳೆಯೂ ಸ್ವಲ್ಪ ಅಂಶ ಆಯಿತು. ಆದರೆ ನಾನೀ ಪದ್ಧತಿಯನ್ನು ಬದಲಿಸಲು ನಿರ್ಧರಿಸಿದೆ. ಅದಕ್ಕಾಗಿಯೆ ನಾನು ಕೆಲ ಚಿಕ್ಕ ಬಾಯ್ಲರುಗಳನ್ನೂ ಯಂತ್ರಗಳನ್ನೂ ಕೊಂಡೆ. ಇವುಗಳ ಸಹಾಯದಿಂದ ಮನುಷ್ಯಶ್ರಮವನ್ನೇ ಅಧಿಕತರವಾಗಿ ಉಪಯೋಗಿಸಿ ಕೆಲಸ ಮಾಡಲಾಯಿತು. ಪರಿಣಾಮ ಅತ್ಯಂತ ಚಮತ್ಕಾರಿಕವಾಗಿತ್ತು. ಕೆಲಸವಿಲ್ಲದೆ ಇದ್ದ ಅನೇಕ ಜನರಿಗೆ ಇದು ಕೆಲಸವನ್ನು ಒದಗಿಸಿತು ಮಾತ್ರವಲ್ಲ, ದೊಡ್ಡ ಯಂತ್ರಗಳ ಸಹಾಯದಿಂದ ಗುತ್ತಿಗೆಗಾರರ ಮೂಲಕ ಮಾಡಿಸಿದಾಗ ಬಿದ್ದುದರ ಸೇಕಡಾ ೪೦ ರಷ್ಟೇ ಅಂಶ ವೆಚ್ಚದಲ್ಲಿ ಅಷ್ಟೇ ಪರಿಷ್ಕಾರವಾಗಿ ಕೆಲಸವಾಯಿತು.

“ಇದರಿಂದ ಹುರಿಗೊಂಡು ನಾನು ನಗರದ ಹೊಲಸನ್ನು ಎತ್ತಿನ ಗಾಡಿಗಳ ಸಹಾಯದಿಂದಲೇ ಹೊರಸಾಗಿಸಲು ನಿರ್ಧರಿಸಿದೆ. ಮೋಟಾರು ಲಾರಿಗಳನ್ನು ಇದಕ್ಕಾಗಿ ಉಪಯೋಗಿಸಲು ನನಗಿದ್ದ ಮುಖ್ಯ ಆಕ್ಷೇಪವೆಂದರೆ, ಅದರಿಂದ ದೇಶಕ್ಕಾಗುವ ಬಂಡವಳದ ಹಾನಿ. ಮೋಟಾರುಗಳೂ ಅದಕ್ಕೆ ಬೇಕಾದ ಪೆಟ್ರೋಲೂ ಪರದೇಶಗಳಿಂದಲೇ ಬರಬೇಕಾಗಿದೆ. ಆನುಷಂಗಿಕವಾಗಿ, ಅದು ಅನೇಕ ಕೆಲಸಗಾರರಿಗೆ ನಿರುದ್ಯೋಗವನ್ನೂ ತರಿದೊಡ್ಡುತ್ತಿತ್ತು. ಏಕೆಂದರೆ ಎತ್ತಿನ ಗಾಡಿಗಳಲ್ಲಿ ಅವರು ಅಷ್ಟೇ ಚನ್ನಾಗಿ ಹೊಲಸನ್ನು ಹೊರ ಸಾಗಿಸಬಹುದಾಗಿತ್ತು, ಆದರೆ ನಗರದ ಜನನಿಬಿಡ ಭಾಗಗಳಿಂದ ಹೊಲಸನ್ನು ಶೀಘ್ರವಾಗಿ ಸಾಗಿಸಬೇಕಾಗಿದ್ದ ಕಾರಣ ಅಷ್ಟು ಮಟ್ಟಿಗೆ ಕೆಲ ಮೋಟಾರು ಲಾರಿಗಳನ್ನು ನಾನು ಇಟ್ಟುಕೊಳ್ಳಲೇ ಬೇಕಾಗಿತ್ತು. ನಗರದ ಹೊರವಲಯದಿಂದ ಮೂರುನಾಲ್ಕು ಮೈಲು ದೂರಕ್ಕೆ ಹೊಲಸನ್ನು ಸಾಗಿಸುವ ಕೆಲಸಕ್ಕೆ ಪೂರ್ತಿಯಾಗಿ ಎತ್ತಿನ ಗಾಡಿಗಳನ್ನೇ ಉಪಯೋಗಿಸಬೇಕೆಂದು ನನ್ನ ವಿಚಾರವಿತ್ತು. ಇಂದಿಗೂ ಮುಂಬಯಿ ನಗರ ಸಭೆ ಸಾಗಾಟಕ್ಕೆ ಕೆಲ ಎತ್ತಿನ ಗಾಡಿಗಳನ್ನು ಇಟ್ಟುಕೊಂಡಿದೆಯೆಂದು ನನ್ನ ತಿಳಿವಳಿಕೆ. ಆದರೆ ನಿಶ್ಚಿತವಾಗಿ ಹೇಳಲಾರೆ.

“ನಗರ ಸಭೆಗಳನ್ನು ತಮ್ಮ ಬಹುಮತದ ಬಲದಿಂದ ನಡೆಸುವೆವೆಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಸಂಸ್ಥೆಗಳು ದೇಶದ ಆರ್ಥಿಕ ವ್ಯವಸ್ಥೆ, ಅದರ ಸ್ವರೂಪ ಮತ್ತು ಜನರ ಉದ್ಯೋಗದ ಪ್ರಶ್ನೆಗಳ ಮೇಲೆ ಪರಿಣಾಮ ಮಾಡುವ ಈ ಅಂಶಗಳನ್ನು ಪರಿಶೀಲಿಸಬೇಕೆಂದು ಹಾರೈಸುತ್ತೇನೆ. ನಾವು ಯಾಂತ್ರೀಕರಣಕ್ಕೆ ಅತಿರೇಕವಾಗಿ ಮೋಹಗೊಂಡು ಅದರಿಂದ ಗ್ರಾಮಕೇಂದ್ರಿತ ಅರ್ಥವ್ಯವಸ್ಥೆ ವಿಕೇಂದ್ರಿತ ಉದ್ದಿಮೆ, ಮತ್ತು ನಿರುದ್ಯೋಗ ಅಥವಾ ಒತ್ತಾಯದಸೋಮಾರಿತನದ ನಿವಾರಣೆಎಂಬೀ ನಮ್ಮ ಧ್ಯೇಯಗಳ ಮೇಲಾಗಬಹುದಾದ ದುಷ್ಪರಿಣಾಮವನ್ನು ಗಮನಕ್ಕೆ ತಂದುಕೊಂಡಿಲ್ಲವೆಂದು ನನಗೆನಿಸುತ್ತದೆ.

“ನಾನು ೧೯೪೪-೪೫ ರಲ್ಲಿ ರತ್ನಾಗಿರಿಯಲ್ಲಿ ಸ್ಥಾನಬದ್ಧನಾಗಿದ್ದಾಗ, ಅಲ್ಲಿ ಅನೇಕ ಜನರೊಡನೆ ನನಗೆ ಸಂಪರ್ಕ ಬಂತು. ನಾನು ಸ್ಥಾನಿಕ ಸ್ವರಾಜ್ಯದಲ್ಲಿ ಆಸ್ಥೆ ತಳೆದವನೆಂದರಿತು ಅವರು ತಮ್ಮ ವಿದ್ಯಮಾನಗಳನ್ನು ಪರಿಶೀಲಿಸಿ ಸಲಹೆ ಕೊಡಲು ನನ್ನನ್ನು ಕೇಳಿಕೊಂಡರು. ನಗರ ಸಭೆಗೆ ಆಗ ೪೫೦೦೦ ರೂಪಾಯಿಗಳ ವಾರ್ಷಿಕ ಉತ್ಪನ್ನವಿತ್ತು. ನಗರದಲ್ಲಿ ಜನಸಂದಣಿ ಅಷ್ಟೇನೂ ಇಲ್ಲದಿದ್ದರೂ “ಕಚಡಾ” ತೆಗೆಯಲು ಒಂದು ಮೋಟಾರು ಲಾರಿ ಬೇಕೆಂಬ ಅವರ ವಿಚಾರವನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಎಷ್ಟೋ ಕಡೆಗಳಲ್ಲಿ ಮನೆಗಳು ದೂರದೂರವಾಗಿದ್ದು, ಹೊಲಸನ್ನು ಸಾಗಿಸಲು ವರ್ಷಕ್ಕೆ ೫೦೦೦ ರೂಪಾಯಿ ವೆಚ್ಚ ಬರಬಹುದಾಗಿತ್ತು. ಕೆಲವರ್ಷಗಳಲ್ಲಿ ಹೊಸ ಹೊಸ ಮೋಟಾರು ಕೊಳ್ಳಲು ಬೇಕಾದ ಸಹಕಾರ ವೆಚ್ಚ ಬೇರೆಯೆ. ದೇಶದೊಳಗೆ, ಕೂಲಿಯವನು ಎರಡೆರಡು ದಿವಸ ದುಡಿದು ಒಂದು ತಲೆಹೊರೆ ಹುಲ್ಲು ತಂದರೆ ಅದಕ್ಕೆ ಆರಾಣೆ ಗಿಟ್ಟಿದಷ್ಟು ದರಿದ್ರವಾಗಿತ್ತು. ಅತಿದರಿದ್ರರಾದ ಜನರು ರತ್ನಾಗಿರಿಗೆ ಆ ಹೊರೆ ಹುಲ್ಲನ್ನು ತರಲು ೧೨ ಮೈಲು ಮತ್ತೆ ತಿರುಗಿ ಹೋಗಲು ೧೨ ಮೈಲು ನಡೆಯುತಿದ್ದರು. ಇಷ್ಟು ತೀವ್ರವಾದ ಬಡತನ ನಿರುದ್ಯೋಗಗಳು ಹಬ್ಬಿರುವಾಗ ನನ್ನೀ ಗೆಳೆಯರೇಕೆ “ಕಚಡಾ” ತೆಗೆಯಲು ಮೋಟಾರು ಲಾರಿಯನ್ನಪೇಕ್ಷಿಸುತಿದ್ದರೊ ಬಗೆಹರಿಯಲಿಲ್ಲ. ಹತ್ತು ಹನ್ನೆರಡು ಎತ್ತಿನ ಗಾಡಿಗಳನ್ನಿಟ್ಟುಕೊಂಡು ಅತ್ತ ಅನೇಕ ಗಾಡಿಯಾಳುಗಳಿಗೂ ಎತ್ತಿನ ಆಳುಗಳಿಗೂ ಉದ್ಯೋಗವನ್ನೊದಗಿಸಿ ಇತ್ತ ಕೆಲಸವನ್ನು ಅಷ್ಟೇ ತೃಪ್ತಿಕರವಾಗಿ ನಿರ್ವಹಿಸಲು ಸಾಧ್ಯವಿದ್ದಾಗ ಪೆಟ್ರೋಲಿಗಾಗಿಯೂ ಮೋಟಾರುಗಳನ್ನು ನಡೆಸುವದಕ್ಕಾಗಿಯೂ ೫೦೦೦ ರೂಪಾಯಿಯನ್ನು ಸುರಿಯುವದೆಂದರೆ ಅನ್ಯಾಯವೇ ಸರಿಯೆಂದು ನನಗೆ ತೋರಿತು.

“ನಾವೀಗ ದೇಶದ ಆಡಳಿತೆಯ ಹೊಣೆಯನ್ನು ಪಡೆದಿದ್ದೇವೆ. ಆದರೆ ನಮ್ಮ ಆರ್ಥಿಕ ಸ್ಥಿತಿಗತಿಗಳಿಗೂ ಧ್ಯೇಯಗಳಿಗೂ ಒಪ್ಪುವಂತೆ ಪ್ರಯತ್ನಗಳನ್ನು ಕೈಕೊಳ್ಳುವ ಧೈರ್ಯ ನಮಗಿನ್ನೂ ಲಬ್ಧವಾಗಿಲ್ಲವೆಂದು ತೋರುತ್ತದೆ. ನಾವು ಯಾಂತ್ರೀಕರಣದ ಸುಳಿಯಲ್ಲಿ ಮತ್ತೂ ಮತ್ತೂ ಮುನ್ನುಗ್ಗುತ್ತಿದ್ದೇವೆ. ಈ ಯಾಂತ್ರೀಕರಣದ ವಿರುದ್ಧ ನೀವು ನಿಷೇಧದ ದನಿಯನ್ನೆತ್ತಿದ್ದು ಸಂತೋಷಕರ.”

ಕಳೆದ ಮಹಾಯುದ್ಧದ ಕಾಲದಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ನಾಗರಿಕ ಸರಕುಗಳನ್ನು ಸಾಗಿಸಲು ರೇಲ್ವೆ ಡಬ್ಬಿಗಳ ಕೊರತೆ ತೀವ್ರವಾಗಿ ಅನುಭವಕ್ಕೆ ಬಂದಾಗ ಟಿಟಾಗಢ ಕಾಗದ ಕಾರಖಾನೆಯಿಂದ ತನಗೆ ಬೇಕಾದ ಕಾಗದ ತರಿಸಿಕೊಳ್ಳುವುದು ನವಜೀವನ ಮುದ್ರಣಾಲಯಕ್ಕೆ ದುಸ್ತರವಾಗತೊಡಗಿತು. ಕಾಗದವೇನೋ ದೂರ, ಓರಿಸಾದಲ್ಲಿತ್ತು. ಆದರೆ ಅದನ್ನು ಅಹಮದಾಬಾದಿಗೆ ತರುವ ಬಗೆಯಾವುದು? ಪೂರ್ವಕಾಲದಲ್ಲಿದ್ದಂತೆ ಎತ್ತಿನ ಗಾಡಿಯ ಸಾಗಿಗೆಯನ್ನು ಸಂಘಟಿಸಲು ಇದೀಗ ಸಮಯವೆಂದು ಗಾಂಧೀಜಿ ಸೂಚಿಸಿದರು. ಎತ್ತುಗಳ ಮತ್ತು ಇತರ ಪ್ರಾಣಿಗಳ ಹಿಂಡನ್ನೇ ಉಪಯೋಗಿಸಿ ದೇಶದ ಆ ತುದಿಯಿಂದ ಈ ತುದಿಗೆ ಸರಕು ಸಾಗಿಸುವ ವ್ಯವಸ್ಥೆ ಮಾಡಬೇಕು.

ಆದರೆ ಆ ಸೂಚನೆಯನ್ನು ಯಾರಿಗೆ ಮಾಡಲಾಗಿತ್ತೋ ಅವರು, ಅದು ತತ್‌ಕ್ಷಣ ಸಾಧ್ಯವಾಗುವದು ಕಠಿನವೆಂದು ಅಭಿಪ್ರಾಯಪಟ್ಟದ್ದರಿಂದ ವಿಚಾರವನ್ನು ಮುಂದೊತ್ತಲಾಗಲಿಲ್ಲ. ಗಾಂಧೀಜಿಗೆ, ಈ ವಿಚಾರವನ್ನು ಬಿಟ್ಟದ್ದು ಅಷ್ಟು ಸೊಗಸಲಿಲ್ಲೆಂದೂ ಕಾಲ ಮತ್ತು ಕಾಠಿಣ್ಯಗಳ ನೆವವು ನಮ್ಮ ರೂಢಮೂಲವಾದ ಮೈಗಳ್ಳತನದ ಪರಿಣಾಮವೇ ಎಂದು ಅವರು ಬಗೆದಂತೆಯೂ ನನಗೆ ಅನಿಸಿತ್ತು. ಅವರು ವಿಚಾರಿಸುತಿದ್ದುದು ಹದಿನೈದು ದಿನದ ಅಥವಾ ಒಂದು ತಿಂಗಳ ಪ್ರಶ್ನೆಯಾಗಿರದೆ, ಹೊಸದೊಂದು ಸಂಘಟನೆಯೇ ಆಗಿತ್ತು. ಯುದ್ಧಕಾಲ ಅದಕ್ಕೆ ಅತ್ಯಂತ ಅನುಕೂಲವಾಗಿತ್ತು. ಹೇಗೇ ಇರಲಿ, ಆಗಲಂತೂ ಆ ವಿಚಾರವನ್ನು ತೊರೆಯುವುದಾಯಿತು.

ಆದರೆಅದು ಸದಾಕಾಲದ ಅವಶ್ಯಕತೆ. ಅದುದರಿಂದ ಈಗಲಾದರೂ ನಾವು ಕಾರ್ಯಪ್ರವೃತ್ತರಾಗಬೇಕು. ಸರಕಾರದ ಪ್ರೋತ್ಸಾಹ ದೊರೆತರೆ, ಯಾಂತ್ರಿಕಸಾಗಿಗೆಯ ಸಂಗಡಸಂಗಡವೇ ಒಳ್ಳೆಯ ಸಮೃದ್ಧವಾದ ಈ ಸಾಗಿಗೆಕಾರ್ಯವನ್ನು ಬೆಳೆಸಲು ಐದು ವರ್ಷದ ಅವಧಿಯಲ್ಲಿ ತಳಹದಿ ಹಾಕಬಹುದು.

ಜೂಜಿನ ಕುದುರೆಗಳಾಗಲಿ ಓಟದ ಕುದುರೆಗಳಾಗಲಿ ನಮ್ಮ ನಾಗರಿಕ ಅವಶ್ಯಕತೆಗೆ ಬೇಕಾಗಿಲ್ಲ. ನಮಗೆ ಬೇಕಾದುದು ಭಾರ ಹೊರುವ ಪ್ರಾಣಿಗಳು—ಎತ್ತು, ಕತ್ತೆ, ಹೇಸರಕತ್ತೆ, ಒಂಟೆ ಮತ್ತು ಅವಶ್ಯನಿದ್ದರೆ ದುಡಿಯುವ ಕುದುರೆಗಳು. ದುಡಿಯುವ ಕುದುರೆಗಳಿಗೆ ಈ ದೇಶದಲ್ಲಿ ಮಹತ್ವವಿಲ್ಲ. ಏಕೆಂದರೆ ನಮ್ಮ ಕೃಷಿ ಕುದುರೆಯನ್ನವಲಂಬಿಸಿರದೆ ಎತ್ತನ್ನು ಅವಲಂಬಿಸಿದೆ. ಗಾಡಿ ಎಳೆಯುವ ಜಾತಿ ಕುದುರೆಗಳ ಅವಶ್ಯಕತೆ ತಕ್ಕಮಟ್ಟಿಗೆ ಇದೆ.

ಶ್ರೀ ಮಾವಳಣಕರರು ನನ್ನ ವಿಚಾರಗಳಿಗೆ ಬೆಂಬಲವಿತ್ತುದಕ್ಕಾಗಿ ಸಂತೋಷಪಡುತ್ತೇನೆ.

ವರ್ಧಾ ೧೩-೮-೪೮ ಕಿ. ಘ. ಮಶ್ರುವಾಲಾ

ನಮ್ಮ ಆಹಾರ ಸಮಸ್ಯೆ— ವಿಚಿತ್ರಧೋರಣೆ

ನಮ್ಮ ಆಹಾರ ಸಮಸ್ಯೆ ಅತ್ಯಂತ [illegible] ನಾನೆಷ್ಟು ಮಹತ್ವ [illegible] ಆಗಿ ನಾವು ಆಹಾರ [illegible] ಹೆಚ್ಚು ಆಹಾರ [illegible] ಬೆಳೆಯಲು, [illegible] ಪಡಿಸಿಕೊಂಡು ಹೆಚ್ಚು ಆಹಾರ [illegible] ವಾಗದಂತೆ ನೋಡಿಕೊಳ್ಳಬೇಕು [illegible] ಜವಾಹರಲಾಲ ನೆಹರು ಮತ್ತು [illegible] ಯವರು [illegible] ಜನರನ್ನು [illegible] ಕೊಂಡಿದ್ದಾರೆ.

ಅವರು ಈ ರೀತಿಯಾಗಿ ಬಿನ್ನವಿಸಿಕೊಂಡಿರುವಾಗ ಹಿಂದುಸ್ತಾನ ಸರಕಾರದವರು ನಮ್ಮ ದೇಶದೊಳಗಿಂದ ಎಣ್ಣೆಕಾಳುಗಳ ನಿರ್ಯಾತಕ್ಕೆ ಪ್ರೋತ್ಸಾಹನೆ ಕೊಡುತ್ತಿರುವದು ವಿಚಿತ್ರ ತೋರುವದಿಲ್ಲವೆ? ಈ ನಿರ್ಯಾತವು ಜವಾಹರಲಾಲಜಿಯವರ ದೃಷ್ಟಿಪಥಕ್ಕೆ ಬಂದಿರಲಿಕ್ಕಿಲ್ಲವೆ? ಎಣ್ಣೆಕಾಳುಗಳು ಆಹಾರ ಪದಾರ್ಥಗಳಲ್ಲಿ ಬರುವದಿಲ್ಲವೆ? ಜವಾಹರಲಾಲಜಿ ರಾಜಾಜಿಯವರೂ ಇಬ್ಬರೂ ಸಣ್ಣ ಧಾನ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಆಹಾರ ಪದಾರ್ಥಗಳೆಂಬ ದೃಷ್ಟಿಯಿಂದ ಎಣ್ಣೆಕಾಳುಗಳ ಮಹತ್ವವು ಸಂಬಂಧಿಸಿದ ಆ ಅಧಿಕಾರಿಗಳ ಗಮನಕ್ಕೆ ಬಂದಿರುವದಿಲ್ಲೆಂದು ತೋರುತ್ತದೆ. ನಮ್ಮ ಆಹಾರ ಪರಿಸ್ಥಿತಿ ಇಷ್ಟೊಂದು ಸೂಕ್ಷ್ಮಮಟ್ಟಕ್ಕಿಳಿದಿರುವಾಗ ಸಣ್ಣ ಧಾನ್ಯಗಳನ್ನು ನಿರ್ಯಾತ ಮಾಡುವವರ ಬಗ್ಗೆ ಏನೆನ್ನಬೇಕು? ಆದರೆ ಎಣ್ಣೆಕಾಳುಗಳನ್ನು ನಿರ್ಯಾತ ಮಾಡುವದೆಂದರೆ ಎರಡೂವರೆಪಟ್ಟು ಆಹಾರ ಸತ್ವಾಂಶಗಳನ್ನು ಹೊರಗೆ ಕಳಿಸಿದಂತಾಗುವದು; ಪೌಷ್ಟಿಕತೆಯ ದೃಷ್ಟಿಯಿಂದ ಅದಕ್ಕೂ ಬಹಳ ಹೆಚ್ಚು ಸತ್ವವನ್ನು ಹೊರಗೆ ಕಳಿಸಿದಂತಾಗುವದು. ನಮ್ಮ ಆಹಾರ ಪಥ್ಯದಲ್ಲಿ ಮೊದಲೆ ಪ್ರೊಟೀನು ಮತ್ತು ಕೊಬ್ಬು ಬಹಳ ಕಡಮೆ ಇರುತ್ತವೆ. ನಮ್ಮ ಜನ ಸಾಮಾನ್ಯರು ಸಣ್ಣ ಧಾನ್ಯಗಳು ಮತ್ತು ಕಾರ್ಬೋಹೈಡ್ರೇಟಗಳ ಮೇಲೆ ಮಾತ್ರ ಜೀವಿಸುತ್ತಾರೆ. ಅವಶ್ಯಕ ಉತ್ಸಾಹ ಶಕ್ತಿಯನ್ನು ಪಡೆಯುವದಕ್ಕಾಗಿ ಕಾರ್ಬೋಹೈಡ್ರೇಟವನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕಾಗುವದು; ಆದರೆ ಇದರಿಂದ ಪಚನಶಕ್ತಿಯ ಇಂದ್ರಿಯಗಳ ಮೇಲೆ ಹೆಚ್ಚಿನ ಭಾರಬಿದ್ದುಕೊನೆಗೆ ಅವು ನಿಃಸತ್ವವಾಗುತ್ತವೆ. ಕೊಬ್ಬಿನಿಂದ ಇದು ಕಡಿಮೆಯಾಗಿ ಪಚನಕ್ರಿಯೆಗೆ ಸಹಾಯ ಸಿಕ್ಕುತ್ತದೆ. ಆದರೆ ನಮ್ಮ ಆಹಾರ ಪದಾರ್ಥಗಳಲ್ಲಿ ಇದರ ಅಭಾವವೇ ಬಹಳ. ಪ್ರತಿಯೊಬ್ಬರಿಗೆ ವರ್ಷಕ್ಕೆ ೨೦ ಪೌಂಡು ಕೊಬ್ಬು ಬೇಕೆಂಬುದು ಪೌಷ್ಟಿಕತೆಯ ಪ್ರಮಾಣ, ಆದರೆ ನಮಗೆ ದೊರೆಯತಕ್ಕ ಕೊಬ್ಬಿನ ಪ್ರಮಾಣ ಕೇವಲ ೮ ಪೌಂಡು ಮಾತ್ರ, ಎಣ್ಣೆಕಾಳುಗಳನ್ನು ಹೊರಗೆ ಕಳಿಸಿ ನಾವು ಉಪಯೋಗಿಸುತಿರುವ ಕೊಬ್ಬಿನ ಪ್ರಮಾಣವನ್ನು ಇನ್ನಷ್ಟು ಕಡಮೆ ಮಾಡುವದಕ್ಕೆ ಏನಾದರೂ ಪ್ರಬಲ ಕಾರಣಗಳಿವೆಯೆ? ಎಣ್ಣೆಕಾಳುಗಳಲ್ಲಿ ಕೊಬ್ಬು ಇರುವದಲ್ಲದ ಅತಿ ಮಹತ್ವದ ಪ್ರೊಟೀನ ಸತ್ವವೂ ಇರುವದು. ಕ್ಯಾಲ್ಸಿಯಮ್ ಮತ್ತು ಉಳಿದ ಸತ್ವಗಳೂ ಅದರಲ್ಲಿ ಇರುವವೆಂಬದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಎಣ್ಣೆಕಾಳುಗಳನ್ನು ಹೊರಗೆ ಕಳಿಸುವದೆಂದರೆ ಸಂರಕ್ಷಕ ಆಹಾರ ಸತ್ವಗಳನ್ನೆಲ್ಲ ಹೊರಗೆ ಕಳಿಸಿದಂತಾಗುವದು. ಎಣ್ಣೆಕಾಳುಗಳನ್ನು ನಿರ್ಯಾತ ಮಾಡುವ ನಮ್ಮ ಧೋರಣದಿಂದ, ಎಣ್ಣೆ ಕಾಳುಗಳ ಬೆಲೆಗಳು ವಿಪರೀತ ಏರಿವೆ; ಪರಿಣಾಮವಾಗಿ ಎಣ್ಣೆಯ ಬೆಲೆಯೂ ಹೆಚ್ಚಿದ್ದರಿಂದ ನಮ್ಮ ಬಡ ಜನರ ಆಹಾರದಲ್ಲಿ ಎಣ್ಣೆಗೂ ಸಂಚಕಾರ ಬೀಳಹತ್ತಿದೆ. ಇದಕ್ಕಾಗಿ ಹೆಚ್ಚಿನ ಹಾನಿಯನ್ನು ಇದು ಉಂಟು ಮಾಡಿದೆ; ಈ ನಿರ್ಯಾತದ ಉದ್ದೇಶವೇ ನಿರರ್ಥಕವಾದಂತಾಗಿದೆ. ಹೆಚ್ಚೆಚ್ಚು ಯಂತ್ರಗಳನ್ನು ತರಿಸುವದಕ್ಕಾಗಿ ಎಣ್ಣೆ ಕಾಳುಗಳನ್ನು ನಿರ್ಯಾತ ಮಾಡಲಾಗುತ್ತದೆಯೆಂದು ಹೇಳಲಾಗುತ್ತದೆ. ಆದರೆ ಈಗಿದ್ದ ಪರಿಸ್ಥಿತಿಯಲ್ಲಿಯೂ ಇಲ್ಲಿನ ಗಾಣಗಳಿಗೆ ಸಾಕಷ್ಟು ಎಣ್ಣೆ ಕಾಳುಗಳು ಸಿಕ್ಕುವದಿಲ್ಲ. ನೂರಕ್ಕೆ ೫೦ ಕ್ಕಿಂತ ಹೆಚ್ಚು ಗಾಣಗಳು ಈಗ ಕೆಲಸವಿಲ್ಲದೆ ಕೂಡ್ರಬೇಕಾಗುತ್ತದೆ. ಎಣ್ಣೆ ಕಾಳುಗಳನ್ನು ನಿರ್ಯಾತ ಮಾಡುವದರಿಂದ, ಎಣ್ಣೆಕಾಳುಗಳನ್ನುನುರಿಸುವ ಯಂತ್ರಗಳು ಇನ್ನಷ್ಟು ಕೆಲಸವಿಲ್ಲದೆ ಕೂಡ್ರಬೇಕಾಗುವದು. ಮಳೆಯ ನೀರನ್ನು [illegible] ಮಂಜಿನ ನೀರಿಗೆ ಬಾಯೊಡ್ಡಿದಂತೆ ಅಲ್ಲವೇ ಇದು? ನಮ್ಮೀ ನಿರ್ಯಾತ ಧೋರಣೆಯು ನಮ್ಮ ರಾಷ್ಟ್ರ ಹಿತದೃಷ್ಟಿಯಿಂದ ಕೈಕೊಂಡದ್ದೆ?

(೧೪ ನೇ ಪುಟಕ್ಕೆ)

ಗ್ರಹಗಳ ಮುನ್ನೋಟ

ಆಗಸ್ಟ್ ೨೯ ರಿಂದ ಸೆಪ್ಟೆಂಬರ ೪ ರ ವರೆಗೆ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ]

ಮೇಷ

ಈ ವಾರದಲ್ಲಿ ನೀವು ಮುಖ್ಯವಾಗಿ ನಿಮ್ಮ ಸ್ವಂತದ ಮತ್ತು ಹೆಂಡತಿಯ ಪ್ರಕೃತಿಯ ವಿಷಯದಲ್ಲಿ ಬಹಳ ಎಚ್ಚರಿಕೆ ವಹಿಸಬೇಕು. ಮಕ್ಕಳೂ ನಿಮ್ಮ ಮನಸಿನಲ್ಲಿ ಭಯವುಂಟಾಗುವಂತೆ ವರ್ತಿಸುತ್ತಿರುವ ಸಂಭವವುಂಟು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ತುಂಬ ಹೆಣಗ ಬೇಕಾದೀತು. ದಾಯಾದ್ಯರಿಂದ ಕೆಟ್ಟ ಮಾತುಗಳನ್ನು ಅನುಭವಿಸಿಕೊಳ್ಳುವ ಪ್ರಸಂಗವೂ ಉಂಟು. ವ್ಯಾಜ್ಯ ಮೊದಲಾದ ವ್ಯವಹಾರಗಳಲ್ಲಿ ನಿಮ್ಮ ಸ್ಥಿತಿ ಸುಧಾರಿಸಬೇಕಾದರೆ ಇನ್ನೂ ಎರಡು ಮೂರು ವಾರ ಹಿಡಿದೀತು. ಆದರೆ ಶತ್ರುವಿಗೆ ಬೇರೆಯ ತೊಂದರೆಗಳೊದಗಿ ಅವನು ಹಣ್ಣಾಗುವನು. ಮಿತ್ರಜನರ ಸಹಕಾರದಿಂದ ಮನಸ್ಸಿಲ್ಲದಿದ್ದರೂ ಕಾರ್ಯ ಮಾಡಬೇಕಾದೀತು. ಪ್ರವಾಸ ಫಲಪ್ರದ. ಭೆಟ್ಟಿ ಪತ್ರವ್ಯವಹಾರಗಳು ಅಷ್ಟೇನೂ ಸರಿಯಾಗಿ ನೆರವೇರಲಾರವು. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲ ೩ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೨೯, ೧, ೨, ೩ ಅನುಕೂಲ.

ವೃಷಭ

ದೇಹಾರೋಗ್ಯ ಚನ್ನಾಗಿದ್ದರೂ ಮನಸ್ಸು ಸಮಾಧಾನವಾಗಿರಲಿಕ್ಕಿಲ್ಲ. ಸುಳ್ಳೇ ಭ್ರಮೆಯಿಂದ ಸರಿಯಾಗಿರುವದನ್ನೂ ಸರಿಯಿಲ್ಲವೆಂದು ಬಗೆದು ಸುಮ್ಮನೆ ವೇದನಾಪಡಬೇಡಿರಿ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಅಪೇಕ್ಷಿಸಿದಂತೆಯೆ. ಇದ್ದರೂ ಪ್ರತಿಯೊಂದು ವ್ಯವಹಾರವೂ ಹನುಮಂತನ ಬಾಲದಂತೆ ಬೆಳೆದು ಅಪಾರ್ಥವ್ಯವಾಗಿ ಹೋಗಬಹುದು. ಹೆಮ್ಮೆಯ ಜನರೊಡನೆ ಸಹವಾಸವೂ ಒದಗೀತು. ವ್ಯಾಜ್ಯ ಮೊದಲಾದ ವ್ಯವಹಾರಗಳಲ್ಲಿ ಎಚ್ಚರದಿಂದ ಕಾಲು ಹಾಕಿರಿ. ಪ್ರವಾಸವೂ ಭೆಟ್ಟಿಯೂ ತುಂಬ ಕ್ಲೇಶದಾಯಕ. ಆದರೆ ಪತ್ರವ್ಯವಹಾರದಿಂದ ಹುರುಪು ಬಂದೀತು. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲ ೩ ಚರಣಗಳು ವಿಶೇಷ ಜಾಗ್ರತೆ ವಹಿಸಬೇಕು. ತಾ. ೩೦, ೩೧, ೪ ಅನುಕೂಲ.

ಮಿಥುನ

ಆರೋಗ್ಯಭಾಗ್ಯ ಚನ್ನಾಗಿದೆ. ಮಕ್ಕಳ ಪ್ರಕೃತಿ ಬಗ್ಗೆ ಮಾತ್ರ ಜೋಕೆ. ದಾಯಾದಿಗಳೊಲ್ಲೊಬ್ಬನಿಗೆ ಅಪಘಾತವಾದೀತು. ಉದ್ಯೋಗದಲ್ಲಿ ಧನ ಲಾಭ ಯಥೇಷ್ಟ. ಆದರೆ ಅನೇಕ ಅಡಚಣಿಗಳು ತಲೆಯೆತ್ತಬಹುದಲ್ಲದೆ ಪ್ರತಿಷ್ಠೆಯೂ ಅಲುಗಾಡುವಂತೆ ತೋರುವದು. ವ್ಯಾಜ್ಯ ಮೊದಲಾದ ವಿವಾದಗಳಲ್ಲಿ ನಿಮಗೇ ಜಯದ ಲಕ್ಷಣಗಳು ಕಂಡು ಬಂದರೂ ವೈರಿಯ ಕಿರಿಗೇಡಿತನವೇನೂ ಕಡಿಮೆಯಿಲ್ಲ. ಮೇಲಾಗಿ ನಿಮ್ಮ ಮಿತ್ರರೇ ನಿಮ್ಮ ಮೇಲೆ ದೂರು ಬೆಸೆಯುವದರಿಂದ ಕ್ರುದ್ಧರಾಗುವಿರಿ. ಪ್ರವಾಸದ ಗೋಜಿಗೆ ಹೋಗಬೇಡಿರಿ. ಭೆಟ್ಟಿ ಪತ್ರವ್ಯವಹಾರಗಳು ಅನುಕೂಲವಾಗಿ ಕೊನೆಗೊಳ್ಳಬಹುದು. ಮೃಗಶಿರೆಯ ೪ ನೆ ಮತ್ತು ಆರ್ದ್ರೆಯ ಮೊದಲ ೩ ಚರಣಗಳಿಗೆ ಅಷ್ಟೇನೂ ಅನಿಷ್ಟವಿಲ್ಲ. ತಾ. ೨೯, ೨, ೩ ಅನುಕೂಲ.

ಕರ್ಕ

ನಿಮ್ಮ ದಂಪತಿಗಳಿಬ್ಬರ ದೇಹಾರೋಗ್ಯ ಸರಿಯಾಗಿರುತ್ತದೆ. ಆದರೆ ಹೆಂಡತಿಯ ಪ್ರಕೃತಿ ತುಸು ಚಿಂತಾತುರ. ನಿಮ್ಮೊಳಗೆ ಅನ್ಯೋನ್ಯ ಪ್ರೇಮ ಸಹಕಾರವಿದ್ದರೂ ಕೆಲ ಹೊರಗಿನ ಕಾರಣಗಳಿಂದ ಸಂಸಾರರಥ ಅಷ್ಟು ಸುಗಮವಾಗಿ ನಡೆಯುವುದು ಕಠಿನ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಬಯಸಿದಂತೆಯೆ ಇದ್ದರೂ ಮನಸ್ಸಿಗೆ ಒಪ್ಪದ ಸಂಗತಿಗಳಲ್ಲಿ ಪ್ರವೃತ್ತರಾಗುವ ಪ್ರಸಂಗ ಬಂದೀತು. ಶತ್ರುವನ್ನು ಹಣಿಯಲು ನೀವು ಮಾಡಬಹುದಾದ ತಂತ್ರಗಳು ನಿಮಗೇ ಮುಳುವಾಗುವ ಸಂಭವವಿರುವುದರಿಂದ ಅನುಕೂಲ ಕಾಲ ಬರುವ ವರೆಗೆ ವಿಶೇಷ ಸಾಹಸಕ್ಕೆ ಹೋಗದಿರುವದೇ ಮೇಲು. ಪ್ರವಾಸ ಸುಖಕರವಾಗಲಾರದು. ಭೆಟ್ಟಿ ಪತ್ರವ್ಯವಹಾರ ವಾಸಿ. ಪುಷ್ಯದ ೪ ನೆ ಮತ್ತು ಆಶ್ಲೇಷೆಯ ಮೊದಲ ೩ ಚರಣಗಳು ಪ್ರತಿಯೊಂದು ಮಾತಿನಲ್ಲಿಯೂ ಆಲೋಚಿಸಿ ಕಾಲಿಡಬೇಕು. ತಾ. ೩೦, ೩೧, ೪ ಅನುಕೂಲ.

ಸಿಂಹ

ನಿಮಗೂ ಹೆಂಡತಿಗೂ ಚಿಲ್ಲರೆ ಅಸ್ವಸ್ಥತೆಯಿದ್ದರೂ ಮಕ್ಕಳಲ್ಲಿ ಕೆಲವರ ಉನ್ನತಿ ನಿಮ್ಮನ್ನು ಉಲ್ಹಾಸದಲ್ಲಿಡುವುದು. ಮೇಲಾಗಿ ಪ್ರಿಯಜನರ ಭೆಟ್ಟಿಯೂ ಆಹ್ಲಾದಕರವಾಗುವುದು. ವ್ಯಾಪಾರೋದ್ಯೋಗಗಳಲ್ಲಿ ಲಾಭ ಪ್ರತಿಷ್ಠೆಗಳು ಒಳಿತಾಗಿಯೆ ಇರುವವು. ಆದರೆ ಯಾವುದೋ ಒಂದು ಪ್ರಸಂಗದಿಂದ ತಲೆ ಬಿಸಿಯೇರುವಂತಿದೆ. ವ್ಯಾಜ್ಯ ವಿವಾದಗಳಲ್ಲಿ ಮುಂದಿನ ವಾರ ನಿಮಗೆ ಅಷ್ಟು ಅನುಕೂಲವಿಲ್ಲದ ಕಾರಣ ಈಗ ಒದಂಬಡಿಕೆಯ ಮಾತು ಬಂದರೆ ಮೊಂಡತನದಿಂದ ನಿರಾಕರಿಸಬೇಡಿರಿ. ಪ್ರವಾಸ ದೇಶ. ಭೆಟ್ಟಿ ಪತ್ರವ್ಯವಹಾರಗಳು ಸಫಲವಾದಾವು. ಮಘೆಯ ೪ ನೆ ಮತ್ತು ಪೂರ್ವೆಯ ಮೊದಲ ೩ ಚರಣಗಳಿಗೆ ತೊಂದರೆ ತೆಗೆದುಕೊಳ್ಳದೆ ಕಾರ್ಯ ಸಾಧನೆಯಾಗಲಾರದು. ತಾ. ೨೯, ೧, ೨, ೩ ಅನುಕೂಲ.

ಕನ್ಯಾ

ಈ ವಾರ ಸ್ವಂತದ ಆರೋಗ್ಯ ಚನ್ನಾಗಿರುವದಾದರೂ ಮಕ್ಕಳ ಪ್ರಕೃತಿಯ ಕಡೆ ಮಾತ್ರವಲ್ಲದೆ ಅವರ ವರ್ತನೆಯ ಬಗ್ಗೆಯೂ ನೀವು ತುಂಬ ಲಕ್ಷ್ಯವಿಡಬೇಕಾಗುವದು. ಉಳಿದ ಬಾಬುಗಳಲ್ಲಿ ಪ್ರಾಪಂಚಿಕ ಸುಖಕ್ಕೆ ಕೊರತೆಯಿಲ್ಲ. ಉದ್ಯೋಗದಲ್ಲಿಪ್ರತಿಷ್ಠೆಯೂ ಲಾಭವೂ ಒಳಿತಾಗಿದ್ದರೂ ಉತ್ಪನ್ನಕ್ಕಿಂತ ಖರ್ಚು ಹೆಚ್ಚು ಮಾಡುವವನು ಪೇಚಿನಲ್ಲಿ ಬೀಳಲೇಬೇಕಾಗುವದೆಂಬ ಅರ್ಥಶಾಸ್ತ್ರದ ನಿಯಮವನ್ನು ನಿಮ್ಮ ನೆನಪಿಗೆ ತಂದು ಕೊಡಬಯಸುತ್ತೇವೆ. ವ್ಯಾಜ್ಯ ವಿವಾದ ಮೊದಲಾದ ಸಂಗತಿಗಳಲ್ಲಿ ನೀವು ಹೆಚ್ಚು ಹಿಂದಿಡಬೇಕಾದೀತು. ಮಿತ್ರಸುಖ ಉತ್ತಮ. ಸ್ತ್ರೀರಾಸ್ತಿಯಲ್ಲಿ ಹೆಚ್ಚಳ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೨೯, ೩೦, ೩೧, ೪ ಅನುಕೂಲ.

ತುಲಾ

ಸ್ವಂತ ಪ್ರಕೃತಿಯೇ ವಿಶೇಷ ಚಿಂತಾಜನಕವಾದೀತು. ಮೇಲಾಗಿ ಹೆಂಡತಿಯ ಆರೋಗ್ಯವೂ ಅಷ್ಟು ಸರಿಯಾಗಿರದು. ಮಕ್ಕಳು ಅವಿಧೇಯರಾಗಿ ವರ್ತಿಸದಂತೆ ಸ್ವಲ್ಪ ನಿಷ್ಠುರರಾಗಿ ವರ್ತಿಸಿರಿ. ಉದ್ಯೋಗದಲ್ಲಿ ಹದಿನೆಂಟು ಅಡಚಣಿಗಳುದ್ಭವಿಸಬಹುದಾದರೂ ಕೊನೆಗೆ ಶ್ರೇಯಸ್ಕರವಾಗಿಯೇ ಪರಿಣಮಿಸುವವು. ತುಂಬ ಲಾಭವೂ ಗೌರವವೂ ದೊರಕುವವು. ವ್ಯಾಜ್ಯ ವಿವಾದಗಳಲ್ಲಿ ನಿಮಗೆ ತುಂಬ ಯಶ. ವೆಚ್ಚ ಬಹಳವಾದರೂ ಕೆಲಸ ಕೈಗೂಡುವದು. ಮಿತ್ರರು ಮಾತ್ರ ಅಧ್ವಾನಕ್ಕಿಳಿವರು. ಭೆಟ್ಟಿ ಯಶಸ್ವಿಯಾದರೂ ಪ್ರವಾಸಪತ್ರವ್ಯವಹಾರ ಅಷ್ಟಕ್ಕಷ್ಟೆ. ಚಿತ್ರೆಯ ೪ ನೆ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ಅನಿಷ್ಟ ಫಲಗಳ ಬಾಧೆ ಕಡಿಮೆ. ತಾ. ೨೯, ೩೦, ೩೧, ೧ ಅನುಕೂಲ.

ವೃಶ್ಚಿಕ

ನಿಮ್ಮಿಬ್ಬರ ಪ್ರಕೃತಿ ಸೌಖ್ಯವಾಗಿದ್ದರೂ ಮಕ್ಕಳು ಅಷ್ಟಿಷ್ಟು ಅಸ್ವಸ್ಥ ಬೀಳಬಹುದು. ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಲಾಭ ಸಾಮಾನ್ಯ. ಪ್ರತಿಷ್ಠೆ ಒಮ್ಮೊಮ್ಮೆ ಅತ್ಯುತ್ಕೃಷ್ಟ ಮತ್ತು ಇನ್ನೊಮ್ಮೊಮ್ಮೆ ತೀರ ನಿಕೃಷ್ಟಾವಸ್ಥೆಗೆ ಇಳಿಯುವ ಭಯ. ಸ್ತ್ರೀರಾಸ್ತಿಯನ್ನು ಸಂಗ್ರಹಿಸುವಿರಿ. ಪ್ರವಾಸ ಮತ್ತು ಭೆಟ್ಟಿ ನಿರರ್ಥಕ. ಆದರೆ ಪತ್ರವ್ಯವಹಾರ ಅನುಕೂಲ. ವ್ಯಾಜ್ಯ ಮೊದಲಾದ್ದರಲ್ಲಿ ನಿಮಗೇ ಗೆಲುವು. ಅನುರಾಧೆಯ ೪ ನೆ ಮತ್ತು ಜ್ಯೇಷ್ಠೆಯ ಮೊದಲ ೩ ಚರಣಗಳು ಸ್ವಲ್ಪ ಹೆಚ್ಚು ಪರಿಶ್ರಮ ವಹಿಸಬೇಕು. ತಾ. ೩೦, ೩೧, ೧, ೨ ಅನುಕೂಲ.

ಧನು

ಆರೋಗ್ಯ ಚನ್ನಾಗಿರುವದು. ಪ್ರಾಪಂಚಿಕ ಸುಖಕ್ಕೂ ಕಡಿಮೆಯಿಲ್ಲ. ಬಂಧುಬಳಗದವರಲ್ಲಿ ನಿಷ್ಠುರರಾಗುವ ಪ್ರಸಂಗವನ್ನು ಆದಷ್ಟು ತಡೆಯಿರಿ. ಧಾಡಸಗಳು ಮುರಿದು, ವಸತರು ಗಳು ಜಪ್ತು ಜೆಪ್ಪು ತುಸು ತೊಂದರೆಯಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಗೂ ಲಾಭಕ್ಕೂ ಕೊರತೆಯಿಲ್ಲ. ಮಿತ್ರಸುಖವೂ ಶತ್ರುಗಳಕಾಟವೂ ಹೆಚ್ಚಾಗಿಯೆ ಒದಗುವದು. ವ್ಯಾಜ್ಯ ವ್ಯಕ್ತಿಗಳಲ್ಲೊಬ್ಬನಿಗೆ ಬಹಳ ಕ್ಲೇಶವಾದೀತು. ಪ್ರವಾಸ ಸುಖಕರವಲ್ಲ. ಭೆಟ್ಟಿ ಪತ್ರವ್ಯವಹಾರ ಸಮಾಧಾನಕರ. ಮೂಲದ ೪ ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೯, ೨, ೩, ೪ ಅನುಕೂಲ.

ಮಕರ

ನಿಮ್ಮ ಸ್ವಂತ ಪ್ರಕೃತಿಯನ್ನು ಬಹಳ ಜೋಪಾನಮಾಡಿರಿ. ಹೆಂಡತಿ ಮಕ್ಕಳ ಆರೋಗ್ಯ ಚನ್ನಾಗಿರುವದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಯಥೇಷ್ಟ. ಖರ್ಚು ಬಹಳವಾದರೂ ಅದರಲ್ಲಿ ಅಡಕವಾದ ಉದ್ದೇಶ ಸಾಧಿಸುವಿರಿ. ಮೇಲಾಗಿ ಧರ್ಮಕಾರ್ಯದಲ್ಲಾಗುವ ವೆಚ್ಚವನ್ನು ಹಾನಿಯೆಂದು ತಿಳಿಯಬಾರದಲ್ಲ. ವ್ಯಾಜ್ಯ ವಿವಾದಗಳಲ್ಲಿ ತುಂಬ ಕಷ್ಟ ಪಡಬೇಕಾದರೂ ಕೊನೆಗೆ ನಿಮಗೇ ಜಯವೆಂದು ಖಾತ್ರಿಯಾಗುವದು. ಮಿತ್ರಸುಖ ಉತ್ತಮ. ಪ್ರವಾಸ ಪತ್ರವ್ಯವಹಾರ ಒಳಿತು. ಭೆಟ್ಟಿ ಅಷ್ಟು ಪ್ರಯೋಜನ ಬೀಳದು. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲು ೩ ಚರಣಗಳಿಗೆ ತೊಂದರೆಯಿಂದಲೇ ಯಶ. ತಾ. ೨೯, ೩೦, ೩೧, ೪ ಅನುಕೂಲ.

ಕುಂಭ

ನಿಮಗಿಂತ ನಿಮ್ಮ ಪತ್ನಿಯ ಆರೋಗ್ಯವೇ ಲೇಸು. ಮಕ್ಕಳ ವರ್ತನೆ ಸ್ವಚ್ಛಂದವಾಗುವದರಿಂದ ಮನಸ್ಸು ನೋಯುವದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಕಡಿಮೆಯಾಗುವ ಭಯ. ನೌಕರರು ಧಂಡೆಯತನಕ್ಕಿಂತ ಹೆಚ್ಚು ಜಾಗ್ರತೆಯಿಂದಿರಬೇಕು. ಅನಿರೀಕ್ಷಿತ ಲಾಭ ದೊರಕುವ ಸಂಭವವುಂಟು. ಪ್ರವಾಸ ತೊಂದರೆಯದು. ಭೆಟ್ಟಿ ಪತ್ರವ್ಯವಹಾರ ವಾಸಿ. ಧನಿಷ್ಠೆಯ ೪ ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೯, ೧, ೨ ಅನುಕೂಲ.

ಮೀನ

ಸ್ವಂತ ಪ್ರಕೃತಿ ಉತ್ತಮ. ಮಕ್ಕಳಲ್ಲಿ ಒಬ್ಬೊಬ್ಬರಿಗೆ ಸ್ವಲ್ಪ ಕ್ಲೇಶವಾಗಬಹುದಾದರೂ ಇತರ ವಿಚಾರಗಳಲ್ಲಿ ಪ್ರಾಪಂಚಿಕ ಸುಖಕ್ಕೆ ಕುಂದಿಲ್ಲ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಧಾರಾಳವಾಗಿ ಬಂದರೂ ಖರ್ಚು ಒಂದಕ್ಕೆ ನಾಲ್ಕರಷ್ಟು. ವ್ಯಾಜ್ಯ ಮೊದಲಾದ್ದರಲ್ಲಿ ತುಂಬ ಯಶ. ಮೇಲಾಗಿ ಶತ್ರುವಿಗೆ ಹೊರಹೊರಗೇ ಬಹಳ ಹಾನಿಯಾಗುವ ಸಂಭವವಿದೆ. ಮಿತ್ರರಲ್ಲಿ ಮಾತ್ರ ವಿರೋಧ ಕಟ್ಟಿಕೊಳ್ಳುವಿರಿ. ಪ್ರವಾಸಾದಿ ಕಾರ್ಯಗಳು ಅತ್ಯುತ್ತಮ. ಉತ್ತರಾಭಾದ್ರೆಯ ೪ ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತೊಂದರೆಯಿಲ್ಲದೆ ಇಷ್ಟಸಿದ್ಧಿಯಿಲ್ಲ. ತಾ. ೩೦, ೩೧, ೧, ೨ ಅನುಕೂಲ.

ಗಾಝೀಪುರ (ಯುಕ್ತಪ್ರಾಂತ) ದ ಸುಲ್ತಾನ ಸಿಂಗ ಮತ್ತು ಮುರಾಬುದ್ದೀನರೆಂಬ ಇಬ್ಬರು ಪೋಲೀಸರನ್ನು ಕಳ್ಳತನಕ್ಕಾಗಿ ಬಂಧಿಸಲಾಗಿದೆ. ಅವರು ಬಾಗ ಭಟಿಯಾರಿ ಎಂಬಲ್ಲಿ ನಿರಾಶ್ರಿತನೊಬ್ಬನ ಮನೆಯಿಂದ ೧೦ ಸಾವಿರ ರೂಪಾಯಿ ಬೆಲೆಯ ವಸ್ತು, ಒಡವೆಗಳನ್ನು ಅಪಹರಿಸಿದ್ದರಂತೆ.

—ನ್ಯಾಶನಲ್ ಹೆರಾಲ್ಡ್

ಉಪನ್ಯಾಸ ಸಮ್ರಾಟ ಪ್ರೇಮಚಂದ

(೫ ನೆಯ ಪುಟದಿಂದ)

ವಲ್ಲಿ ಉಚಿತ ಪ್ರೇಮವಿಲ್ಲದ ವಿವಾಹದಿಂದಾಗುವ ಅನರ್ಥಪರಂಪರೆಗಳನ್ನು ಕಾಣಬಹುದು. "ಕರ್ಮಭೂಮಿ"ಯಲ್ಲಿ ಶಿಕ್ಷಾಸಂಸ್ಥೆಗಳ ಅರ್ಥ ವ್ಯವಸಾಯ ನೀತಿ, ನಗರಸಭೆಯ ಕಾರ್ಯಭಾರಿಗಳ ಸ್ವಾರ್ಥಪರತೆ, ಶೇಟ-ಸಾಹುಕಾರರ ಧನಾರ್ಜನೆಯ ಹಿನ್ನೆಲೆಯಲ್ಲಿನ ಅತ್ಯಾಚಾರ, ಮಠಾಧೀಶರ ವಿಲಾಸಪೂರ್ಣ ಜೀವನ ಮತ್ತು ರಾಜಕರ್ಮಚಾರಿಗಳ ಸ್ವೇಚ್ಛಾಚಾರ ಮೊದಲಾದವುಗಳನ್ನೂ ಚಿತ್ರಿಸಿದ್ದಾರೆ. "ಗೋದಾನ" ಅವರ ಅಂತ್ಯದ ಕೃತಿಯೆಂದು ಕಾಣುತ್ತದೆ. ಕಾರಣ ಅದರಲ್ಲಿ ಕೆಲವೆಡೆ ಕ್ರೋಧ, ವೈರಾಗ್ಯಾದಿಗಳು ಸಿಗುವವು.

ಅವರ ಸಾಹಿತ್ಯದ ತಿರುಳು

ಅಂತೂ ಸಮಾಜದ ಆಡಂಬರಪೂರ್ಣ ಸಾಮಾಜಿಕ ಆಚಾರಗಳನ್ನು ನಿರ್ನಾಮಗೊಳಿಸಿ, ವ್ಯಕ್ತಿಗಳ ಸದಾಚಾರಗಳನ್ನು ಸ್ಥಾಪಿಸುವುದೇ ಪ್ರೇಮಚಂದರ ಸಾಹಿತ್ಯದ ಮೂಲ ಮಂತ್ರ. ಭಾರತೀಯ ಸಂಸ್ಕೃತಿಯ ಪ್ರತಿಪಾದನೆಯೊಡನೆ ಅದರ ಮಹತ್ವಾದರ್ಶಗಳನ್ನು ಸಂಸ್ಥಾಪಿಸುವುದೇ ಅವರ ಗುರಿ. ಸಂಸ್ಕೃತಿಯ ಔನ್ನತ್ಯವನ್ನು ಕೈಗೊಂಡಾಗಲೇ ಸಮಾಜದ ಉದ್ಧಾರವೆಂದು ಅವರ ಸಿದ್ಧಾಂತ. ಪ್ರೇಮಚಂದರ ಕೃತಿ ಸಕಲ ಜನಾದರಣೀಯವಾಗಲು ಅವರಿಗಿರುವ ಆಳವಾದ ಸಾಂಸಾರಿಕ ಅನುಭವ ನೆಕಾರಣ. ಪ್ರತಿಯೊಂದು ವಿಧದ ಜನತೆಯಲ್ಲೂ ಅವರಿಗಿರುವ ಪರಿಜ್ಞಾನ ಅಪಾರ; ಅದರಲ್ಲೂ ಗ್ರಾಮ ಮತ್ತು ಗ್ರಾಮೀಣರ ಕುರಿತು ಅವರ ಚಿತ್ರಚಿತ್ರಣದಲ್ಲಿನ ಜಾಣ್ಮೆಯಲ್ಲಿ ಅವರ ಪ್ರತಿಭೆ ಉದ್ದೀಪಿತವಾಗಿದೆ. ತಾವೂ ಗ್ರಾಮೀಣರಾಗಿದ್ದುದು ಮಾತ್ರವಲ್ಲದೆ ಮಾನವರಾದುದರಿಂದ ಮಾನವತೆಯ ಅತ್ಯಭ್ಯಾಸರಾದ ಗ್ರಾಮೀಣರ ಬಗ್ಗೆ ಅವರು ಸಂಪೂರ್ಣ ಸಹಾಯವನ್ನೆಸಗಿದ್ದಾರೆ. ನಿಮ್ನವರ್ಗ ಮತ್ತು ಮಧ್ಯಮ ವರ್ಗದವರ ಚರಿತ್ರ ಚಿತ್ರಣದಲ್ಲೂ ಅವರು ಸಾಫಲ್ಯವನ್ನು ಹೊಂದಿದ್ದಾರೆ.

ಕೇವಲ ಓದುಗರನ್ನು ಸಂತೋಷಿಸುವುದೇ ಪ್ರೇಮಚಂದರ ಗುರಿಯಲ್ಲ. ನಗಿಸುವುದು ಮಾತ್ರವಾದರೆ ಅದು ವಿದೂಷಕನ ಕೆಲಸ. ಸಾಹಿತಿಯ ಸ್ಥಾನ ಇದಕ್ಕಿಂತ ಬಹು ಮೇಲ್ಪಟ್ಟದ್ದು. ಅತ ನಮ್ಮ ಪಥಪ್ರದರ್ಶಕ. ಮನುಷ್ಯತ್ವವನ್ನು ಜಾಗ್ರತಗೊಳಿಸಲು ಸುಪ್ತ ಚೇತನಕ್ಕೆ ಚೈತನ್ಯವನ್ನೀಯಲು ದಿವ್ಯಶಕ್ತಿ ಅವನಿಗಿರಬೇಕು. ಅಲ್ಲದೆ ನಮ್ಮೊಳಗಿನ ಸದ್ಭಾವನೆಗಳನ್ನು ಅಂಕುರಿಸಿ ಸತ್ಪ್ರವೃತ್ತಿಯತ್ತ ತಿರುಗಿಸಬೇಕು. ಸಂಕುಚಿತ ದೃಷ್ಟಿಯನ್ನು ವೈಶಾಲ್ಯಕ್ಕೆ ಪರಿವರ್ತಿಸುವ ಜಾಣ್ಮೆಯನ್ನು ಅವನರಿತಿರಬೇಕು. ಇದೇ ಸಾಹಿತಿಯ ಉದ್ದೇಶ. ಈ ಉದ್ದೇಶವನ್ನು ಪ್ರೇಮಚಂದರು ಎಲ್ಲೆಡೆಯಲ್ಲೂ ಸಾಧಿಸಿದ್ದಾರೆ. ಶರಚ್ಚಂದ್ರ, ರವೀಂದ್ರರೂ ಉದ್ದಾಮ ವ್ಯಕ್ತಿಗಳು ಸಹಜ. ಆದರೆ ಪ್ರೇಮಚಂದರ ಮಹತ್ವ ಅನ್ಯ ರೀತಿಯದು. ಅವನತಿಯ ಕಾಲದಲ್ಲಿ ಪ್ರೇಮ · ಪ್ರೇಮವೆಂದು ಶೃಂಗಾರರಸ ಪ್ರಧಾನ ಸಾಹಿತ್ಯವನ್ನೇ ನಿರ್ಮಿಸುವುದು, ಸೌಂದರ್ಯೋಪಾಸಕನಾಗುವುದು ಪ್ರೇಮಚಂದರೊಪ್ಪದ ವಿಚಾರ.

ಅಂತೂ ಪ್ರೇಮಚಂದರ ಸಾಹಿತ್ಯ ಕಾಲಾತೀತ, ದೇಶಾತೀತ. ಇಷ್ಟೇ ಹೇಳಿ ಅವರ ಕೃತಿ ಎಷ್ಟು ಸಾಧ್ಯವಾದೀತೋ ಅಷ್ಟು ಬೇಗ ನಮ್ಮ ಕನ್ನಡಕ್ಕಿಳಿಸುವಾದವಾಗಬೇಕು, ನಮ್ಮ ಕನ್ನಡ ಜನ ಅದರ ಸವಿಯನ್ನು ಸವಿಯಬೇಕೆಂದೇ ನನ್ನಾಸೆ.

ಹೊಸ ಪುಸ್ತಕಗಳು

"ಚತುರ" ಆದರೂ ಅಪರಿಪಕ್ವ ಕಾದಂಬರಿ

ಕೊನೆಯ ದಾರಿ

ಲೇಖಕರು: ಶ್ರೀ ಕೃಷ್ಣಮೂರ್ತಿ ಪುರಾಣಿಕ, ಪ್ರಕಾಶಕರು: ಉಷಾ ಸಾಹಿತ್ಯ ಮಾಲೆ, ಮೈಸೂರು ೨೮೩ ಪುಟ, ರೂ. ೨।-

ಇದೊಂದು ಆದರ್ಶವಾದಿ "ಭ್ರಾಂತಿ ಯಾಸ" ಕಾದಂಬರಿಯೆಂದು ಹೇಳಿದರೆ ತಪ್ಪಾಗದು. ಮನುಷ್ಯ ಹೃದಯದ ಅಂತರಿಕ ಒಳ್ಳೆಯತನದಲ್ಲಿ ಗಾಢ ವಿಶ್ವಾಸವಿಟ್ಟು ಹೊರಟ ಯುವಕನೊಬ್ಬನ ಸಾಹಸಗಳೇ ಈ ಕಥೆಯ ವಸ್ತು.

ಒಂದಿಷ್ಟು ಪ್ರೇಮ, ಒಂದಿಷ್ಟು ಸಂಶಯ, ಒಂದಿಷ್ಟು ಆದರ್ಶವಾದ ಇವನ್ನೆಲ್ಲ ಬೆರಸಿ ಒಂದು ಕುತೂಹಲಜನಕವಾದ ಕಾದಂಬರಿ ಹೆಣೆಯಲು ಲೇಖಕರು ಪ್ರಯತ್ನಿಸಿದ್ದಾರೆ. ಆದರೆ ಅವರ ಕತೆ ಅರ್ಧದ ವರೆಗೂ ಒಳ್ಳೆ ಸ್ವಾರಸ್ಯವಾಗಿಯೇ ಓಡುತ್ತದೆ. ಮುಂದೆ ಭ್ರಾಂತಿವಿಲಾಸ ಪ್ರಾರಂಭವಾಗುತ್ತದೆ. ಓದುಗರನ್ನು ಕೊನೆಯ ವರೆಗೂ ಸಂದಿಗ್ಧಾವಸ್ಥೆಯಲ್ಲಿಡುವ ಸಲುವಾಗಿ ಅವರು ಜೋಡಿಸಿದ ಸನ್ನಿವೇಶಗಳು ತುಂಬ ಜಾಣತನದವಾಗಿರಬಹುದು, ಆದರೆ ಓದುಗರಲ್ಲಿ ತೀರ "ಭೋಳೇ" ಸ್ವಭಾವದವರು ಹೊರತು ಬೇರಾರೂ ಈ ಸನ್ನಿವೇಶಗಳ ಪರಿಣತಿಯಿಂದ ಸಂತುಷ್ಟರಾಗಲಾರರು. ಫಲವಾಗಿ ಹೀಗೆ ಕೊನೆಗೊಳ್ಳುವದು ಅಸಾಧ್ಯ ಎಂಬ ಭಾವನೆಯುಂಟಾಗುತ್ತದೆ. ಬೇಕೆಂದೇ ಲೇಖಕರು ಕತೆಯನ್ನು ಹೀಗೆ ಕೊನೆಗೊಳಿಸಿದ್ದಾರೆಂದು ಅಭಿಪ್ರಾಯವುಂಟಾಗುವಂತಾಗುತ್ತದೆ. ಇದಕ್ಕೆಲ್ಲಾ ಅವರು ಕುತೂಹಲ ಹೆಚ್ಚಿಸುವ ಹವ್ಯಾಸದಿಂದ "ರೊಮಾಂಟಿಕ್" ಕಾದಂಬರಿಗಳ ತಂತ್ರವನ್ನು ಉಪಯೋಗಿಸುವಲ್ಲಿ ಅತಿರೇಕ ಆಸ್ಥೆ ತೋರಿಸಿದ್ದೇ ಕಾರಣವೆನ್ನಬಹುದು.

ಕಥೆಯ ಸ್ಥೂಲ ರೂಪ ಹೀಗಿದೆ: ಅಕ್ಕನ ಪಾಲನೆಯಲ್ಲಿ ಬೆಳೆದು ಬಂದ ಬಡತಬ್ಬಲಿ ವಿದ್ಯಾರ್ಥಿ ಗೋಪಾಲ ಹೈಸ್ಕೂಲು ಮುಗಿಸಿ, ಕೈಯಲ್ಲಿ ಕಾಸಿಲ್ಲದಿದ್ದರೂ ದೂರದ ಧಾರವಾಡಕ್ಕೆ ಕಾಲೇಜು ವಿದ್ಯಾಭ್ಯಾಸಕ್ಕೆ ಹೋಗುತ್ತಾನೆ. ಈ ಸಾಹಸಕ್ಕೆ ಅಕ್ಕನ ಬೆಂಬಲವಿಲ್ಲದಿದ್ದರೂ ಅಕ್ಕನ ಮಗಳ (ಪದ್ಮಾ) ಬೆಂಬಲವಿರುತ್ತದೆ. ಅವಳು ಅವನಿಗಾಗಿಯೇ ಮೀಸಲಿಟ್ಟ ಹೆಣ್ಣು. ಅಲ್ಲದೆ ಅವನೊಡನೆ ವಿಶೇಷ ಹೊಕ್ಕು ಬಳಕೆಯುಳ್ಳ ಪಾಡುನ ಮಾಸ್ತರರೂ ಬೆಂಬಲಕೊಡುವರು. ಧಾರವಾಡದಲ್ಲಿ ಪುಕ್ಕಟೆ ವಸತಿಯನ್ನೂ ಊಟವನ್ನೂ ಸಂಪಾದಿಸಲು ಸಮರ್ಥನಾಗುತ್ತಾನೆ. ಅವನು ಆದರ್ಶವಾದಿ. ಮನುಷ್ಯನ ಅಂತರಿಕ ಸಹೃದಯತೆಯ ಬಗ್ಗೆ ಅಪಾರ ವಿಶ್ವಾಸವುಳ್ಳವ. ಅದರ ಬಲದಿಂದಲೇ ಅವನು ತನ್ನ ವಸತಿಗೃಹದ ಕೋಣೆಯ ಪಾಲುಗಾರ ಮಾಧವನನ್ನು ತಪ್ಪುದಾರಿಯಿಂದ ಪರಾವೃತ್ತಗೊಳಿಸಲು ಹೆಣಗುತ್ತಾನೆ. ಮಾಧವನ ತಂದೆ ಪೋಲೀಸ ಅಧಿಕಾರಿ. ಆ ಅಧಿಕಾರದ ದರ್ಪಸ್ವಭಾವ ಮನೆಯನ್ನೂ ವ್ಯಾಪಿಸಿ ಸಾಂಸಾರಿಕ ಸುಖವನ್ನು ಹಾಳುಗೆಡಹಿದ್ದರಿಂದ ಮಾಧವನಲ್ಲಿ ಒಂದು ಬಗೆಯ ವಿಕ್ಷಿಪ್ತತೆ, ನಿರ್ಲಕ್ಷ್ಯ ಉಂಟಾಗಿ, ದುರ್ವ್ಯಸನಗಳಿಗೆ ಬಲಿಬೀಳಹೊರಟಿರುತ್ತಾನೆ. ಮರಿಗಾಂಧಿಯೆನಿಸುವ ಗೋಪಾಲ ಅವನನ್ನು ಸಮಾಧಾನಗೊಳಿಸಿ ತಂದೆ ಅಂತರಂಗದಲ್ಲಿ ದುಷ್ಟನಲ್ಲ, ಅವನನ್ನು ಯೋಗ್ಯರೀತಿಯಲ್ಲಿ ತಿದ್ದಿದರೆ ಸರಿಹೋಗುವದೆಂದು ಉಪದೇಶಿಸುತ್ತಿರುತ್ತಾನೆ. ಅವನನ್ನು ತನ್ನ ಮನೆಗೆ ಕರೆತಂದು ಸಹಾನುಭೂತಿಪರ ಸಾಂಸಾರಿಕ ಜೀವನದ ಸವಿಯನ್ನು ತೋರಿಸುತ್ತಾನೆ. ಅಲ್ಲಿಂದ "ಸಂಶಯ ಕಲ್ಲೋಲ" ಪ್ರಾರಂಭವಾಗುತ್ತದೆ. ಮಾಧವ ಗೋಪಾಲನ ಭಾವೀ ಪತ್ನಿ ಪದ್ಮಳಿಂದ ತುಂಬ ಆಕೃಷ್ಟನಾಗುತ್ತಾನೆ. ಗೋಪಾಲನ ಮುಂದೆಯೆ ಅವಳನ್ನು ನಾನಾ ವಿಧವಾಗಿ ಹೊಗಳುವದೂ ಅವಳ ನೆರವಿಲ್ಲದೆ ತನ್ನ ಜೀವನವೇ ಸಾಗದೆಂಬರ್ಥದ ಮಾತುಗಳನ್ನು ಹೇಳುವದೂ ಪ್ರಾರಂಭವಾಗುತ್ತದೆ. ಅತ್ತ ಪದ್ಮಳಾದರೂ ಕರ್ಣಾರ್ಜುನರಲ್ಲಿ ಯಾರನ್ನಾರಿಸಬೇಕೆಂದರಿಯದ ದ್ರೌಪದಿಯಂತೆ ಮಾಧವ ಗೋಪಾಲರಲ್ಲಿ ಯಾರು ಹೆಚ್ಚು ಯಾರು ಕಡಿಮೆಯೆಂದು ತನ್ನ ಹೃದಯದಲ್ಲಿಯೇ ತೂಗಿ ನಿರ್ಧರಿಸಲಾರದೆ ಹೋಗುತ್ತಾಳೆಂದು ಲೇಖಕರೇ ಹೇಳುತ್ತಾರೆ. ಹೀಗಿದ್ದೂ ಕೊನೆಯಲ್ಲಿ ಮಾಧವನು ಅವಳನ್ನು ಭಗಿನೀ ಪ್ರೇಮದಿಂದಲೇ ಕಾಣುತಿದ್ದ ಮತ್ತು ಅವಳಾದರೂ ಗೋಪಾಲನನ್ನಲ್ಲದೆ ಬೇರಾರನ್ನೂ ವರಿಸಲು ಒಪ್ಪಲಿಲ್ಲ ಎಂದು ಹೇಳುವದು ಓದುಗರ ನಂಬಿಕೆಯ ಮೇಲೆ ತುಂಬ ಭಾರಹಾಕುತ್ತದೆನ್ನದೆ ವಿಧಿಯಿಲ್ಲ. ಆ ನಡುವೆ ಆಗಿ ಹೋದ ಘಟನೆಗಳನ್ನು ನೋಡಿರಿ: ಮಾಧವನ ತಂದೆ ಧಾರವಾಡಕ್ಕೆ ಬಂದು ಮಗನನ್ನು ಮದುವೆಗಾಗಿ ಒತ್ತಾಯ ಪಡಿಸುತ್ತಾರೆ. ಅವನು ಅವರ ಒತ್ತಾಯವನ್ನು ಶುದ್ಧ ಒರಟುತನದಿಂದ ನಿರಾಕರಿಸಿ ಬಿಡುತ್ತಾನೆ. ಮಗನ ಧೃಷ್ಟತನದಿಂದ ಬೇಸತ್ತು ತಂದೆ ಹೊರಟು ಹೋಗುತ್ತಾರೆ. ಮಾಧವ ಪದ್ಮಳನ್ನೇ ಹಂಬಲಿಸುತಿರುತ್ತಾನೆ. ಅದು ಗೋಪಾಲನಿಗೆ ಆಗಾಗ್ಗೆ ಅಸಹ್ಯವೂ ಎನಿಸುತ್ತದೆ. ಮುಂದೆ ಮಾಧವನ ತಂದ ಮೋಹನದಾಯರಿಗೆ ತೀಕ್ಷ್ಣವಾದ ವಿಷಮಜ್ವರ ಬಂದ ಸುದ್ದಿಬಂದಾಗ ಗೋಪಾಲನೂ ತನ್ನ ಪರೀಕ್ಷೆಯನ್ನು ಲೆಕ್ಕಿಸದೆ ಮಾಧವನ ಮನೆಗೆ ಅವನೊಡನೆ ಹೋಗಿ ಅವನಿಂದ ತಂದೆಯ ಶುಶ್ರೂಷೆ ಮಾಡಿಸಿ ಆ ಒರಟ ತಂದೆಯ ಮನಃಪರಿವರ್ತನೆಗೆ ಕಾರಣನಾಗುತ್ತಾನೆ. ತಂದೆಗೆ ಸೌಖ್ಯವಾದೊಡನೆ ಮತ್ತೆ ಮಾಧವನ ಬಾಯಲ್ಲಿ ಪದ್ಮಳ ಮಂತ್ರ. ಇದನ್ನು ನೋಡಿ ಗೋಪಾಲ ತನ ಗೆಳೆಯನನ್ನು ಸುಖಿಯಾಗಿ ಮಾಡಬೇಕಾದರೆ ತನ್ನ ಭಾವೀ ವಧುವನ್ನು ಅವನಿಗೆ ಮದುವೆ ಮಾಡಿ ಕೊಡಿಸದೆ ಹಾದಿಯಿಲ್ಲೆಂದು ಬಗೆದು ಅವನ ತಂದೆತಾಯಿಗಳ ಅಪ್ಪಣೆ ಪಡೆಯುತ್ತಾನೆ. ತಾನು ಪಾಡುನ ಮಾಸ್ತರರ (ಅವರು ಅಪ್ಪರಲ್ಲೇ ಪದ್ಮಳೊಡನೆ ಸಲುಗೆಯಿಂದಿದ್ದ ಸಂಬಂಧದಲ್ಲಿ ಸಮಾಜದ ಪಿಶುನರ ಬಾಯಿಂದ ಟೀಕೆಗೊಳಗಾಗಿ ಬೇಸತ್ತು ಆಜನ್ಮ ಬ್ರಹ್ಮಚರ್ಯದ ಪಣ ತೊಟ್ಟಿರುತ್ತಾರೆ.) ದೇಶಸೇವಕ ಬ್ರಹ್ಮಚಾರಿ ಕೂಟಕ್ಕೆ ಸೇರುವುದಾಗಿ ನಿರ್ಧರಿಸುತ್ತಾನೆ. ಇದೇ ಅವನ "ಕೊನೆಯ ದಾರಿ". ಈ ವ್ಯವಸ್ಥೆಗೆ ಮಾಧವನದೂ ಸಮ್ಮತಿಯಿತ್ತೆಂದು ಗೋಪಾಲನಂತೆ ಓದುಗರೂ ನಂಬುವಂತೆ ಲೇಖಕರು ಸನ್ನಿವೇಶ ರಚನೆ ಮಾಡುತ್ತಾರೆ. ಆದರೆ ಊರಿಗೆ ಹೋಗಿ ಅಕ್ಕನನ್ನೂ ಪದ್ಮಳನ್ನೂ ಅದಕ್ಕೆ ಒಪ್ಪುವಂತೆ ಮಾಡಲು ಗೋಪಾಲನು ಸಮರ್ಥನಾಗುವದಿಲ್ಲ. ಅತ್ತ ಮಾಧವನಿಗೆ ತಂದೆತಾಯಿಗಳಿಂದ ಈ ವಿವಾಹ ವ್ಯವಸ್ಥೆಯ ಸುದ್ದಿ ಗೊತ್ತಾಗಲು ಅವನು ಗಾಬರಿಗೊಂಡು ಗೋಪಾಲನ ಮನೆಗೆ ಧಾವಿಸಿ ಪದ್ಮಳೊಡನೆ ತನ್ನ ಮದುವೆ ಮಾಡುವ ಗೋಪಾಲನ ವಿಚಾರ ಅವನಿಗೆ ಮೊದಲು ಗೊತ್ತಿದ್ದಿಲ್ಲವೆಂದೂ ತನ್ನದು ಪದ್ಮಳ ಮೇಲೆ ಕೇವಲ ಭಗಿನೀಪ್ರೇಮವೆಂದೂ ಸಾರಿ ಗೋಪಾಲನನ್ನು ಮಹಾ ಸ್ವಾರ್ಥತ್ಯಾಗದಿಂದ ತಪ್ಪಿಸುತ್ತಾನೆ ಎಂಬಲ್ಲಿಗೆ ಕಥೆ ಮುಗಿಯುತ್ತದೆ.

ಮುಖ್ಯ ಪಾತ್ರಗಳಲ್ಲಿ ಗೋಪಾಲನ ಚರಿತ್ರ ಚನ್ನಾಗಿಯೆ ಮೂಡಿದೆ. ಯೌವನಸಹಜವಾದ ಅನನುಭವದಿಂದ ಒಂದಿಷ್ಟು ಉಪಹಾಸ ಜನಕವೆನಿಸಿದರೂ ಅವನ ಧೀರೋದಾತ್ತ ಚರಿತ್ರ ಸಹಾನುಭೂತಿಯನ್ನುಂಟುಮಾಡುವಂತಿದೆ. ಮಾಧವನ ಪಾತ್ರವೂ ಚನ್ನಾಗಿ ಮೂಡಿದ್ದರೂ ಪದ್ಮಳನ್ನು ಕುರಿತ ಅವನ ನಿಜ ಭಾವನೆಗಳು ಕೊನೆತನಕವೂ ಬೆಳಕಿಗೆ ಬಾರದಿರುವದರಿಂದ ಅದು ಬಂದಾಗಲೂ ಸಮಾಧಾನಕಾರಕವಾಗಿರುವದಿಲ್ಲ. ಪದ್ಮಳು ನಿಶ್ಚಿತಬುದ್ಧಿಯ ಹುಡುಗಿಯೆಂದು ತೋರಿದರೂ ಅವಳ ದ್ವೈಪದೀಭಾವಕ್ಕೆ "ಸ್ತ್ರಿಯಶ್ಚರಿತ್ರಂ . . . ದೇವೋ ನ ಜಾನಾತಿ" ಎಂದಲ್ಲದೆ ಬೇರೆ ಅರ್ಥಕಟ್ಟುವದು ಕಠಿನವಾಗುತ್ತದೆ. ದುರಂತ ಕಥೆಗೆ ಬೇಕಾದ ಎಲ್ಲ ಸಲಕರಣೆಗಳನ್ನು ಹೊಂದಿಸಿ ಅದನ್ನು ಸುಖಾಂತವಾಗಿ ಮುಗಿಸಹೋಗಿ ಅವರಿಬ್ಬರ ಪಾತ್ರಗಳು ಕೆಟ್ಟಿವೆ.

ಪುಸ್ತಕದ ಉದ್ದಕ್ಕೂ ಅಲ್ಲಲ್ಲಿ ಬರುವ ಸುಂದರ ವಾಕ್ಯಗಳು ಬರೆದಿಟ್ಟುಕೊಳ್ಳುವಂತಿವೆ. ಆದರೆ ಕೆಲ ಮೋಹದ ಶಬ್ದಗಳು ಮತ್ತೆ ಮತ್ತೆ ಬಂದು ಅರಿಸದ ಅಕ್ಕಿಯ ಅನ್ನವನ್ನು ಉಣ್ಣುವಾಗ [illegible]ವ ಹರಳುಗಳಂತೆ ಸವಿಗೆಡಿಸ[illegible]ಸ್ತಕದಲ್ಲಿ "ವಿಲಕ್ಷಣ"ವೆಂಬ[illegible]ರಿ ಬಂದಿರಬಹುದೆಂದು ಎಣಿಸಿ[illegible]ನಿಗೆ ಪ್ರಸ್ತುತ ವಿಮರ್ಶಕ ಪ್ರಯತ್ನವನ್ನು ಕೈಬಿಟ್ಟೆವು. ಇಲ್ಲಿ ಯಾರಿಗೂ "ವಿಲಕ್ಷಣ"ವಲ್ಲದ ಆನಂದವಾಗಲಿ, ದುಃಖವಾಗಲಿ, ಸಂಕಟವಾಗಲಿ ಆಗುವುದೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. "ಕಿಲಕಿಲನೆ" ಅಲ್ಲದೆ ಯಾರೂ ಯಾವಾಗಲೂ ನಗುವುದೇ ಇಲ್ಲ!

ಶ್ರೀ ಪುರಾಣಿಕರಲ್ಲಿ ಕತೆ ಹೆಣೆಯುವ ಚಾತುರ್ಯವಿದೆ. ಆದರೆ ಅವರು ಅದನ್ನು ತುಸು ಅತಿಯಾಗಿ ಉಪಯೋಗಿಸುತ್ತಾರೆ ಅಷ್ಟೆ.

ಹೊಸ ಪತ್ರಿಕೆಗಳು

ಪುಷ್ಪ:— ಉಡುಪಿಯಿಂದ ಹೊರಡುವ ಈ ಮಾಸಪತ್ರಿಕೆಯ ಅಗಸ್ಟ ತಿಂಗಳ (ಪ್ರಾರಂಭ) ಸಂಚಿಕೆ ಕೈಸೇರಿದೆ. ಸಂಪಾದಕರು: ಶ್ರೀ ಕೆ. ಪ್ರಭಾಕರರಾವ್. ಕ್ರೌನ್ ಅಷ್ಟಪತ್ರಾಕಾರದ ೪೪ ಪುಟ. ಬೆಲೆ ೨ ಆಣೆ ವಾರ್ಷಿಕ ರೂ. ೨।.— ಯುವಕ ಲೇಖಕರ ಅನೇಕ ಲೇಖನ ಕವಿತೆಗಳಿಂದೊಡಗೂಡಿದೆ.

ಕನ್ನಡ ಗುಡಿ:— ದಿಲ್ಲಿಯಿಂದ ಹೊರನಾಡ ಕನ್ನಡಿಗ ಸಂಘದವರಿಂದ ಹೊರಡಿಸಲ್ಪಡುತ್ತಿರುವ ತ್ರೈಮಾಸಿಕ ಪತ್ರಿಕೆಯ ಎರಡನೆ ಸಂಚಿಕೆ ನಮ್ಮ ಕೈಸೇರಿದೆ. ಹೊರನಾಡ ಕನ್ನಡಿಗರ ಸಂಘಟನೆಯನ್ನೆ ಧ್ಯೇಯವಾಗಿಟ್ಟುಕೊಂಡ ಈ ಪತ್ರಿಕೆಯಲ್ಲಿ ದಿವಾಕರ ರಂಗರಾಯರು, ಡಾ. ವಿ. ಕೆ. ಆರ್. ವಿ. ರಾಯರೇ ಮೊದಲಾದವರ ಪ್ರಬುದ್ಧ ಲೇಖನಗಳಿವೆ. ಸಂಪಾದಕರು: ಶ್ರೀ ವರದರಾಜ ಆದ್ಯ ಈ ಪ್ರಶಂಸನೀಯ ಪ್ರಯತ್ನಕ್ಕೆ ನಮ್ಮ ಶುಭಾಶಯಗಳು. ವಿಳಾಸ: ೨೩ ಜುಬಿಲಿಹಾಲ್, ದಿಲ್ಲಿ ಯುನಿವರ್ಸಿಟಿ, ದಿಲ್ಲಿ ೨

ಸಾಧನಾ:— ಹೈದರಾಬಾದದಿಂದ ಹೊರಡುವ ಕನ್ನಡ ವಾರ ಪತ್ರಿಕೆ. ಸಂಪಾದಕರು: ಶ್ರೀ ಆರ್. ಜಿ. ಜಾಗೀರದಾರ. ಪ್ರಕಾಶಕರು: ಶ್ರೀ ಜಿ. ಕೆ. ಬ್ರಾಹ್ಮೀಕಾಚಾರ್ಯ. ಬಿಡಿ ಪ್ರತಿ ೨ ಆಣೆ. ಹೈದರಾಬಾದ ಜನತೆಯ, ಮುಖ್ಯವಾಗಿ ಕನ್ನಡಿಗರ ಸಲುವಾಗಿ ದುಡಿಯ ಹೊರಟ ಈ ಪತ್ರಿಕೆಗೆ ನಮ್ಮ ಸ್ವಾಗತಗಳು.

ಪ್ರಗತಿ:— ಹುಬ್ಬಳ್ಳಿಯಿಂದ ಸ್ವಾತಂತ್ರ್ಯ ವರ್ಧಂತಿಯ ದಿವಸ ಹೊರಟ ವಾರಪತ್ರಿಕೆ. ಕ್ರೌನ್ ೧/೪ ಆಕಾರದ ೮ ಪುಟಗಳಿವೆ. ಬೆಲೆ ೧ ಆಣೆ. ಸಂಪಾದಕರು: ಶ್ರೀ ಚನ್ನವೀರ ಕಣವಿ, ಜಿ. ಎಸ್. ಕಮಗಾರ ಮತ್ತು [illegible] ತಿಟೋಳ. ವಿದ್ಯಾರ್ಥಿಗಳಲ್ಲಿಯೂ ಯುವಕರಲ್ಲಿಯೂ [illegible] ರಾಷ್ಟ್ರದಲ್ಲಿ [illegible] ಈ ಪತ್ರಿಕೆಯನ್ನು [illegible] ಸ್ವಾಗತಿಸುತ್ತೇವೆ. [illegible] "ವಾದ" ಗಳಿಂದ [illegible] ಯುವಕರಾಗಿರುವ ವಿದ್ಯಾರ್ಥಿಗಳಿಗೆ [illegible] ದಾರಿದೋರಲು ಇದು ಸಮರ್ಥವಾಗಲಿ.

ವಿಶೇಷ ಸಂಚಿಕೆಗಳು

ಕಥಾವಳಿ:— ಬೆಂಗಳೂರಿನಿಂದ ಕಳೆದ ಹನ್ನೆರಡು ವರ್ಷಗಳಿಂದ ಅಕರ್ಷಕವಾಗಿ ಹೊರಡುತಿರುವ ಈ ಮಾಸಪತ್ರಿಕೆಯು ಎಂದಿನಂತೆ ಈ ಬಾರಿಯೂ (ಜುಲೈ ೧೯೪೯) ವಾರ್ಷಿಕ ಸಂಚಿಕೆಯೊಂದನ್ನು ಹೊರಡಿಸಿದೆ. ನಾನಾ ರುಚಿಗಳಿಗೊಪ್ಪುವಂತೆ ಹಲ ಪ್ರಸಿದ್ಧ ಲೇಖಕರ ಲೇಖ, ಕತೆ, ಕವಿತೆ, ಚಿತ್ರಗಳನ್ನೊಳಗೊಂಡು ೩೮೦ ಪುಟಗಳಲ್ಲಿ ಹೊರಟ ಈ ಸಂಚಿಕೆ ಬೆಲೆ ಕೇವಲ ರೂ. ೧।- ಸಂಪಾದಕರು: ಓಲೇಟಿ [illegible] ಗುಪ್ತ.

ಬಸವೇಶ್ವರ ಹೈಸ್ಕೂಲಿನ (ಬಾಗಲಕೋಟೆ) ವಿಂಸೆಲಿನಿ [illegible]:— ನಾಯಕ ಸಂಪಾದಕರು: ಶ್ರೀ ಆರ್. ಬಿ ಬಬಲೇಶ್ವರ ಬಿ. ಎ., ಎಸ್. ಟಿ. ಸಿ. ಮೇಲ್ಕಂಡ ಶಾಲೆಯ ಕಾರ್ಯಕಲಾಪಗಳ ವರದಿಯಲ್ಲದೆ ವಿದ್ಯಾರ್ಥಿಗಳ ಇಂಗ್ಲೀಷ, ಕನ್ನಡ, ಹಿಂದಿ ಲೇಖನಗಳೂ ಇದರಲ್ಲಿವೆ. ವಿದ್ಯಾರ್ಥಿಗಳ ಲೇಖನಾಭಿರುಚಿಯನ್ನು ಹೆಚ್ಚಿಸುವ ಇಂಥ ಸಾಹಸ ಸ್ತುತ್ಯವೇ ಸರಿ.

ಕೋಟೇಶ್ವರ (ದ. ಕ.) ಬೋರ್ಡ್ ಪ್ರೌಢ ಪ್ರಾಥಮಿಕ ಶಾಲಾ ರಜತೋತ್ಸವ ಸ್ಮಾರಕ ಸಂಚಿಕೆ:— ೨೫ ವರ್ಷಗಳಿಂದ ವಿದ್ಯಾದಾನ ಮಾಡುತಿರುವ ಮೇಲ್ಕಂಡ ಸಂಸ್ಥೆ [illegible]ದಿನವೆಂದು ರಜತೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿತು. ಆ ಸಂದರ್ಭದಲ್ಲಿ ಹೊರಡಿಸಿದ ಈ ಪುಸ್ತಕದಲ್ಲಿ ಶಿವರಾಮ ಕಾರಂತ, ಜಿ. ಪಿ. ರಾಜರತ್ನಂ ಮೊದಲಾದ ಪ್ರಮುಖ ಲೇಖಕರ ಲೇಖನಗಳಿವೆ. ಸಂಸ್ಥೆ ಉತ್ತರೋತ್ತರಾಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ.

ಮೇಯರರ ಕಾರು ಮತ್ತು ಗೌರವ

ಮುಂಬಯಿ ನಗರಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಚಣ್ಯಾಭಾಯಿ ಪ. ಪಟೇಲರು ಬರೆಯುತ್ತಾರೆ:

"ಹರಿಜನದ ಜುಲೈ ೧೭, ೧೯೪೯ ರ (ಕರ್ಮವೀರ, ಜುಲೈ ೧೮) ಸಂಚಿಕೆಯಲ್ಲಿ "ಗೌರವ" ಎಂಬ ತಲೆಕಟ್ಟಿನ ಕೆಳಗೆ ನೀವು ಮುಂಬಯಿ ನಗರ ಸಭೆಯ ಮೇಲೆ ಮಾಡಿದ ಟೀಕೆಗಳಿಂದ ನಾನು ನೊಂದುಕೊಂಡಿದ್ದೇನೆ. ಅದು "ಟೈಮ್ಸ್ ಅಫ್ ಇಂಡಿಯಾ" ದಲ್ಲಿ ಬಂದ ಹರಕುಮುರುಕು ವರದಿಯ ಆಧಾರದ ಮೇಲೆ ಬರೆದುದಾಗಿದೆ-ನೀವು ಟೀಕಿಸುವ ಮೊದಲು ನನ್ನನ್ನು ವಿಚಾರಿಸಿದ್ದರೆ ಒಳಿತಾಗುತ್ತಿತ್ತು.

"ನನ್ನ ವಿವರಣೆ ಕೇಳಿರಿ. ಶ್ರೀ ಜಾಸೇಫ ಟೆಪ್ಪಿಪ್ಪರ ಹೆಸರಿನ ಉಲ್ಲೇಖ ಬಾಯತಪ್ಪಿ ಆಗಿದೆ. ೧೯೪೭ ರಲ್ಲಿ ಮೇಯರರಾಗಿ ಬಂದ ಡಾ. ಮೋಸೆಸರ ಹೆಸರಿನ ಬದಲಿಗೆ ಟೆಪ್ಪಿಸ್ಪರೆಂದು ಹೇಳಲ್ಪಟ್ಟಿತ್ತು. ಅದರಿಂದೀಚೆಗೆ ಮೂರು ನಾಲ್ಕು ಬಾರಿ ಮೋಟಾರು ಕಾರುಗಳನ್ನು ಹೊಸವಾಗಿ ಕೊಳ್ಳಲಾಗಿದೆ.

"ಪ್ರತಿಯೊಬ್ಬ ಮೇಯರನಿಗೂ ಹೊಸ ಕಾರು ಸಿಗುತ್ತಿದೆಯೆಂದೂ ಪ್ರತಿವರ್ಷವೂ ಕಾರನ್ನು ಕೊಳ್ಳಲಾಗುತಿದೆಯೆಂದೂ ಗ್ರಹಿಸಿದ್ದು ತಪ್ಪು, ವಸ್ತುಸ್ಥಿತಿ ಹಾಗಿಲ್ಲ. ಮೇಯರರ ಉಪಯೋಗಕ್ಕಾಗಿ ಒಂದು ಕಾರನ್ನು ಕೊಡಲಾಗುವುದು. ಆದರೆ ಅದು ಕೆಲಸಕ್ಕೆ ಬಾರದಂತಾದ ಮೇಲೆಯೆ ಅಥವಾ ನಗರ ಸಭೆಯ ಕಾರ್ಯಗಳಿಗೆ ಇನ್ನೊಂದು ಕಾರು ಬೇಕಾದಾಗಲೆ ಹೊಸಕಾರು ಕೊಳ್ಳಲಾಗುವದು. ಎರಡನೆ ಸಂದರ್ಭದಲ್ಲಿ ಇದ್ದ ಕಾರನ್ನು ಅದು ಯಾವ ಖಾತೆಗೆ ಬೇಕಾಗಿದೆಯೋ ಅದಕ್ಕೆ ಬಿಟ್ಟುಕೊಟ್ಟು ಮೇಯರರಿಗೆ ಹೊಸ ಕಾರು ತೆಗೆಸಿಕೊಡಲಾಗುತ್ತದೆ. ಕಳೆದ [illegible] ಗಳಲ್ಲಿ ಒಂದೊಂದು ಕಾರನ್ನು ಮೂರು ಮೂರು ವರ್ಷಗಳ ವರೆಗೆ ಬೇರೆಬೇರೆ ಮೇಯರರು ಉಪಯೋಗಿಸಿದ್ದಾರೆ. ಒಮ್ಮೊಮ್ಮೆ ಐದಾರು ವರ್ಷಗಳ ವರೆಗೆ ಉಪಯೋಗಿಸಿದ್ದೂ ಉಂಟು.

"ಇವಿಷ್ಟು ಈ ಸಂದರ್ಭದ ವಿದ್ಯಮಾನಗಳು. ನಿಮ್ಮ ಟೀಕೆಗಳ ಸಂಬಂಧದಲ್ಲಿ ಹೇಳಬೇಕಾದರೆ, ತಾತ್ವಿಕ ದೃಷ್ಟಿಯಲ್ಲಿ ನೀವು "ಗೌರವ" ವನ್ನು ಕುರಿತು ಮಾಡಿದ ವ್ಯಾಖ್ಯೆಯನ್ನು ನಾನೂ ಅನುಮೋದಿಸುವೆನಾದರೂ ನಗರಗಳಲ್ಲಿ, ಅದೂ ಮುಂಬಯಿಯಂಥ ತೀರ ಕಿಕ್ಕಿರಿದು ಹೋಗಿ ಸಾರಿಗೆ ಸೌಕರ್ಯ ದುರ್ಲಭವಾದ ನಗರಗಳಲ್ಲಿ, ಅಂಥ ತತ್ವಗಳನ್ನು ಆಚರಣೆಗೆ ತರುವದು ಕಷ್ಟವಾಗುತ್ತದೆ. ನೀವು ಹೇಳಿದ ತತ್ವಗಳಂತೆ ನಡೆದುಕೊಳ್ಳುವದರಿಂದ ನಿರರ್ಥಕವಾಗಿ ವೇಳೆ ಹಾಳಾಗಿ ಅದರ ಪರಿಣಾಮವಾಗಿ ಮುಖ್ಯ ಕರ್ತವ್ಯಗಳ ಕಡೆ ದುರ್ಲಕ್ಷವಾದೀತು.

"ಮಾನ್ಯ ಶ್ರೀ ಸಿ. ರಾಜಗೋಪಾಲಾಚಾರಿಯವರ ಮೇಲೆ ಯಾರೂ ವೈಭವವಿಲಾಸಗಳಿಗೆ ಮನಸೋತವರೆಂದು ಆರೋಪ ಹೊರಿಸಲಾರರು. ಪ್ರಾಂತದ ಮುಖ್ಯ ಮಂತ್ರಿಯಾಗಲೂ ಅವರು ಮದ್ರಾಸಿನಲ್ಲಿ ತಮ್ಮ ಗುಡಿಸಲಲ್ಲೆ ಬಾಳುವೆ ಮಾಡುತಿದ್ದರು. ಆದರೆ ದಿಲ್ಲಿಗೆ ಬಂದು ಮೊದಲು ಮಂತ್ರಿಯಾಗಿಯೂ ಮುಂದೆ ಗವರ್ನರ ಜನರಲ್ಲರಾಗಿಯೂ ಉಳಿಯಬೇಕಾದಾಗ ಅವರು ತಮ್ಮ ಸ್ಥಾನಗೌರವಕ್ಕೆ ತಕ್ಕಂತೆ ನಡೆವಳಿಯನ್ನು ಹೊಂದಿಸಿಕೊಳ್ಳಬೇಕಾಯಿತು. ಮುಖ್ಯವಾಗಿ ಅನೇಕ ವಿದೇಶಿ ಧನವಂತರು ಅಲ್ಲಿದ್ದುದರಿಂದ ಇದು ಅವಶ್ಯವೆನಿಸಿತು. ಅಂಥವೇ ಕಾರಣಗಳಿಗಾಗಿ ಪಂಡಿತ ನೆಹರು ಅವರಾದರೂ ಮುಖ್ಯ ಮಂತ್ರಿಯೆತ್ತ ವಿದೇಶಿ ಮಂತ್ರಿಯಾಗಿ ಭಾರತಕ್ಕೆ ತಕ್ಕ ಪ್ರತಿಷ್ಠೆ ಹೊಂದಿಸಿಕೊಳ್ಳಬೇಕೆಂದು ವಿಶಾಲವಾದ ವಾಸಭವನಕ್ಕೆ ಹೋಗಬೇಕಾಯಿತು.

"ಅದೇ ಪ್ರಕಾರ, ಅಷ್ಟು ಮಟ್ಟಿಗೇ ಅಲ್ಲದಿದ್ದರೂ ಭಾರತದ ಪ್ರಮುಖ ನಗರವಾಗಿ ಅನೇಕ ವಿದೇಶೀಯರನ್ನು ಆಕರ್ಷಿಸುತ್ತಿರುವ ಮುಂಬಯಿ ನಗರದ ಮೇಯರರಿಗಾದರೂ ಘನವಾದ ಸ್ಥಾನಮಾನ ಕರ್ತವ್ಯಗಳಿವೆ. ಶ್ರೀ ಪಾಟೀಲರಿಗೇ ಆಗಲಿ, ಮತ್ತಾವ ಮೇಯರರಿಗೇ ಆಗಲಿ, ಒಂದು ಕಾರು ಇರುವಾಗ ಮತ್ತೊಂದು ಕಾರು ಯಾಕೆ ಬೇಕೆಂಬ ಪ್ರಶ್ನೆಯೇ ಏಳುವದಿಲ್ಲ. ಮೇಯರರ ಸ್ಥಾನಕ್ಕೆ ಆರಿಸಿ ಬರುವ ಮೊದಲು ಅವರೊಂದು ಕಾರನ್ನು ತಮ್ಮ ವ್ಯಕ್ತಿಗೂ ಸಾರ್ವಜನಿಕ ಜೀವನಕ್ಕೂ ಸಂಬಂಧಿಸಿದ ಕೆಲಸಗಳಿಗೆ ಮತ್ತು ತಮ್ಮ ಕುಟುಂಬದ ಜನರ ಉಪಯೋಗಕ್ಕೆ ಬಳಸುತ್ತಿದ್ದರು. ಉಚ್ಚ ಸ್ಥಾನಗಳಿಗೆ ಹೇಳುಕಳಿಸಿದವರು ಯಾವಾಗಲೂ ಅನೇಕ ಅತಿಥಿ ಅಭ್ಯಾಗತರನ್ನು ಬರಮಾಡಿಕೊಳ್ಳಬೇಕಾಗುವುದು. ಘನತೆವೆತ್ತ ಅತಿಥಿಗಳನ್ನು ಬರಮಾಡಿಕೊಳ್ಳುವುದೆಂದರೆ ಅವರಿಗೆ ಯೋಗ್ಯ ವಸತಿ ಸೌಕರ್ಯಗಳನ್ನು ಕೊಡುವುದಲ್ಲದೆ, ವಾಹನ ಸೌಕರ್ಯವನ್ನು ಒದಗಿಸಬೇಕಾಗುವುದು. ಅವರ ಸ್ವಂತ ಹಳೆಯ ಕಾರು ಈ ಕೆಲಸಕ್ಕೆ ಬರುತ್ತದೆ. ಹೊಸ ಕಾರನ್ನು ಅವರು ಮೇಯರರ ಕರ್ತವ್ಯಗಳಿಗಾಗಿ ಉಪಯೋಗಿಸುತ್ತಾರೆ. ಹಳೆಯ ಮೇಯರರ ಕಾರು ಕಾರಿನ ಅವಶ್ಯಕತೆಯುಳ್ಳ ಖಾತೆಗೆ ಒಪ್ಪಿಸಲ್ಪಟ್ಟಿದೆ. ಚುಟುಕಿನಲ್ಲಿ, ನಗರಸಭೆ ಶ್ರೀ ಪಾಟೀಲರಿಗೆ ಕಾರು ಕೊಟ್ಟದ್ದು ಅವರ ಸೌಕರ್ಯಕ್ಕಾಗಿ ಅಲ್ಲ, ಸ್ವಂತದ ಹಿತದೃಷ್ಟಿಯಿಂದ."

ಈ ವಿವರಣೆಯನ್ನು ಪ್ರಕಟಿಸಲು ನನಗೆ ಸಂತೋಷವಾಗುತ್ತದೆ. ಈ ವಿಶಿಷ್ಟ ಪ್ರಸಂಗದಲ್ಲಿ ಹೊಸ ಕಾರಿನ ಅವಶ್ಯಕತೆಗೆ ಕೊಟ್ಟ ಕಾರಣಗಳು ಸ್ವೀಕಾರಾರ್ಹವಾಗಿವೆಯೆಂದು ಒಪ್ಪಬಹುದಾಗಿದೆಯಲ್ಲ. ಮುಂಬಯಿಯ ನಗರ ಪಿತಾಮಹರು ಈ ವಿಷಯದಲ್ಲಿ "ಸ್ಥಾನ ಗೌರವ"ದ ಮತ್ತು "ವಿದೇಶೀ ಧನವಂತರು ಇರುವದರಿಂದ" ಯೋಗ್ಯ ವೈಭವ ವಿಲಾಸಗಳು ಬೇಕೆಂಬ ಭಾವನೆಯಲ್ಲಿ ಹೊಸದಿಲ್ಲಿಯ ವಿಚಾರಸರಣಿಯನ್ನೆ ಅನುಕರಿಸಿರುವ ಕಾರಣ ಅವರನ್ನು ಟೀಕಿಸಿಯೂ ಫಲವಿಲ್ಲ. ಹೊಸದಿಲ್ಲಿಯ ರೀತಿ ನೀತಿಗಳನ್ನೆ ಸ್ವಾಭಾವಿಕವಾಗಿ ಮುಂಬಯಿ ಅನುಸರಿಸುತ್ತದೆ. ಅದು ಸರಿಯಾದ ವಿಚಾರಸರಣಿಯೋ ಅಲ್ಲವೋ ಎಂಬುದು ಅವರವರ ಅಭಿಪ್ರಾಯದ ಮಾತು. ತುಲಸೀದಾಸನು ಶಿವನ ಮದುವೆಯ ಮೆರವಣಿಗೆಯ ಮನೋರಂಜಕವಾದ ಒಂದು ವರ್ಣನೆಯನ್ನು ಕೊಟ್ಟಿದ್ದಾನೆ. ಅದಕ್ಕೆ ಸ್ವರ್ಗಲೋಕದಿಂದ ವಿಷ್ಣುವೇ ಮೊದಲಾದ ವೈಭವ ವಿಲಾಸಗಳಿಗೆ ಮಾರುಹೋದ ದೇವಾಧಿದೇವರನ್ನೂ ಶಿವನ ಸ್ವಂತ ರಾಜ್ಯದ ಬತ್ತಲೆ ಅರಬತ್ತಲೆ ಪ್ರಜೆಗಳನ್ನೂ ಕರೆಯಲಾಗಿತ್ತು. ಇವರಿಬ್ಬರ ಬೆರಕೆಯಲ್ಲಿ ಶಿವನಿಗೆ ಯಾವ ಅನೌಚಿತ್ಯವೂ ಕಂಡುಬರಲಿಲ್ಲ. ವಿಷ್ಣುವಾದರೂ ಇದನ್ನು ಪೂರ್ಣವಾಗಿ ಅನುಮೋದಿಸಿದನು. ಆದರೆ ದೇವತೆಗಳ ಭಾವನೆಯೂ ಅವನಿಗೆ ಚನ್ನಾಗಿ ಗೊತ್ತಿತ್ತು. ಆದರಿಂದ ಅವನು ಅವರಿಗೆ ನಿಮ್ಮ ಗೌರವದ ರಕ್ಷಣೆಗಾಗಿ ನೀವು ಬೇಕಾದರೆ ಬೇರೆಯೆ ಮೆರವಣಿಗೆಯಲ್ಲಿ ಬನ್ನಿರಿ, ಶಿವನು ತನ್ನ ಪಾಡಿಗೆ ತನ್ನ ಗೌರವವನ್ನು ತನ್ನದೇ ರೀತಿಯಲ್ಲಿ ಕಾಪಾಡಿಕೊಳ್ಳಲಿ ಎಂದು ಸೂಚಿಸುತ್ತಾನೆ.

ಶ್ರೀ ಸಿ. ಗೋಪಾಲಾಚಾರಿಯವರು ಆಡಂಬರಕ್ಕೆ ಒಪ್ಪುವಪ್ರಕೃತಿಯುಳ್ಳವರಾಗಿರುವುದು ಸುದೈವ. ಆದರೆ ಗಾಂಧೀಜಿಯಂಥವರೋ ಮುಹಮ್ಮದ ಪೈಗಂಬರರಂಥವರೋ ರಾಷ್ಟ್ರದ ಗುರಿಕಾರರಾಗಿದ್ದರೆ, ಗೌರವದ ವ್ಯಾಖ್ಯೆ ಸರ್ವಥಾ ಬದಲಾಗುತಿತ್ತೆಂಬಲ್ಲಿ ನನಗೆ ಸಂಶಯವಿಲ್ಲ. ಕೌಪೀನಧಾರಿ ಗಾಂಧೀಜಿಯನ್ನು ಅರಮನೆಗೆ ಆಮಂತ್ರಿಸಿದ್ದರಿಂದ ಬ್ರಿಟಿಶ ರಾಜನ ಗೌರವಕ್ಕೆ ಕುಂದು ಬಂತೆಂದು ಚರ್ಚಿಲ್ಲರು ಒಮ್ಮೆ ಭಾವಿಸಿದ್ದರು. ಯಾವ ಗವರ್ನರ ಜನರಲ್ಲನೂ ಗಾಂಧೀಜಿಯನ್ನು ಅವರ ಸ್ವಂತ ವಸತಿಯಲ್ಲಿ ಕಾಣುವ ವಿಚಾರವನ್ನು ಕೂಡ ಮಾಡಲಾರದವನಾಗಿದ್ದನು. ಆದರೆ ೧೯೪೮ ರ ಸುಮಾರಿಗೆ ಗೌರವದ ಕಲ್ಪನೆಯನ್ನು ಬದಲಾಯಿಸಲೇಬೇಕಾಗಿಬಂತು. ಲೇಡೀ ಮೌಂಟಬ್ಯಾಟನ್ನರು ಭಂಗೀ ವಸತಿಯಲ್ಲಿ ಗಾಂಧೀಜಿಯನ್ನು ಕಾಣುವದು ತಮ್ಮ ಗೌರವಕ್ಕೆ ಕುಂದೆಂದು ಬಗೆಯಲಿಲ್ಲ. ಗಾಂಧೀಜಿಯ ಅಂತ್ಯ ಸಂಸ್ಕಾರದ ಕಾಲದಲ್ಲಿ ಅವರೂ ಅವರ ಗಂಡ ಗವರ್ನರ ಜನರಲ್ಲರೂ ಜನಜಂಗುಳಿಯ ಮಧ್ಯದಲ್ಲಿ ಉಸುಬಿನ ಮೇಲೆ ಕುಳ್ಳಿರಲು ಹಿಂಜರಿಯಲಿಲ್ಲ.

ನಮ್ಮ ಗೌರವವನ್ನು ಹೆಚ್ಚಿಸುವುದು ನಮ್ಮ ಯೋಗ್ಯತೆಯೇ ಹೊರತು ನಮ್ಮ ವೈಭವ ವಿಲಾಸಗಳಲ್ಲ. ನಮ್ಮದು ಬಡ ದೇಶ. ಆದುದರಿಂದ ನಮ್ಮ ಗೌರವ ನಮ್ಮ ಸಾದಾತನ, ಮಿತಭೋಗಗಳಲ್ಲಿ ಒಡೆದು ಕಾಣಬೇಕಲ್ಲದೆ ಸ್ವಾಗತ ಸಮಾರಂಭಗಳಲ್ಲಿ ಅನುಕರಣಾತ್ಮಕವಾದ ಮುಧ್ಯಮ ಪ್ರತಿಯ ವೈಭವ ಆಡಂಬರಗಳಲ್ಲಲ್ಲ. ಒಬ್ಬ ಸೇವೆಯ ಹೆಂಡತಿ ಗವರ್ನರರ ಹೆಂಡತಿಯನ್ನು ಕಾಣುವಾಗ ತಾನು ತಕ್ಕ ಅಲಂಕಾರ ದೊಡನೆ ಹೋಗಬೇಕೆಂದು ಬಗೆದು ವಿಶ್ವ ವಸ್ತ್ರಾಭರಣಗಳನ್ನಪೇಕ್ಷಿಸಿದಳೆಂದರೆ ಅವನ್ನು ಎರವು ಬೇಕು, ಬೇಡಿ ತರಕೊಳ್ಳಬೇಕು, ಇಲ್ಲವೆ ಕದ್ದು ತರಬೇಕಾಗುವುದು; ಇಲ್ಲದಿದ್ದರೆ ಅಗ್ಗವಾದ ಕೃತಕ ರೇಶ್ಮೆಯ ವಸ್ತ್ರವನ್ನೂ ರಂಗೂನು ವಜ್ರಗಳನ್ನೂ ಉಪಯೋಗಿಸಬೇಕಾಗುವದು ಹಾಗೆ ಮಾಡಿದರೂ ಗವರ್ನರನ ಹೆಂಡತಿಯೇನೂ ಮೋಸಹೋಗಲಾರಳು. ಬದಲಾಗಿ ಅವಳಿಗೇನಾದರೂ ಬುದ್ಧಿಯಿದ್ದರೆ, ಮನೆಯಲ್ಲೇ ನೇಯ್ದು ಮನೆಯಲ್ಲೇ ಒಗೆದ ಸೀರೆಯನ್ನುಟ್ಟು ಬಂದವಳ ಮೇಲೆಯೆ ಅವಳಿಗೆ ಹೆಚ್ಚು ಆದರವುಂಟಾದೀತು.

ನಮ್ಮ ದೇಶದ ಆರ್ಥಿಕ ಮತ್ತು ನೈತಿಕ ಉದ್ಧಾರವಾಗಬೇಕೆಂದಿದ್ದರೆ ಈ ವಿಷಯಗಳಲ್ಲಿರುವ ನಮ್ಮ ಭ್ರಮೆಯನ್ನು ತೊರೆದುಬಿಡಬೇಕು ನಮ್ಮ ದೇಶದಂಥ ಬಡದೇಶದಲ್ಲಿ ವೈಭವಾಡಂಬರಗಳು ಸರ್ವಥಾ ಗೌರವಾಸ್ಪದವಲ್ಲ. ಶ್ರೀ ದಹ್ಯಾ[illegible] ಯವರ ಪತ್ರದಿಂದ ತಿಳಿಯುವ ಇನ್ನೊಂ[illegible] ಕಲಿಯ[illegible]ತವೆಂದರೆ ಈ ವಿಚಾರ ಪರಿವರ್ತನವದು ದುಸ್ತರ[illegible]ಂದಾಳುಗಳಿಂದಲೇ ಪ್ರಾರಂಭ. ಪರಿಸ್ಥಿತಿಯನ್ನು ~

ವರ್ಧಾ ಕಿ. ಧ. ಮ.
೧೦.೮.೪೯

ಮೂರನೇ ವರ್ಗದ ಪ್ರವಾಸ

"ಎರಡನೇ ವರ್ಗದ ಮಲಗುವ ಡಬ್ಬಿಗಳ ಸಂಬಂಧದಲ್ಲಿ ನೀವು ಟೀಕಿಸಿರುವಿರಿ. ಆದರೆ ಅದರ ಬದಲು ಮೂರನೇ ವರ್ಗದ ಪ್ರವಾಸದ ಬಗ್ಗೆ ಟೀಕೆಮಾಡಿದ್ದರೆ ಹೆಚ್ಚು ಒಳಿತಾಗುತ್ತಿತ್ತೆಂದು ನನ್ನ ಅಭಿಪ್ರಾಯ. ಹರಿಜನ ಪತ್ರಿಕೆಯು ಗೊತ್ತುಗುರಿಗೆ ಅದು ಸುಸಂಗತವಾಗುತ್ತಿತ್ತು. ಗಾಂಧೀಜಿ ಯಾವಾಗಲೂ ಮೂರನೆ ವರ್ಗದಲ್ಲಿ ಪ್ರವಾಸಮಾಡುತ್ತಿದ್ದರು. ಅನೇಕರಿಗೆ ಸಿಕ್ಕದಿದ್ದಂಥ ಸುಖ ಸೌಕರ್ಯಗಳನ್ನು ಕೆಲವೇ ಜನರು ಅದೇಕೆ ಅಪೇಕ್ಷಿಸಬೇಕು ಎಂದು ಅವರು ಯಾವಾಗಲೂ ವಿವಂಚನೆಯಿಂದ ಕೇಳುತಿದ್ದರು.

"ಯುದ್ಧಪೂರ್ವದಲ್ಲಿ ಮೂರನೇ ವರ್ಗದ ಪ್ರವಾಸವು ಬಹಳ ಕಷ್ಟದ್ದಾಗಿದ್ದಿತು. ಯುದ್ಧಾನಂತರ ಅದು ಮತ್ತಷ್ಟು ನರಕಪ್ರಾಯವಾಗಿದೆ. ವಿಶೇಷತಃ ಕಲಕತ್ತೆಯಿಂದ ದಿಲ್ಲಿ ಇಲ್ಲವೆ ಮುಂಬಯಿಯಂಥ ದೂರ ಪ್ರವಾಸವು ಅತ್ಯಂತ ಕಷ್ಟತರವಾದುದು. ನಾಲ್ಕು ಜನರಿಗಾಗಿ ಇದ್ದ ಬಾಕಿನ ಮೇಲೆ ೭ ಜನರು ನುಗ್ಗುವರು ಮತ್ತು ಬಾಕುಗಳ ಮಧ್ಯ ಸ್ಥಳದಲ್ಲಿ ಬೇಕಾದಷ್ಟು ಸಾಮಾನುಗಳು ಇರುವವಲ್ಲದೆ ಅದರ ಮೇಲೆ ಜನರು ಹಲ ಸಂದರ್ಭಗಳಲ್ಲಿ ಕುಳಿತಿದ್ದರೆ ಇನ್ನು ಹಲ ಪ್ರಸಂಗಗಳಲ್ಲಿ ನಿಂತಿರುವದುಂಟು. ಈ ರೀತಿಯಾಗಿ ನಮಗೆ ಕಾಲು ಚಾಚಲಿಕ್ಕೇ ಅವಕಾಶವಿಲ್ಲದ್ದರಿಂದ ಅವು ಗಂಟುಗಟ್ಟಿದಂತಾಗುತ್ತವೆ. ನೀವಷ್ಟು ಸುದೈವಿಗಳಾಗಿ ಬಾಕಿನ ಮೇಲೆ ಕೂಡ್ರಲು ನಿಮಗೆ ಅವಕಾಶ ಸಿಕ್ಕಿದ್ದರೆ ನಿಮ್ಮ ದೇಹವು ಎರಡೂ ಬದಿಗಳಲ್ಲಿರುವ ಎರಡುದೇಹಗಳಿಂದ ಜರ್ಜರಿತವಾಗುತ್ತದೆ. ಈರೀತಿ ದೈಹಿಕ ಕಷ್ಟಗಳಷ್ಟೇ ಅಲ್ಲ, ತಾನೊಬ್ಬ ಮನುಷ್ಯ ಪ್ರಾಣಿಯೋ ಎಂಬ ಸಂಶಯ ಕೂಡ ಅನೇಕಸಲ ಪ್ರವಾಸಿಕರಿಗೆ ಬರುವದುಂಟು."

ಈ ದೂರು ಸತ್ಯಪೂರ್ಣವಾಗಿದೆ. ಆ ವಿಶಿಷ್ಟ ಸಂದರ್ಭದಲ್ಲಿ ನಾನು ಎರಡನೇ ವರ್ಗದಲ್ಲಿ ಪ್ರವಾಸ ಮಾಡಿದ್ದು ಚೈನಿಗಾಗಿ ಅಲ್ಲ ಅಥವಾ ಕೈಯಲ್ಲಿ ಹಣವಿದ್ದಿತೆಂದೂ ಅಲ್ಲ- ಮೂರನೇ ವರ್ಗದಲ್ಲಿ ಪ್ರವಾಸಮಾಡುವದು ನನ್ನಂಥವನಿಗೆ ಅಶಕ್ಯವೇ ಆದ ಸಂದರ್ಭಗಳಲ್ಲಿ ಮಾತ್ರ ನಾನು ಎರಡನೇ ವರ್ಗದಲ್ಲಿ ಪ್ರವಾಸ ಮಾಡುವ ಪ್ರಸಂಗ ಬರುತ್ತದೆ. ಆದರೆ ಈ ಲೇಖಕನು ಮಾಡಿದ ಟೀಕೆಯನ್ನೆಲ್ಲ ನಾನು ಸ್ವೀಕರಿಸುತ್ತೇನೆಯಲ್ಲದೆ ಎರಡನೇ ವರ್ಗದ ಡಬ್ಬಿಗಳಲ್ಲಿಯೂ ಅಷ್ಟೇ ದಟ್ಟಣೆ ಇರುತಿದೆಯೆಂದು ಅದಕ್ಕೆ ಜೋಡಿಸಬಯಸುತ್ತೇನೆ. ಹೆಚ್ಚು ಬಂಡಿಗಳು ಮತ್ತು ಹೆಚ್ಚು ಡಬ್ಬಿಗಳು ಮಾತ್ರ ಪರಿಸ್ಥಿತಿಯನ್ನು ಸುಧಾರಿಸಬಲ್ಲವು. ಅದೇ ರೀತಿಯಾಗ ಜನರು ಸುರಕ್ಷಿತತೆಯ ವಿಶ್ವಾಸದಿಂದ ತಮ್ಮ ಸಾಮಾನುಗಳನ್ನೆಲ್ಲ ಬ್ರೆಕ್ಕಿನಲ್ಲಿ ಇಟ್ಟು ತಾವು ಇಳಿಯುವ ಸ್ಟೇಶನ್ನಿನಲ್ಲಿ ಅವನ್ನು ತಿರುಗಿ ತೆಗೆದುಕೊಳ್ಳುವಂತಾದರೆ ಮಾತ್ರ ಜನದಟ್ಟಣೆಯು ಕಡಮೆಯಾಗಬಲ್ಲುದು.

ವರ್ಧಾ ಕಿ. ಘ. ಮ.
೧೦.೮.೪೯

(೧೩ ನೇ ಪುಟದಿಂದ)

ದೆಯೋ ಇಲ್ಲವೆ ಪರದೇಶೀ ರಾಷ್ಟ್ರಗಳ ಹಿತ ಸಂಬಂಧಗಳ ರಕ್ಷಣೆಗಾಗಿಯೋ?

ಅಹಾರ ಸಮಸ್ಯೆಯ ಪರಿಹಾರದಲ್ಲಿ ಸಂಪೂರ್ಣವಾಗಿ ಸಹಾಯ ಮಾಡಬೇಕೆಂದು ಸರಕಾರವು ಜನತೆಯನ್ನು ಬಿನ್ನವಿಸಿಕೊಳ್ಳುವಾಗಲೆ, ಸರಕಾರವೇ ಜನತೆಯ ಗೂಡ ಸಂಪೂರ್ಣವಾಗಿ ಸಹಕರಿಸಿ ತದನುಸಾರವಾಗಿ ತಮ್ಮ ಧೋರಣವನ್ನು ನಿರ್ದಿಷ್ಟ ಪಡಿಸಲಿ— —ಝವೇರಿಭಾಯಿ ಪಟೇಲ

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

	ರೂ. ಆ.
ಮುಂಬಯಿ ಡಾಯಿಂಗ್	೧೮೮೦-೪-೦
ಕೋಹಿನೂರು	೨೬೨-೧-೦
ಸ್ವದೇಶಿ	೨೯೪-೦-೦
ಗೋಕಾಕ	೨೪೭-೦-೦
ಸೆಂಚುರಿ	೨೨೨-೮-೦
ಸಿಂಪ್ಲೆಕ್ಸ	೧೭೪-೮-೦
ಟಾಟಾ ಸ್ಟೀಲ ಡೆಫರ್ಡ	೧೩೫೦-೦-೦
ಇಂಡಿಯನ್ ಅಯರ್ನ್	೨೬-೦-೦
ಅಸೋ. ಸಿಮೆಂಟ್ಸ	೧೯೦-೦-೦
ಸೆಂಟ್ರಲ ಬ್ಯಾಂಕ್	೫೦-೦-೦
ಇಂಪೀರಿಯಲ್ (ಪೂರ್ಣ)	೧೩೩೫.೦.೦

ಚಿನ್ನ ಬೆಳ್ಳಿ

	ರೂ. ಆ.
ತಯಾರಿ ಬೆಳ್ಳಿ	೧೬೩-೮-೦
ತಯಾರಿ ಚಿನ್ನ	೧೧೪-೪-೦

ಅರಳೆ

ಸೆಪ್ಟೆಂಬರ(ಅನಧಿಕೃತ)	೬೨೫.೦.೦

ಎಣ್ಣೆಕಾಳು

ಶೇಂಗಾ	೨೨೦-೦-೦
ಅಗಸೆ ಎಣ್ಣೆ	೧೯.೦.೦
ಔಡ್ಲ ಎಣ್ಣೆ	೫೮-೦-೦

ಶಿವಮೊಗ್ಗೆ ಅಡಿಕೆ ಪೇಟೆ

	ರೂ. ರೂ
ಬೇಪಾಪರ ನಂ. ೧	೩೩-೪೯
,, ,,	೩೦-೩೩
ನಂ. ೨	೨೮-೩೦
ರಾಜಾ ಅಲವು	೨೮-೩೦
ತೊರ್‌ಸಾಲು	೨೪-೨೮
ಪೆಟಿನ್	೩೫-೩೬
ನುಲಿ	೨೮-೩೦
ಬೆಟ್ಟಪಂತಿ	೨೨-೨೫
ಬೆಟ್ಟ	೧೯-೨೦
ಸೀಗೆಕಾಯಿ	೭-೮

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

			ರೂ. ಆ.
ಜಹೊ. ಹತ್ತಿ (ನಗಕ್ಕೆ) ವ್ಯಾಪಾರ ನಡೆಯಲಿಲ್ಲ.			
ಕುಸುಬಿ (ಬ. ಮಣಕ್ಕೆ)		೧೬-೮-೦	೧೬-೧೪-೦
ಅಗಸಿ (ಚೀಲಕ್ಕೆ)		೪೩-೦-೦	೪೫.೦.೦
ಔಡಲ	,,	೩೭-೦-೦	೩೮-೦-೦
ಜ. ಹೆಸರು	,,	೪೨-೦-೦	೪೪-೦-೦
ಕರಿ ಎಳ್ಳು	,,	೬೦-೦-೦	೬೨-೦-೦
ಬಿಳಿ ಎಳ್ಳು	,,	೭೬-೦-೦	೭೮-೦-೦
ಕಡಲೆ	,,	೫೨-೦-೦	೫೪-೦-೦
ಉದ್ದು	,,	೩೬-೦-೦	೪೨-೦-೦
ಜ. ತೊಗರಿ	,,	೨೮-೦-೦	೩೦-೦-೦
ಹುರಳಿ	,,	೩೨-೦-೦	೩೩-೦-೦
ಕೆಂ. ಅಲಸಂದಿ	,,	೫೧-೦-೦	೫೪-೦-೦
ಬಿ. ಅಲಸಂದಿ	,,	೪೨-೦-೦	೪೪-೦-೦
ಬೆಲ್ಲ (ಹೇರಿಗೆ ೮ ಮಣ)		೬೬-೦-೦	೭೦-೦-೦
ಶೇಂಗಾ (ಹೇರು)		೪೮-೦-೦	೫೦-೦-೦
ಹೊಸ ಶೇಂಗಾ			೩೪-೦-೦
ಶೇಂಗಾ ಕಾಳು		೮೦-೦-೦	೮೬-೦-೦

ಪರೀಕ್ಷೆಗಳು ಮತ್ತು ಆತ್ಮಹತ್ಯೆಗಳು

(೭ ನೆಯ ಪುಟದಿಂದ)

ಬೇರಾವುದೊಂದು ಉಪಯುಕ್ತ ಕಾರ್ಯದಲ್ಲಿ ತುಂಬ ನಿಪುಣನಾಗಿ ಉತ್ತಮ ನಾಗರಿಕನಾಗುವ ಸಂಭವವೂ ಉಂಟೆಂದು ಅನೇಕರಿಗೆ ಹೊಳೆಯುವದೇ ಇಲ್ಲ.

ಅದುದರಿಂದ ನಾವು ಸುಶಿಕ್ಷಿತರ ನಿರುದ್ಯೋಗದ ಸಮಸ್ಯೆಯನ್ನೂ ಜಾಣತನದಿಂದ ವಿಚಾರಿಸಬೇಕು. ನೌಕರಿಗೂ ಪರೀಕ್ಷೆಗೂ ಇರುವ ಸಂಬಂಧವನ್ನು ಸಡಿಲಿಸಿ ಅದಕ್ಕಿಂತ ಉತ್ತಮವಾದ ಅಥವಾ ವೈಕಲ್ಪಿಕವಾದ ಯೋಗ್ಯತಾನಿರ್ಣಯೋಪಾಯಗಳನ್ನೂ ಕಲ್ಪಿಸಬೇಕು. ಇದು ದೀರ್ಘಕಾಲದ ಯೋಜನೆಯ ಮಾತಾಗಿದ್ದರೂ ಇದನ್ನು ಗಮನದಲ್ಲಿಟ್ಟುಕೊಳ್ಳದೆ ಸಮಸ್ಯೆ ಬಿಡಿಸಲು ಸಾಧ್ಯವಿಲ್ಲ.

ಇದರಿಂದ ಕೂಡಲೆ ಕೈಕೊಳ್ಳಬೇಕಾದ ಕ್ರಮಗಳ ಆವಶ್ಯಕತೆಯನ್ನು ಮೂಲೆಗೊತ್ತಬೇಕೆಂದು ಅರ್ಥವಲ್ಲ. ಒಡನೆ ಕೈಕೊಳ್ಳಬೇಕಾದ ಕ್ರಮಗಳೆಂದರೆ, ಶಿಕ್ಷಕರೂ ಹೆತ್ತವರೂ ಮಕ್ಕಳನ್ನು ಪ್ರೀತಿ ಸಹಾನುಭೂತಿಗಳಿಂದ [illegible]ಸಿಕೊಂಡು ಚಿಂತೆ ಆತುರಗಳ ನಡುವೆ ತಮಗೆ ಜಗತ್ತಿನಲ್ಲಿ ಆಧಾರಗಳಿದ್ದಾರೆ, ಗೆಳೆಯರಿದ್ದಾರೆ ಎಂಬ ಧೈರ್ಯ ಅವರಲ್ಲಿ ಮೂಡುವಂತೆ ಮಾಡಬೇಕು.

Reg. No. B. 3148 | LICENCE No 3 Licensed to Post without Prepayment | KARMAVEER

ಅನ್ನ-ವಸ್ತ್ರ-ಆಶ್ರಯಗಳಲ್ಲಿ ಸ್ವಾವಲಂಬಿಗಳಾಗಬೇಕು

ಔದ್ಯೋಗೀಕರಣದಿಂದ ಪ್ರಯೋಜನವಿಲ್ಲ

ಡಾ. ಕುಮಾರಪ್ಪನವರ ಮನನೀಯ ವಿಚಾರಗಳು

"ಆಹಾರ, ವಸ್ತ್ರ ಮತ್ತು ಆಶ್ರಯ ಈ ಮೂರು ಮಹತ್ವದ ವಿಷಯಗಳಲ್ಲಿ ನಾವು ಸ್ವಾವಲಂಬಿಗಳಾದರೆ ಮಾತ್ರ ನಿಜವಾಗಿ ನಾವು ಸ್ವಾತಂತ್ರ್ಯವನ್ನು ಪಡೆದಂತಾಗುವದು; ಆ ಸ್ವಾತಂತ್ರ್ಯವು ಚಿರಕಾಲ ಬಾಳುವದು. ಇದಕ್ಕೆ ಮೂಲ ಶಿಕ್ಷಣವು ಒಂದು ಸಾಧನ. ಇದು ಕೇವಲ ಬಾಲ್ಯದಲ್ಲಿ ಮಾತ್ರ ದೊರೆವುದೆಂದಲ್ಲ. ಆದರೆ ಕೊನೆಯವರೆಗೆ ಮಾನವನು ಈ ಮೂಲ ಶಿಕ್ಷಣವನ್ನು ಪಡೆಯುವನು" ಎಂದು ಡಾ. ಜೆ. ಸಿ. ಕುಮಾರಪ್ಪನವರು ಧಾರವಾಡದಲ್ಲಿ ಶನಿವಾರ ಸಾಯಂಕಾಲ ನಗರ ಸಭಾಭವನದಲ್ಲಿ ಪದವೀಧರ ಸಂಘದ ಆಶ್ರಯದಲ್ಲಿ ಕೂಡಿದ್ದ ಸಭೆಯಲ್ಲಿ ನುಡಿದರು. ಶ್ರೀ ಕರಮರಕರರು ಅಧ್ಯಕ್ಷತೆ ವಹಿಸಿದ್ದರು.

ಡಾ. ಕುಮಾರಪ್ಪನವರು ತಮ್ಮ ಭಾಷಣದಲ್ಲಿ ಈ ರೀತಿ ಅಭಿಪ್ರಾಯಪಟ್ಟರು: ಮಾನವನು ವಿಕಾಸಹೊಂದಿ ಮಾನವರಂತೆ ಬಾಳಲು ಕಲಿಸುವದೇ ಮೂಲ ಶಿಕ್ಷಣದ ಗುರಿ. ಅದಕ್ಕೆ ಸರಿಯಾದ ಸಂಸ್ಕೃತಿ ಅವಶ್ಯ. ಆದರೆ ಸದ್ಯದ ಶಿಕ್ಷಣದ ಪರಿಣಾಮವಾಗಿ ಸಂಸ್ಕೃತಿವಿಹೀನ ಕಾಡು ಜನರು ತಯಾರಾಗುತ್ತಾರೆ. ಕಾಡಾನೆಯನ್ನು ತಂದು ಸಾಧು ಮಾಡುವಂತೆ ಮಾನವನನ್ನು ಸುಸಂಸ್ಕೃತ ಮಾಡಬೇಕಾಗುತ್ತದೆ. ಸಾಮಾನ್ಯ ಮಾನವನು ತನಗಾಗಿ ತನ್ನ ಅವಶ್ಯಕತೆಗಳನ್ನು ಪೂರಯಿಸಿಕೊಳ್ಳುವನು. ಎರಡನೆಯದಾಗಿ ಸ್ವಂತ ಲಾಭಕ್ಕಾಗಿ ಪರರನ್ನು ಶೋಷಿಸುವನು. ಉದಾಹರಣೆಯನ್ನು ನೋಡುವಾ. ತಾಯಿ ಹಲ್ವಾ ತಯಾರಮಾಡುವಾಗ ಮಕ್ಕಳಿಗೆ ಪುಷ್ಟಿಕರ ಆಹಾರ ಕೊಡುವ ದೃಷ್ಟಿ ಇರುತ್ತದೆ. ಅಂತೆಯೆ ಅವಳು ಮನೆಯಲ್ಲಿಯೇ ತಯಾರಮಾಡಿದ ತುಪ್ಪ ಒಳ್ಳೆ ಹಿಟ್ಟು ಮೊದಲಾದ ಪದಾರ್ಥಗಳಿಂದ ರುಚಿಕರವಾದ ಮತ್ತು ಪೌಷ್ಟಿಕ ಹಲ್ವಾ ತಯಾರುಮಾಡುತ್ತಾಳೆ. ಆದರೆ ಅದೇ ಹಲ್ವಾ, ಹಲ್ವಾ ಮಾರುವವನೂ ತಯಾರಮಾಡುತ್ತಾನೆ. ಅವನು ಅದಕ್ಕಾಗಿ ಕೆಟ್ಟ ಎಣ್ಣೆಯನ್ನೂ ತುಪ್ಪದಂತೆ ಕಾಣುವ ವನಸ್ಪತಿಯನ್ನೂ ತಂದು ಹುಳಹತ್ತಿದ, ಪೇಟೆಯಲ್ಲಿ ದೊರೆವ ಹಿಟ್ಟು ತರುತ್ತಾನೆ. ಕಣ್ಣಿಗೆ ಚಂದ ಕಾಣುವದಕ್ಕಾಗಿ ಬಣ್ಣ ಮುಂತಾದ್ದನ್ನು ಸಿಂಪಡಿಸುತ್ತಾನೆ. ಮಾರಾಟದ ವೃತ್ತಿ ಅವನಲ್ಲಿ ಇದ್ದುದರಿಂದಲೆ ಇಷ್ಟೆಲ್ಲವನ್ನು ಮಾಡುತ್ತಾನೆ. ತಾಯಿಯ ದೃಷ್ಟಿ ಅವನಲ್ಲೆಂದಿಗೂ ಬರಲಾರದು. ಹೆಚ್ಚು ಹಣ ಸೆಳೆಯುವ ಪ್ರವೃತ್ತಿಯೆ ಅವನದು. ಈ ಬಗೆಯ ವೃತ್ತಿ ನಮಗೆ ಸಲ್ಲದು. ಇದು ದರೋಡೆಗಾರರ ವೃತ್ತಿ. ಔದ್ಯೋಗೀಕರಣವು ಸಹ ಇದೇ ಮಾದರಿಯದು. ಯಾವದೇ ಬಗೆಯ ಹಿತಾಹಿತ, ಬೇಕು ಬೇಡಗಳನ್ನು ಲಕ್ಷಿಸದೆ ಸುಂದರವಾದ ವಸ್ತುಗಳನ್ನು ನಿರ್ಮಿಸಿ ಹಣವನ್ನು ಸೆಳೆಯುವ ಪ್ರವೃತ್ತಿ ಅದರದು. ಈ ಲಾಭದಾಸೆ ತೊಲಗಬೇಕು. ಈ ಸಂಬಂಧದಲ್ಲಿ ನಾವು ಕಲಿಯಬೇಕಾದ ಪಾಠವನ್ನು ಕಲಿಸುವ ಶಿಕ್ಷಣವೆ ಮೂಲ ಶಿಕ್ಷಣ.

ಆಹಾರದ ಕೊರತೆಯೇಕೆ ?

ಕೃಷಿ ಪ್ರಧಾನವಾದ ಹಿಂದುಸ್ತಾನದಲ್ಲಿ ಆಹಾರದ ಕೊರತೆಯೇಕೆ? ಉಪಯೋಗಕ್ಕೆ ಹೆಚ್ಚಾಗಿ ಉತ್ಪಾದನೆ ಕಡಮೆಯಾದುದೆ ಇದಕ್ಕೆ ಕಾರಣ. ನಾವು ಸೈನ್ಯವನ್ನು ಹೆಚ್ಚಿಸುತ್ತ ಹೋದಂತೆ ಆಹಾರದ ಕೊರತೆ ಹೆಚ್ಚುತ್ತ ಹೋಗುವದು. ಹಳ್ಳಿಗಳಲ್ಲಿ ಆಹಾರ ಪದಾರ್ಥಗಳ ಉತ್ಪಾದನೆಯಲ್ಲಿ ತೊಡಗುತಿದ್ದ ಇಷ್ಟು ಜನರು ಈಗ ಸೈನ್ಯದಲ್ಲಿ ಸೇರುವದರಿಂದ ಆ ಕೆಲಸಕ್ಕೆ ಎರವಾಗುವರಲ್ಲದೆ ಸಿಕ್ಕಷ್ಟು ತಿಂದು ಕಾಲಕಳೆಯುತಿದ್ದ ಅವರು ಹೆಚ್ಚೆಚ್ಚು ಆಹಾರ ತಿನ್ನುವರಲ್ಲದೆ ಮೇಲೆ ಅನವಶ್ಯಕ ಸೈನಿಕರಿಗೂ ತುತ್ತಾಗುವರು. ಇವರಿಗೆ ಅನ್ನ ಸಿಕ್ಕಬಾರದೆಂದಲ್ಲ. ಆದರೆ ಏನೂ ಉತ್ಪಾದನೆ ಮಾಡದೆ ಪರಪುಷ್ಟ ಜೀವಿಗಳಂತೆ ಇವರು ಜೀವಿಸುವವು ಪರರ ಶೋಷಣೆಯೆ ಸೈ. ನಮ್ಮ ಸರಕಾರದ ಸುಮಾರು ೩೨೦ ಕೋಟಿ ರೂ. ಉತ್ಪನ್ನದಲ್ಲಿ ೨೦೦ ಕೋಟಿ ರೂಪಾಯಿಗಳು ಈ ಸೈನ್ಯ ವೆಚ್ಚಕ್ಕಾಗಿಯೆ ಹೋಗುವದು. ಇನ್ನುಳಿದ ೬೦ ಕೋಟಿ ಉಳಿದನೋಕರರಿಗಾಗಿ ಕೇವಲ ೬೦ ಕೋಟಿ ರೂಪಾಯಿ ಮಾತ್ರ ಉತ್ಪಾದನಾ ಕಾರ್ಯಗಳಿಗೆ ಉಳಿಯುವದು. ಹೀಗಾದರೆ ಉತ್ಪಾದನೆ ಬೆಳೆವುದೆಂತು? ಹಣ ವಿನಿಮಯದ ದಾರಿಯೂ ನಮ್ಮದು ತಪ್ಪಾಗಿದೆ. ಹಳ್ಳಿಯ ರೈತನು ತನ್ನಲ್ಲಿದ್ದ ಒಂದು ಶೇರು ಹಾಲನ್ನು ರೂಪಾಯಿಗೊ ಹದಿನಾಲ್ಕು ಆಣೆಗೊ ಮಾರಿ ತನ್ನ ಮಕ್ಕಳ ಶರೀರಪೋಷಣೆಗೆ ಅವಶ್ಯವಾದ ಪೌಷ್ಟಿಕ ಪದಾರ್ಥವನ್ನು ಹೊರಗೆ ಕಳಿಸುವನು. ಇದರ ಬದಲಾಗಿ ಚಹಾನೋ ಮತ್ತೇನನ್ನಾದರೊ ಅವರಿಗೆ ತಂದು ಕೊಡುವನು. ಈ ಪ್ರವೃತ್ತಿಯು ಮಾಯವಾಗಬೇಕು. ನಾಡಿನ ಭಾವೀ ಜನಾಂಗವನ್ನು ಇಂತು ಪೌಷ್ಟಿಕ ಆಹಾರಕ್ಕೆ ಎರವು ಮಾಡುವದು ಅತ್ಯಂತ ಹಾನಿಕರವು. ಮಕ್ಕಳ ಬಾಯಿ ಮೇಲೆ ಹೊಡೆದು ಹೀಗೆ ಹಾಲು ಮಾರುವ ತಾಯಿಯು ನಿಜವಾಗಿ ದೇಶದ್ರೋಹಿಯೆಂದು ಹೇಳಬಹುದು. ನಗರವಾಸಿಗಳು ತಮ್ಮಲ್ಲಿದ್ದ ದುಡ್ಡಿನ ಬಲುಮೆಯಿಂದ ಹಳ್ಳಿಗರಿಂದ ಹಾಲು ಮೊದಲಾದ್ದನ್ನು ಕಸಿದುಕೊಳ್ಳುವದು ಒಂದು ಬಗೆಯಿಂದ ಶೋಷಣೆಯೇ ಸೈ. ಆದುದರಿಂದ ಆಹಾರದ ಉತ್ಪಾದನೆಯನ್ನು ಯೋಜಿಸುವಾಗ ಇವೆಲ್ಲವನ್ನು ವಿಚಾರಿಸಬೇಕು.

ಭತ್ತದ ಗದ್ದೆ ಮಾಯವಾದವು

ನಾನೊಮ್ಮೆ ಮಲಬಾರಿಗೆ ಹೋದಾಗ ಸಮುದ್ರ ತೀರದಲ್ಲಿ ತೆಂಗಿನ ತೋಟದಲ್ಲಿ ಮುದುಕಿಯೊಬ್ಬಳನ್ನು ಕಂಡು ಮಾತಾಡಿಸಿದೆ. ಅಕ್ಕಿಯ ಅನ್ನವೇ ತನ್ನ ಆಹಾರವೆಂದು ಅವಳು ಹೇಳಿದಳು. ಅವಳುಪಯೋಗಿಸುವ ಅಕ್ಕಿಯಾದರೊ ಪಾಲಿಶ್ ಮಾಡಿದ ಬ್ರಾಹ್ಮಿಲ್‌ದ ಅಕ್ಕಿಯು! ಬೇರೆ ಪೌಷ್ಟಿಕ ಪದಾರ್ಥಗಳನ್ನು ತಿನ್ನುವವರಿಗೆ ಈ ಅಕ್ಕಿ ಹೇಗಾದರೂ ಸಾಗಬಹುದು. ಆದರೆ ಬರಿ ಅಕ್ಕಿಯ ಮೇಲೆಯೆ ಉದರ ನಿರ್ವಾಹ ಸಾಗಿಸುವ ಈ ಮುದುಕಿಯಂಥವರು ಈ ನಿಃಸತ್ವ ಅಕ್ಕಿ ತಿಂದು ಬದುಕಬೇಕೆಂತು? ಈ ತೆಂಗಿನ ತೋಟವಿದ್ದ ಸ್ಥಳವೆಲ್ಲ ಹಿಂದೆ ಭತ್ತದ ಗದ್ದೆಯಾಗಿದ್ದಿತೆಂದೂ ಹೆಚ್ಚು ರೊಕ್ಕ ಬಂದದ್ದಾಗಿ ತಮ್ಮ ಹಿರಿಯರು ಅದನ್ನು ಮಾರಿಬಿಟ್ಟರೆಂದೂ ಆ ಮುದುಕಿಯು ನನಗೆ ಹೇಳಿದಳು. ಈಗ ತೋಟದಲ್ಲಿಯ ತೆಂಗಿನಕಾಯಿಯಾದರೂ ಈ ಮುದುಕಿಗೆ ದೊರೆಯುತಿವೆಯೋ? ಇಲ್ಲ ಅವೆಲ್ಲ ಟಾಟಾಪುರಕ್ಕೆ ಕೊಬ್ಬರಿ ಎಣ್ಣೆ ತಯಾರಮಾಡಲು ರವಾನಿಸಲ್ಪಡುತ್ತವೆ. ಈ ಕೊಬ್ಬರಿ ಎಣ್ಣೆಯಿಂದ ಹಮಾಮ ಸಾಬೂನು ಮಾಡಲಾಗುತ್ತದೆ. ಈ ರೀತಿಯಾಗಿ ಭತ್ತದ ಗದ್ದೆಗಳಾಗಿದ್ದು ಜನರ ಹೊಟ್ಟೆಗೆ ಅಕ್ಕಿಯನ್ನು ಒದಗಿಸುತಿದ್ದ ಈ ಪ್ರದೇಶವಿಂದು ತೆಂಗಿನ ತೋಟವಾಗಿ ಪರಿಣಮಿಸಿ ನಗರದಲ್ಲಿಯ ಹೆಂಗಳೆಯರ ಕೈತೊಳೆಯಲು ಹಮಾಮ ಸಾಬೂನ ತಯಾರಿಸಲು ಕೊಬ್ಬರಿ ಎಣ್ಣೆಗಾಗಿ ತೆಂಗಿನಕಾಯಿ ಪೂರಯಿಸಹತ್ತಿದೆ.

ನಾನೊಮ್ಮೆ ತ್ರಾವಣಕೋರಿಗೆ ಹೋದಾಗ ಅಲ್ಲಿ ಚಾಪೆ ಹೆಣೆಯುತಿದ್ದ ಮುದುಕನೊಬ್ಬನನ್ನು ಭೆಟ್ಟಿಯಾದೆ. ಅವನನ್ನು ಮಾತಾಡಿಸಿದ ಬಳಿಕ ನಾನೊಬ್ಬ ದೊಡ್ಡ ಮನುಷ್ಯನಿರಬೇಕು, ನನ್ನಿಂದ ತನ್ನ ಬಡತನ ಹಿಂಗಬಹುದೆಂದು ಬಗೆದು ಅವನು ಅಗ್ರಹಪಟ್ಟು ನನ್ನನ್ನು ತನ್ನ ಮನೆಗೆ ಕರೆದೊಯ್ದ. ನನ್ನ ಜೊತೆಯಲ್ಲಿ ಇನ್ನಿಬ್ಬರಿದ್ದರು. ಮೂವರನ್ನೂ ಆಸನದ ಮೇಲೆ ಕುಳ್ಳಿರಿಸಿದ. ನನ್ನ ಸದ್ಯದ ಬಡತನಕ್ಕೆ ಕಾರಣವೇನು ಅದರ ಪರಿಹಾರೋಪಾಯವನ್ನು ತಿಳಿಸುವಿರಾ ಎಂದು ನನ್ನನ್ನು ಮತ್ತೆ ಮತ್ತೆ ಪ್ರಶ್ನಿಸಿದ. ಅವನ ಮನೆತನದ ಕತೆಯನ್ನೆಲ್ಲ ನಾನು ಕೇಳಿದೆ. ಹಿಂದೆ ಸುಸ್ಥಿತಿಯಲ್ಲಿದ್ದ ಅವನ ಮನೆತನವಿಂದು ಮುರುಕುಳ ಸ್ಥಿತಿಗೆ ಬಂದಿದೆ. ನಾವು ಕುಳಿತ ಚಾಪೆಗಳನ್ನು ಹೆಣೆದವರಾರು ಎಂದು ನಾನು ಕೇಳಿದೆ. ನನ್ನ ಜೊತೆಗಾರರಿಗಾಗಿ ಮಂಡಿಸಿದ ಚಾಪೆಗಳನ್ನು ಆ ಮುದುಕನೆ ಹೆಣೆದಿದ್ದನು. ಆದರೆ ನನಗಾಗಿ ಮಂಡಿಸಿದ್ದ ಮೆತ್ತನ್ನ ಚಾಪೆಯು ಜಪಾನಿನದು. ತಾವು ದೊಡ್ಡ ಮನುಷ್ಯರು. ಹುರುಬುರುಕ ಚಾಪೆಯಲ್ಲಿ ಕೂಡ್ರಲಿಕ್ಕಿಲ್ಲ ಎಂದು ಜಪಾನಿ ಚಾಪೆಯನ್ನು ತಮಗಾಗಿ ಮಂಡಿಸಿದೆ ಎಂದು ಅವನು ನನಗೆ ಹೇಳಿದನು. ಇದೇ ನಿನ್ನ ಬಡತನಕ್ಕೆ ಕಾರಣ; ನೀನು ಸ್ವತಃ ತಯಾರ ಮಾಡಿದ ಚಾಪೆಯನ್ನು ಉಪಯೋಗಿಸದೆ ಜಪಾನದ ಚಾಪೆಗೆ ಮನಸೋತದ್ದರಿಂದಲೆ ನಿಮ್ಮ ಹೋರೆ ಹಾಳಾಗಿ ನೀವಿಂದು ಬಡವರಾಗಿರುವಿರೆಂದು ನಾನು ಹೇಳಿದೆ. ಎಲ್ಲ ಸಂದರ್ಭಗಳಲ್ಲಿಯೂ ಈ ಮಾತು ಅನ್ವಯಿಸುತ್ತದೆ. ಗ್ರಾಮೋದ್ಯೋಗಗಳಿಂದ ನಮಗೆ ಶಕ್ತಿ ಬರುತ್ತದೆ. ಹೀಗಿದ್ದರೂ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನೆ ಕೊಡಲು ನಾವೇ ಸಿದ್ಧರಿಲ್ಲ. ಗ್ರಾಮೋದ್ಯೋಗಾಭಿವೃದ್ಧಿ ಮಂಡಲದ ಅಧ್ಯಕ್ಷ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ನನಗೊಂದು ಕಾಗದ ಬರೆದಿದ್ದರು. ಅದು ಸ್ವೀಡನ್‌ದ ಕಾಗದದಲ್ಲಿ ಇದ್ದಿತು, ಅದರ ಮೇಲ್ಹೊದಿಕೆಯಾದರೊ ಲಂಡನದ್ದಾಗಿದ್ದಿತು. ಗ್ರಾಮಾಭಿವೃದ್ಧಿ ಶಾಖೆಯ ಮುಖ್ಯಾಧಿಕಾರಿಗಳೆ ಗ್ರಾಮೋದ್ಯೋಗಗಳಿಗೆ ಇಂತು ಪ್ರೋತ್ಸಾಹನೆ ಕೊಟ್ಟರೆ ಅವೆಂತು ಉರ್ಜಿತ ಹೊಂದಬೇಕು? ಇದೆಲ್ಲದರಲ್ಲಿ ನಮ್ಮ ಮನೋವೃತ್ತಿ ಬದಲಾಗಬೇಕು. ಅಂದರೇನೇ ನಮ್ಮ ದೇಶ ಅಭಿವೃದ್ಧಿ ಹೊಂದುವದು.

ಜೀವನ ಶಿಕ್ಷಣವೆಂದರೇನು ?

ಧಾರವಾಡದಲ್ಲಿ ಪದವೀಧರರ ಮೂಲ ಶಿಕ್ಷಣ ಕೇಂದ್ರದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಡಾ. ಜೆ. ಸಿ. ಕುಮಾರಪ್ಪನವರು ಈ ರೀತಿಯಾಗಿ ಉತ್ತರಿಸಿದರು. ಮೂಲ ಶಿಕ್ಷಣವನ್ನು ನೋಡುವ ದೃಷ್ಟಿ ಇಬ್ಬಗೆಯಾಗಿದೆ. ಮೊದಲನೆಯದು ಭೌತಿಕದೃಷ್ಟಿ, ಎರಡನೆಯದು ಮಾನವತಾದೃಷ್ಟಿ. ಮೊದಲನೆಯದು ಪಾಶ್ಚಾತ್ಯರಿಂದ ಬಂದುದು. ಅದು ಮಾನವರನ್ನು ಉಚ್ಚ ಸಾಂಸ್ಕೃತಿಕ ಮಟ್ಟಕ್ಕೆ ಒಯ್ಯಲಾರದು. ಮಾನವತೆಯ ದೃಷ್ಟಿಯು ನಮ್ಮ ಸಂಸ್ಕೃತಿಗೆ ಒಗ್ಗುವಂತಹದು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಮೂಲ ಶಿಕ್ಷಣವು ಮಾನವತೆಯ ದೃಷ್ಟಿಯಿಂದ ಒಡಗೂಡಿದಂತಹದು ಎಂಬುದು ಗೊತ್ತಾಗುವದು. ಇದು ನೈಸರ್ಗಿಕವಾಗಿದೆ. ಮಗುವಿನ ಕೃತಿಯನ್ನು ಇದು ಆಧರಿಸಿ ನಿಂತಿದೆ. ಮಗುವಿನ ಸುಪ್ತಶಕ್ತಿಗಳನ್ನು ಚೇತರಿಸಿ ಅದರ ಸುಂದರವಿಕಾಸಕ್ಕೆ ಇದರಿಂದ ಅವಕಾಶ ಸಿಕ್ಕುವಲ್ಲಿ ಸಂದೇಹವಿಲ್ಲ. ಒಂದು ಕೈಗಾರಿಕೆಯ ಮುಖಾಂತರ ಮಗುವು ಅನೇಕ ವಿಷಯಗಳನ್ನು ಅರಿತುಕೊಳ್ಳುತ್ತದೆ. ಆದರೆ ಕೇಂದ್ರೀಕೃತ ಉದ್ಯೋಗಗಳು ಮಗುವಿನ ವಿಕಾಸಕ್ಕೆ, ಅದರ ವ್ಯಕ್ತಿತ್ವದ ಅಭಿವೃದ್ಧಿಗೆ ಇಂಬುಗೊಡುವದಿಲ್ಲ. ಏಕೆಂದರೆ ಅದು ಯಂತ್ರೋಪಾದಿಯಲ್ಲಿ ನಡೆಯುತ್ತದೆ. ಮಗುವಿಗೆ ಒಂದು ಕೃತಿಯನ್ನು ಮಾಡಲು ಕೊಡುವಾಗ ಅದು ಮಗುವಿನ ಕಾಲ್ಪನಿಕ ಶಕ್ತಿಯನ್ನು ವಿಕಾಸಗೊಳಿಸಲು ಇಂಬುಕೊಡುವಂತಹದಿರಬೇಕೆಂಬವನ್ನು ಮರೆಯಬಾರದು. ಈ ದೃಷ್ಟಿಯಿಂದ ಮೂಲ ಶಿಕ್ಷಣವು ಮಾನಸಿಕ ವಿಕಾಸಕ್ಕೂ ಇಂಬುಕೊಡುವದೆಂಬುದು ಕಂಡುಬರುತ್ತದೆ.

ನೀವು ಕಾಳು ತುಂಬಿದ ತೆನೆಗಳ ಭಾರವನ್ನು ಚಕ್ಕಡಿಯ ಮುಖಾಂತರ ಒಯ್ಯುವ ಬಸವರಾಗ ಬೇಕೇ ವಿನಾ ಹೆಂಡದ ಚೀಲ ಹೇರಿದ ಚಕ್ಕಡಿಯನ್ನು ಎಳೆಯುವವರಾಗಬಾರದು. ಮೂಲ ಶಿಕ್ಷಣವು ಕಾಳು ತುಂಬಿದ ತೆನೆಗಳುಳ್ಳ ಚಕ್ಕಡಿಯಂತೆ. ಇದರಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಮುಂದಕ್ಕೆ ಸಾಗಿರಿ ಎಂದು ಟ್ರೇನಿಂಗ ಕಾಲೇಜಿನಲ್ಲಿ ಭಾಷಣಮಾಡುತ್ತ ಹೇಳಿದರು.

ನಾನು ಗಾಂಧೀ ಅರ್ಥಶಾಸ್ತ್ರವಾದಿ. ಕಾಲೇಜುಗಳಲ್ಲಿ ದೊರೆಯುವ ಮತ್ತು ಕಲಿಸುವ ಅರ್ಥಶಾಸ್ತ್ರವು ಗಾಂಧೀ ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿದೆ. ಮೊದಲನೆಯದು ಮಹಾರಣ್ಯದಂತಿದೆ. ಅದರಿಂದ ನೀವು ಹೊರಗೆ ಬರಬೇಕು. ಔದ್ಯೋಗೀಕರಣದಿಂದ ಲಾಭವಿಲ್ಲೆಂಬದನ್ನು ನಾವು ಯುರೋಪದಿಂದ ಪಾಠ ಪತ್ರ[illegible]ಕು. ಅವರಿಗೆ ಆಹಾರ ದೊರೆಯುತ್ತವೆಂದರೆ ಈ ರವಾಗ[illegible]ತ್ತಿದೆ. ನಮ್ಮ ಆರ್ಥಿಕ[illegible]ಯುಂದಾಳು ನಾವು ಮೊದಲು ವಿಚಾರಿ[illegible]

ಲಂಬಿಗಳಾಗಬೇಕು [illegible]
ಕೆ ಈ ಬೋರ್ಡ ಕಾಲೇ[illegible]
ಸಂಘದ ಉದ್ಘಾಟನ ಮಾ[illegible]

ಹುಬ್ಬಳ್ಳಿಯ[illegible]

ಅನುರಗೋಳದಲ್ಲಿ ಕಸ್ತೂ[illegible]
ವನ್ನು ಸಂದರ್ಶಿಸಿ ರವಿವಾರ [illegible]
ಹುಬ್ಬಳ್ಳಿ ನಗರ ಸಭೆಗೆ ಬಂದು [illegible]
ಕಾಯ್ದುಕೊಂಡು ಕುಳಿತ್ತ[illegible]
ದ್ದೇಶಿಸಿ ಕುಮಾರಪ್ಪನವರು [illegible]
ದರು.

ರಾಷ್ಟ್ರೀಯ ಮನೋವೃ[illegible]

ನೀವು ಸ್ವಾತಂತ್ರ್ಯೋತ್ಸವ[illegible]
ರುವಿರಿ. ಅದಕ್ಕಾಗಿಯೇ ಇದೆಲ್ಲ[illegible]
ಳನ್ನು ಮಾಡಿದಂತೆ ತೋರುತ್ತ[illegible]
ತವೇನೋ ರಾಜಕೀಯ ಸ್ವಾ[illegible]
ಪಡೆದಿದೆ. ಆರ್ಥಿಕ ಸ್ವಾತಂತ್ರ್ಯ[illegible]
ಪಡೆದಿಲ್ಲ. ಆರ್ಥಿಕ ದೃಷ್ಟಿಯಿಂ[illegible]
ಪರಿಪೂರ್ಣರಾಗಿಲ್ಲ. ನಮ್ಮದು [illegible]
ನಾಡಾಗಿದ್ದರೂ ನಾವು ಹೊರಗಿ[illegible]
ಧಾನ್ಯ ತರಿಸಬೇಕಾಗುತ್ತದೆ. ನ[illegible]
ರಾಷ್ಟ್ರೀಯ ಮನೋವೃತ್ತಿ ಬೆ[illegible]
ನಾನು ಮಾತಾಡುತಿರುವ ಈ ಆ[illegible]
ಇದಕ್ಕೆ ಉದಾಹರಣೆಯೆಂದು [illegible]
ನಾವು ಇಂಗ್ಲೀಷರಿಂದ ಸ್ವಾತ[illegible]
ದ್ದರೂ ಅವರ ಭಾಷೆಯ[illegible]
ವದು ನಮಗಿನ್ನೂ ಅಗಲೊಲ್ಲ[illegible]
ಯರ ಪೋಷಾಕು, ಅವರ [illegible]
ನಾವಿನ್ನೂ ಉಪಯೋಗಿಸುತ್ತಿ[illegible]
ಮುಖ್ಯ ಮಂತ್ರಿಗಳು ಪರದೇ[illegible]
ವಾಗಿ ಅವರಂತ ಪೋಷಾಕು ಹ[illegible]
ಉಡುಪಿನಲ್ಲಿ ಜವಾಹರಲಾಲ[illegible]
ಗೋವೆ ಟು ಅಡಿಗೆಯವನಂತೆ[illegible]
ಹಿಂದೀ ಉಡುಪಿನಲ್ಲಿದ್ದಾಗ [illegible]
ರಂತೆ ಕಾಣುತಿದ್ದರೆ ವಿದೇಶೀಯ[illegible]
ಗೋವೆಯ ಬಟ್ಟರರೇ! ಈ
ಅವರೇಕೆ ಧರಿಸಬೇಕೋ
ಸನಾತನ ಸಂಪ್ರದಾಯದ ಗವ[illegible]
ನನ್ನನ್ನು ಸರಕಾರೀ ಭವನಕ್ಕೆ[illegible]
ಕರೆದಿದ್ದರು. ಅವರು ಸನಾತ[illegible]
ಮಣೆಯಮೇಲೆ ಕೂಡ್ರುಪರಿ[illegible]
ನಾನು ಎಣಿಸಿದ್ದೆ. ಆದರೆ [illegible]
ವನ್ನೇರಿಸಬೇಕೆಂದೋ ಏನೋ [illegible]
ಲ್ಲಿನ ಮೇಲೆಯೆ ಎಲ್ಲ ವ್ಯವಸ್ಥೆ[illegible]
ತಾನಾದರೂ ಸೂಟಿನಲ್ಲಿಯೇ ಬ[illegible]
ಭೋಜನಕ್ಕೆ ಕುಳಿತರು. ಸಾಲ[illegible]
ಚಾಮಿ ಮಾಡಿದರು. ಅಲ್ಲಿ ಮ[illegible]
ಗಳಾದರೆ ಪಾಶ್ಚಾತ್ಯ ಪದ್ಧತಿಯ[illegible]
ಲ್ಲಿ. ಪೌರಸ್ತ್ಯ ಪದ್ಧತಿಯವೂ[illegible]
ಹೀಗೇಕೋ ನನಗೆ ತಿಳಿಯ[illegible]
ನಮ್ಮ ರಾಷ್ಟ್ರೀಯ ಮನೋ[illegible]
ಬೆಳೆಸಿಕೊಳ್ಳದಿದ್ದರೆ [illegible]
ಸ್ವಾತಂತ್ರ್ಯವು ವ್ಯರ್ಥವಾಗುವ[illegible]
ಪ್ರಸಂಗದಲ್ಲಿಯೂ ನಾವು ಸ್ವ[illegible]
ಗಳನ್ನೇ ಉಪಯೋಗಿಸಬೇಕೆಂದ[illegible]
ಜ್ಞರಾಗುವಾ. ಯುದ್ಧ ಸಮಯ[illegible]
ದಲ್ಲಿ ಬ್ರಿಟಿಶ್ ಟಾಯಿಪರಾಯಿಟ[illegible]
ದಿರುವಾಗ ಹರಕು ಮುರುಕ[illegible]
ಗಳಿಂದಲೆ ಅವರು ಕೆಲಸ ಸಾ[illegible]
ರೆಮಿಂಗ್ಟನ ಮೊದಲಾದ ಪರದೇ[illegible]
ಗಳಿಗಾಗಲಿ, ಕಾರ್ಬನ್ ಪೇಪ[illegible]
ಅವರು ಹೋಗಲಿಲ್ಲ. ನಮ್ಮಲ್ಲಿಯೂ[illegible]
ಮನೋವೃತ್ತಿ ಬರಬೇಕು. ಸಿಲೋ[illegible]
ಹೋದಾಗ ನಾವು ಸ್ವಾತಂತ್ರ್ಯವ[illegible]
ಪಡೆಯಬಲ್ಲೆವು ಎಂದು ಅಲ್ಲಿಯ [illegible]
ನನಗೆ ಕೇಳಿದರು. ಆಗ ನಾನು [illegible]
ಬೆಳೆಯುವದೇನು ಎಂದು ಕೇಳಿದ[illegible]
ಮತ್ತು ಚಹಾ ಎಂದು ಹೇಳಿದರು[illegible]
ತಿಂದು ಚಹಾದ ಎಲೆಗಳಿಂದ ನಿಮ್ಮ[illegible]
ಮರ್ಯಾದೆಯನ್ನು ಮುಚ್ಚಿರಿ ಎ[illegible]
ವರಿಗೆ ಅಣಕವಾಗಿ ಹೇಳಿದೆ. ಆಹಾ[illegible]
ಆಶ್ರಯದಲ್ಲಿ ಸ್ವತಂತ್ರರಾಗಿ [illegible]
ಸ್ವಾತಂತ್ರ್ಯದ ಜೊತೆಗೆ ಆರ್ಥಿಕ ಸ[illegible]
ವನ್ನೂ ಪಡೆದು ದೇಶವನ್ನು ಸುಖ[illegible]
ಮಾಡುವ ಅವಶ್ಯಕತೆಯನ್ನು ಅವ[illegible]
ಪಾದಿಸಿದೆ. ನಾವು ಅನುಸರಿಸಬೇಕ[illegible]
ಒಂದು ಇದೇ ಆಗಿದೆ. ಆಹಾರ ಪದಾ[illegible]
ನಾವು ಸ್ವಾವಲಂಬಿಗಳಾಗುವದಕ್ಕೆ[illegible]
ಬಗೆಯ ಗ್ರಾಮ ಕೈಗಾರಿಕೆಗಳಿಗ[illegible]
ಪ್ರೋತ್ಸಾಹನೆ ಕೊಡಬೇಕು. ಸ್ವತಃ ಆ[illegible]
ಉಪಯೋಗಿಸಬೇಕು ಅಂದರೇನೇ[illegible]
ಸ್ವಾತಂತ್ರ್ಯ ನಮಗೆ ದೊರೆವುದು [illegible]
[illegible]ರ್ಣವಾಗಿ ಕುಮಾರಪ್ಪನವರು ಪ್ರತಿ[illegible]
ಪಿದ್ಧಾರಿ ಎಂಬ ಧ್ಯೇಯ[illegible]
ಮಾಡ[illegible]ನ [illegible]ಸಿದರು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರ[illegible]